ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 9 ಬುಧವಾರ 2024

₹4

ಸಂಪುಟ: 45 | ಸಂಚಿಕೆ: 174 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ **Ph:** 2431774, ಡಿ.ದೇವರಾಜ ಅರಸು ರಸ್ತೆ, **Ph:** 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

ಇಂದು ಮೈಸೂರಿಗೆ 2ನೇ ಹಂತದ ಹೆಚ್ಚುವರಿ ಪೊಲೀಸ್ ಪಡೆ



ಮೈಸೂರು, ಅ. 8(ಆರ್‌ಕೆ)– ಹೊರ ಜಿಲ್ಲೆಗಳ 2ನೇ ಹಂತದ ಹೆಚ್ಚುವರಿ ದಸರಾ ಬಂದೋಬಸ್ತ್ ಸಿಬ್ಬಂದಿ ನಾಳೆ (ಅ.9) ಮೈಸೂರಿಗೆ ಆಗಮಿಸುವರು.

ದಸರಾ ವಿಶೇಷ ಬಂದೋಬಸ್ತ್ ಕರ್ತವ್ಯಕ್ಕೆ ನಿಯೋಜನೆಗೊಂಡಿರುವ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಮೈಸೂರಿನ ಲಷ್ಕರ್, ಮಂಡಿ, ವಿವಿ, ದೇವರಾಜ, ಕೆಆರ್ ಮೊಹಲ್ಲಾ, ನಜರ್‌ಬಾದ್, ವಿಜಯನಗರ, ಹೆಬ್ಬಾಳು, ಮೇಟಗಳ್ಳಿ, ಪೊಲೀಸ್ ಠಾಣಾ ವ್ಯಾಪ್ತಿಯ ಸಮುದಾಯ ಭವನ, ವಿದ್ಯಾರ್ಥಿನಿಲಯ, ಕಲ್ಯಾಣ ಮಂಟಪ, ವಸತಿ ಗೃಹಗಳಲ್ಲಿ ವಸತಿ ಸೌಲಭ್ಯ ಕಲ್ಪಿಸಿದ್ದು, ಲಲಿತಮಹಲ್ ರಸ್ತೆಯ ಪೊಲೀಸ್ ಭವನದಲ್ಲಿ ಅಡುಗೆ ತಯಾರಿಸಿ ಊಟ–ತಿಂಡಿಯನ್ನು ಪೊಲೀಸ್ ಸಿಬ್ಬಂದಿ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳಗಳಿಗೆ ರವಾನಿಸಲಾಗುತ್ತಿದೆ.

ಈಗಾಗಲೇ ಅಧಿಕಾರಿಗಳು ಸೇರಿ ಸುಮಾರು 3,500 ಮಂದಿ ಪೊಲೀಸರು ಮೈಸೂರು ತಲುಪಿದ್ದು ದಸರಾ ಮಹೋತ್ಸವ ಕಾರ್ಯಕ್ರಮಗಳ ಬಂದೋಬಸ್ತ್ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ನಾಳೆ (ಅ. 9) ಒಂದೂವರೆ ಸಾವಿರ ಮಂದಿ ಪೊಲೀಸರು ಹೊರ ಜಿಲ್ಲೆಗಳಿಂದ ಆಗಮಿಸುತ್ತಿದ್ದು, ಸಿಎಆರ್ ಮೈದಾನದಲ್ಲಿ ಅವರಿಗೆ ದಸರಾ ಜಂಬೂಸವಾರಿ ಮೆರವಣಿಗೆ ಮತ್ತು ಪಂಜಿನ ಕವಾಯತು ಪ್ರದರ್ಶನದ ಭದ್ರತಾ ಕರ್ತವ್ಯ ನಿರ್ವಹಿಸುವ ಕುರಿತಂತೆ ಹಿರಿಯ ಪೊಲೀಸ್ ಅಧಿಕಾರಿಗಳು ವಿವರಿಸಲಿದ್ದಾರೆ.

ಹರಿಯಾಣದಲ್ಲಿ ಬಿಜೆಪಿ ಜಯಭೇರಿ ಹಿನ್ನೆಲೆ
ಮೈಸೂರು ಬಿಜೆಪಿ ಕಚೇರಿ ಮುಂದೆ ಸಂಭ್ರಮಾಚರಣೆ



ಮೈಸೂರಿನ ಬಿಜೆಪಿ ಕಚೇರಿ ಮುಂಭಾಗ ಕಾರ್ಯಕರ್ತರು, ಮುಖಂಡರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು. ಶಾಸಕ ಟಿ.ಎಸ್.ಶ್ರೀವತ್ಸ, ನಗರಾಧ್ಯಕ್ಷ ಎಲ್.ನಾಗೇಂದ್ರ, ಗ್ರಾಮಾಂತರ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಇನ್ನಿತರರಿದ್ದಾರೆ.

ಮೈಸೂರು, ಅ.8(ಜಿಎ)–ಹರಿಯಾಣ ವಿಧಾನಸಭೆಯಲ್ಲಿ ಭಾರತೀಯ ಜನತಾ ಪಾರ್ಟಿ ಜಯಭೇರಿ ಬಾರಿಸಿದ ಹಿನ್ನೆಲೆಯಲ್ಲಿ ಮೈಸೂರಿನ ಬಿಜೆಪಿ ಕಚೇರಿ ಮುಂಭಾಗ ಕಾರ್ಯಕರ್ತರು, ಮುಖಂಡರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಾಚರಣೆ ಮಾಡಿದರು.

ಈ ವೇಳೆ ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಕಳೆದ ರಾತ್ರಿವರೆಗೂ ಮಾಧ್ಯಮಗಳ ಸಮೀಕ್ಷೆಗಳು ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲ್ಲಲಿದೆ ಎಂದು ಹೇಳಿದ್ದವು. ಆದರೆ, ಹರಿಯಾಣದ ಚುನಾವಣೆ ಪ್ರಚಾರದಲ್ಲಿ ಪ್ರಧಾನಿ ಮೋದಿ ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಮುಡಾ ಹಗರಣ, ನಾಗಮಂಗಲದ ಗಣಪತಿ ಗಲಾಟೆಯ ಬಗ್ಗೆ ಪ್ರಸ್ತಾಪಿಸಿದ್ದರು. ಇದರಿಂದ ಹಿನ್ನಡೆ ಇದ್ದ ಕ್ಷೇತ್ರದಲ್ಲಿ ಜನರು ಉತ್ತಮ ಪ್ರತಿಕ್ರಿಯೆ ನೀಡಿದ್ದಾರೆ. ಮುಂದಿನ ಚುನಾವಣೆಗಳಲ್ಲಿ ಕಾಂಗ್ರೆಸ್ ನೆಲೆ ಕಳೆದುಕೊಳ್ಳಲಿದೆ ಎಂದರು.

ರಾಜ್ಯದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ ಹಾಗೂ ಕರ್ನಾಟಕ ಮುಖ್ಯಮಂತ್ರಿಗಳ ಬಗ್ಗೆ ಮಾತನಾಡಿದ್ದಕ್ಕೆ ಹರಿಯಾಣದಲ್ಲಿ ಗೆಲುವು ಸಾಧಿಸಿದ್ದೇವೆ. ಮಹಾರಾಷ್ಟ್ರದಲ್ಲಿ ಕಾಂಗ್ರೆಸ್ ಏನಾಗಲಿದೆ ಎಂದು ಗೋಚರಿಸುತ್ತಿದೆ. ಹರಿಯಾಣದ ಹ್ಯಾಟ್ರಿಕ್

ಸಿಎಂ ಮುಡಾ ಹಗರಣ, ನಾಗಮಂಗಲ ಗಣಪತಿ ಗಲಾಟೆ ಗೆಲುವಿಗೆ ಕಾರಣ

ಗೆಲುವಿಗೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿಯ ಅಧ್ಯಕ್ಷ ಜೆ.ಪಿ.ನಡ್ಡಾ ಮೂಲ ಕಾರಣ ಎಂದು ತಿಳಿಸಿದರು.

ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಖಂಡಿತವಾಗಿ ಮುಖ್ಯಮಂತ್ರಿ ಬದಲಾಗಬೇಕು. ಅದಕ್ಕೆ ಹರಿಯಾಣ ಚುನಾವಣೆಯ ಫಲಿತಾಂಶ ದಿಕ್ಸೂಚಿ ಆಗಿದೆ. ಈಗಾಗಲೇ ಮುಖ್ಯಮಂತ್ರಿ ಬದಲಾವಣೆ ಕುರಿತು ಕಾಂಗ್ರೆಸ್‌ನಲ್ಲಿ ಆಂತರಿಕವಾಗಿ ಚರ್ಚೆಯಾಗುತ್ತಿದೆ ಎಂದರು.

ಈ ವೇಳೆ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಗ್ರಾಮಾಂತರ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ವಕ್ತಾರ ಮಹೇಶ್, ರಘು, ಕೇಬಲ್ ಮಹೇಶ್, ಎಂ.ಜೆ.ಕಿರಣ್‌ಗೌಡ, ಲೋಹಿತ್, ಜೋಗಿ ಮಂಜು, ಮಹೇಶ್‌ರಾಜೇ ಅರಸ್ ಸೇರಿದಂತೆ ಕಾರ್ಯಕರ್ತರು ಪಾಲ್ಗೊಂಡಿದ್ದರು.

ಬೀದರ್‌ನಲ್ಲಿ ದ್ವಿಚಕ್ರ ವಾಹನಕ್ಕೆ ಬಸ್ ಡಿಕ್ಕಿ; ಕುಟುಂಬದ ನಾಲ್ವರ ದುರ್ಮರಣ



ಬೀದರ್: ಬೀದರ್ ಹಾಗೂ ತೆಲಂಗಾಣದ ಗಡಿಯ ಒಂದು ಕಿಲೋಮೀಟರ್ ಅಂತರದಲ್ಲಿರುವ ಗಣೇಶಪುರದ ಬಳಿ ಭೀಕರ ಅಪಘಾತ ಸಂಭವಿಸಿದೆ. ಕೆಎಸ್‌ಆರ್‌ಟಿಸಿ ಬಸ್ ಹಾಗೂ ಬೈಕ್ ಮುಖಾಮುಖಿ ಡಿಕ್ಕಿಯಾಗಿದ್ದು ಒಂದೇ ಕುಟುಂಬದ ನಾಲ್ವರು ಸಾವನ್ನಪ್ಪಿದ್ದಾರೆ.

ತೆಲಂಗಾಣ ರಾಜ್ಯದ ಸಂಗಾರೆಡ್ಡಿ ಜಿಲ್ಲೆಯ ಗಣೇಶಪುರ ಗ್ರಾಮದವರಾಗಿದ್ದಾರೆ. ಬೈಕ್‌ನಲ್ಲಿ ಜಮೀನಿನ ಕೆಲಸ ಮುಗಿಸಿಕೊಂಡು ಮನೆಗೆ ವಾಪಸ್ ಆಗುತ್ತಿದ್ದರು. ಈ ವೇಳೆ ಹೈದರಾಬಾದ್‌ನಿಂದ ಬೀದರ್ ಕಡೆಗೆ ಬರುತ್ತಿದ್ದ ಸಾರಿಗೆ ಬಸ್‌ಗೆ ಡಿಕ್ಕಿಯಾಗಿದೆ. ಗಣೇಶಪುರದ ಸಿದ್ದರಾಮಪ್ಪ (71), ಅವರ ಪುತ್ರಿ ರೇಣುಕಾ (36), ಅಳಿಯ ಜಗನ್ನಾಥ್ (41) ಮತ್ತು ಮೊಮ್ಮಗ ವಿನಯ್ ಕುಮಾರ್ (15) ಮೃತರು. ಅಪಘಾತದ ಬಳಿಕ ಬಸ್ ಬಿಟ್ಟು ಚಾಲಕ ಹಾಗೂ ನಿರ್ವಾಹಕ ಪರಾರಿಯಾಗಿದ್ದಾರೆ. ಸಿದ್ದರಾಮಪ್ಪ ಸ್ಥಳದಲ್ಲೇ ಸಾವನ್ನಪ್ಪಿದ್ದು, ಉಳಿದ ಮೂವರು ಬೀದರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಿಸದೆ ಅಸುನೀಗಿದ್ದಾರೆ. ಘಟನೆ ಸಂಬಂಧ ಹದ್ನೂರು ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ. ಮೂವರ ಮೃತದೇಹವನ್ನು ಬೀದರ್‌ನ ಬ್ರಿಮ್ಸ್ ಶವಾಗಾರಕ್ಕೆ ರವಾನಿಸಲಾಗಿದೆ. ಆಸ್ಪತ್ರೆ ಬಳಿ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ.

ಹರ್ಯಾಣ ಚುನಾವಣೆ: ಮಾಜಿ ಕುಸ್ತಿಪಟು ವಿನೇಶ್ ಫೋಗಟ್‌ಗೆ ಚೊಚ್ಚಲ ಗೆಲುವು



ಚಂಡೀಗಢ, ಅ.8– ಹಲವು ಅಚ್ಚರಿ ಮತ್ತು ತಿರುವುಗಳನ್ನು ಕಂಡ ಹರ್ಯಾಣ ವಿಧಾನಸಭೆ ಚುನಾವಣೆ ಫಲಿತಾಂಶದಲ್ಲಿ ಒಲಿಂಪಿಕ್ ಸ್ಪರ್ಧಿ, ಮಾಜಿ ಕುಸ್ತಿಪಟು ಜುಲಾನಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವಿನೇಶ್ ಫೋಗಟ್ ಜಯ ಗಳಿಸಿದ್ದಾರೆ.

ವಿನೇಶ್ ಫೋಗಟ್ ಅವರು ಜುಲಾನಾ ಕ್ಷೇತ್ರದಲ್ಲಿ ತಮ್ಮ ಎದುರಾಳಿ ಸ್ಪರ್ಧಿ ಬಿಜೆಪಿ ಅಭ್ಯರ್ಥಿ ಯೋಗೇಶ್ ಬೈರಾಗಿ ವಿರುದ್ಧ 6 ಸಾವಿರಕ್ಕೂ ಹೆಚ್ಚು ಮತಗಳಿಂದ ಗೆಲುವು ಸಾಧಿಸಿದ್ದಾರೆ.

ಒಲಿಂಪಿಕ್ಸ್‌ನಿಂದ ರಾಜಕೀಯಕ್ಕೆ ವಿನೇಶ್ ಜಿಗಿತ: 2024ರ ವರ್ಷವು ಭಾರತೀಯ ಕುಸ್ತಿಪಟು ವಿನೇಶ್ ಫೋಗಟ್‌ಗೆ ರೋಲರ್ ಕೋಸ್ಟರ್ ಎಂದು ಸಾಬೀತಾಯಿತು. ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲಲು ವಿಫಲವಾದ ನಂತರ, ಫೋಗಟ್ ರಾಜಕೀಯಕ್ಕೆ ಕಾಲಿಟ್ಟರು. ಜಿಂದ್ ಜಿಲ್ಲೆಯ ಜುಲಾನಾ ಕ್ಷೇತ್ರದಿಂದ ಸ್ಪರ್ಧಿಸಿದ್ದರು.

ವಿಧಾನಸಭಾ ಚುನಾವಣೆಯಲ್ಲಿ ವಿನೇಶ್ ಅವರ ಎದುರಾಳಿ, ಯೋಗೇಶ್ ಬೈರಾಗಿ ಒಂಬತ್ತು ವರ್ಷಗಳ ಕಾಲ ಭಾರತೀಯ ಸೇನೆಯಲ್ಲಿ ಕ್ಯಾಪ್ಟನ್ ಆಗಿ ಸೇವೆ ಸಲ್ಲಿಸಿದ್ದರು. ಹರಿಯಾಣ ಬಿಜೆಪಿ ಯುವ ಘಟಕದ ಅಧ್ಯಕ್ಷರಾಗಿದ್ದಾರೆ.

ಕುಸ್ತಿಪಟು ವಿನೇಶ್ ಫೋಗಟ್ ಅವರು 2024ರ ಒಲಿಂಪಿಕ್ಸ್‌ನಲ್ಲಿ 150 ಗ್ರಾಂ ಅಧಿಕ ತೂಕದ ಕಾರಣಕ್ಕಾಗಿ ಮಹಿಳೆಯರ 50–ಕಿಲೋಗ್ರಾಂ ಫ್ರೀಸ್ಟೈಲ್ ಕುಸ್ತಿ ವಿಭಾಗದಿಂದ ಅನರ್ಹರಾಗಿದ್ದರು. ಇದು ಅವರಿಗೆ ಕಹಿ ಆಘಾತವನ್ನುಂಟು ಮಾಡಿತ್ತು, ಒಲಿಂಪಿಕ್ಸ್ ಪದಕ ಗೆಲ್ಲುವ ಕನಸನ್ನು ನುಚ್ಚುನೂರು ಮಾಡಿತ್ತು. ನಂತರ ವಿನೇಶ್ ಕಾಂಗ್ರೆಸ್ ಪಕ್ಷವನ್ನು ಸೇರ್ಪಡೆಯಾಗಿ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಿದರು. ನಾನು ಹೊಸ ಇನ್ನಿಂಗ್ಸ್ ಪ್ರಾರಂಭಿಸುತ್ತಿದ್ದೇನೆ. ನಾನು ಎದುರಿಸಿದ ಅನುಭವವನ್ನು ಬೇರೆ ಕ್ರೀಡಾಪಟುಗಳು ಎದುರಿಸಬಾರದು ಎಂಬುದು ನನ್ನ ಆಸೆಯಾಗಿದೆ. ಕಳೆದ ವರ್ಷ ಫೋಗಟ್, ಬಿಜೆಪಿ ಸಂಸದರಾಗಿದ್ದ ಬ್ರಿಜ್ ಭೂಷಣ್ ವಿರುದ್ಧ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು.

ಉದ್ಯಮಿ ಮುಮ್ತಾಜ್ ಅಲಿ ಆತ್ಮಹತ್ಯೆ ಪ್ರಕರಣ: 'ಹನಿ'ಯ 'ಮನಿ'ಟ್ರ್ಯಾಪ್

ದಕ್ಷಿಣ ಕನ್ನಡ, ಅ.8– ನದಿಗೆ ಹಾರಿ ಮಾಜಿ ಶಾಸಕ ಮೊಯಿದ್ದೀನ್ ಬಾವಾ ಸೋದರ ಉದ್ಯಮಿ ಮುಮ್ತಾಜ್ ಅಲಿ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇರಳಕ್ಕೆ ಪರಾರಿಯಾಗಿದ್ದ ಎ1 ಆರೋಪಿ ಆಯಿಷಾ ಅಲಿಯಾಸ್ ರೆಹಮತ್, ಇತರೆ ಆರೋಪಿಗಳಾದ ಶೊಹೇಬ್ ಮತ್ತು ಸಿರಾಜ್‌ನನ್ನು ಇಂದು(ಮಂಗಳವಾರ) ಕಲ್ಲಡ್ಕ ಬಳಿ ಮಂಗಳೂರು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಇದೀಗ ಪ್ರಕರಣದ ಮಾಸ್ಟರ್ ಮೈಂಡ್ ಆಗಿರುವ ಎ2 ಆರೋಪಿ ಅಬ್ದುಲ್ ಸತ್ತಾರ್‌ಗಾಗಿ ಶೋಧ ನಡೆದಿದೆ.

ಘಟನೆ ವಿವರ: ಮೊನ್ನೆ(ಅ.6) ಮಂಗಳೂರು ಉತ್ತರ ಕ್ಷೇತ್ರದ ಮಾಜಿ ಶಾಸಕ ಮೊಯಿದ್ದೀನ್ ಬಾವಾ ಸೋದರ ಮುಮ್ತಾಜ್ ಅಲಿ ನಾಪತ್ತೆ ಆಗಿದ್ದು, ನಗರದ ಕೂಳೂರು ಬ್ರಿಡ್ಜ್ ಮೇಲೆ ಡ್ಯಾಮೇಜ್ ಆದ ಸ್ಥಿತಿಯಲ್ಲಿ ಅವರ ಕೆಎ19 ಎಂಜಿ0004 ಸಂಖ್ಯೆಯ BMW X5 ಕಾರು ಪತ್ತೆ ಆಗಿತ್ತು. ಅದರಂತೆ ಮಂಗಳೂರಿನ ಕುಳೂರಿನ ಫಲ್ಗುಣಿ ನದಿಯಲ್ಲಿ ಸತತ ಮೂವತ್ತು ಗಂಟೆಗಳ ಕಾರ್ಯಾಚರಣೆಯ ಬಳಿಕ ಮುಮ್ತಾಜ್ ಮೃತದೇಹ, ಹುಡುಕಾಟದಲ್ಲಿದ್ದ ಸ್ಥಳೀಯ ಮೀನುಗಾರರಿಗೆ ಸಿಕ್ಕಿತ್ತು.

ಮೃತದೇಹ ಪತ್ತೆಯಾಗುತ್ತಿದ್ದಂತೆ ಮೊಯಿದ್ದೀನ್ ಬಾವ ಮತ್ತು ಸಂಬಂಧಿಕರ ಆಕ್ರಂದನ ಮುಗಿಲು ಮುಟ್ಟಿತ್ತು. ತಮ್ಮನ ಮೃತದೇಹ ಕಂಡು ಬಾವಾ ಗೋಳಾಡಿದರೆ, ಸಂಬಂಧಿಕರು ಕಣ್ಣೀರಿಟ್ಟರು. ಶವವನ್ನು ಮೇಲಕ್ಕೆತ್ತಿದ ಬಳಿಕ ಮಂಗಳೂರು ನಗರದ ಖಾಸಗಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ಮಾಡಿ, ನಂತರ ಕೃಷ್ಣಾಪುರ ಮಸೀದಿಯಲ್ಲಿ ಅವರನ್ನು ದಫನ್ ಮಾಡಲಾಯಿತು.

ಇನ್ನು ಮುಮ್ತಾಜ್ ಆಲಿಗೆ ಆತ್ಮಹತ್ಯೆ ಮಾಡಿಕೊಳ್ಳಲು ಮಹಿಳೆಯನ್ನು ಉಪಯೋಗಿಸಿ ಮಾಡಿದ ಬ್ಲ್ಯಾಕ್ ಮೇಲ್ ಕಾರಣ ಎಂದು ಅಲಿ ಕುಟುಂಬಸ್ಥರು ಆರೋಪಿಸಿದ್ದರು. ಈ ಬಗ್ಗೆ ಮುಮ್ತಾಜ್ ಅಲಿ ತಮ್ಮ ಹೈದರ್ ಅಲಿ ಕಾವೂರು ಪೊಲೀಸ್ ಠಾಣೆಯಲ್ಲಿ ಓರ್ವ ಮಹಿಳೆ ಸೇರಿದಂತೆ ಆರು ಮಂದಿಯ ಮೇಲೆ ದೂರು ನೀಡಿದ್ದರು. ಆಯಿಷಾ ಎಂಬ ಮಹಿಳೆಯನ್ನು ಬಳಸಿಕೊಂಡು ಆತ್ಮಹತ್ಯೆಗೆ ಪ್ರಚೋದನೆ ನೀಡಲಾಗಿದೆ. ಆರು ಮಂದಿಯ ತಂಡ ಬ್ಲ್ಯಾಕ್ ಮೇಲ್ ಮಾಡಿದೆ ಎಂದು ದೂರಿನಲ್ಲಿ ಉಲ್ಲೇಖಿಸಿದ್ದರು. ಈ ಸಂಬಂಧ ಕಾವೂರು ಠಾಣೆಯಲ್ಲಿ ರೆಹಮತ್, ಅಬ್ದುಲ್ ಸತ್ತಾರ್, ಶಾಫಿ, ಮುಸ್ತಫಾ, ಶೋಯೆಬ್ ಮತ್ತು ಮುಮ್ತಾಜ್ ಅಲಿ ಕಾರು ಚಾಲಕ ಸಿರಾಜ್ ವಿರುದ್ಧ ಪ್ರಕರಣ ದಾಖಲಾಗಿತ್ತು. ಈ ಕುರಿತು ತನಿಖೆ ಕೈಗೊಂಡಿದ್ದ ಮಂಗಳೂರು ಸಿಸಿಬಿ ಪೊಲೀಸರು ಇಂದು ಮೂವರನ್ನು ಬಂಧಿಸಿದ್ದಾರೆ.

ರಾಜನಾಯಕ್‌ಗೆ ಅಭಿನಂದನೆ



ರಾಜ್ಯ ಹಣಕಾಸು ಇಲಾಖೆಯಿಂದ ಮೈಸೂರು ವಿವಿಯ ಸಹಾಯಕ ಹಣಕಾಸು ಅಧಿಕಾರಿಯಾಗಿ ನೇಮಕಗೊಂಡ ರಾಜನಾಯಕ್ ಅವರಿಗೆ ಮೈಸೂರು ವಿವಿ ಬಳಗದಿಂದ ಅಭಿನಂದಿಸಲಾಯಿತು. ಮೈವಿವಿ ಪ್ರಸಾದ್, ಎಸ್.ಚಂದ್ರು, ಎಂ.ಸಿ. ಪ್ರವೀಣ್‌ಕುಮಾರ್, ಕೆ.ವಿ.ಮಂಜುನಾಥ, ಬಿ.ರಾಜೀವ, ಸುಧಾಕರ ಇದ್ದರು.

ಇಂದು ದಸರಾ ಸವಿಗನ್ನಡ ಪ್ರಶಸ್ತಿ ಪ್ರದಾನ



ಮೈಸೂರು,ಅ.8–ಮೈಸೂರಿನ ಹೊಯ್ಸಳ ಕನ್ನಡ ಸಂಘ ಮತ್ತು ಸವಿಗನ್ನಡ ಪತ್ರಿಕಾ ಬಳಗ ಕೊಡಮಾಡುವ 2024ನೇ ಸಾಲಿನ ದಸರಾ ಮತ್ತು ಸವಿಗನ್ನಡ ಸಾಂಸ್ಕೃತಿಕ ಪ್ರಶಸ್ತಿಗಳಿಗೆ ವಿವಿಧ ಕ್ಷೇತ್ರಗಳ ಸಾಧಕರನ್ನು ಆಯ್ಕೆ ಮಾಡಲಾಗಿದೆ.

ಸುಜಾತಾ ರವೀಶ್ (ಸಾಹಿತ್ಯ), ಜ್ಞಾನಮೂರ್ತಿ (ಸಂಗೀತ ಪೋಷಣೆ ಮತ್ತು ಆಶು ಕವಿತೆ), ವಿ.ಹುಸೇನಪ್ಪ (ಸಾಹಿತ್ಯ ಮತ್ತು ಆಡಳಿತ), ಎಸ್.ಎಲ್.ಶ್ರೀರಮಣ (ವೃತ್ತಿ ರಂಗಭೂಮಿ), ಕೆ.ಆರ್.ಕೃಷ್ಣ (ರಂಗಭೂಮಿ ಮತ್ತು ಸಮುದಾಯ ಸೇವೆ), ವಿ.ಉದಯ್‌ಕುಮಾರ್ ಗೆಜ್ಜೆಹೆಜ್ಜೆ (ಹವ್ಯಾಸಿ ರಂಗಭೂಮಿ), ಮೈಸೂರು ಆನಂದ್ (ಹಾಸ್ಯ), ಸುಮತಿ ಸುಬ್ರಹ್ಮಣ್ಯ (ಸಾಹಿತ್ಯ ಮತ್ತು ಅಧ್ಯಾತ್ಮ), ಭಾಗ್ಯಲಕ್ಷ್ಮಿ ನಾರಾಯಣ್ (ಸಾಹಿತ್ಯ ಮತ್ತು ಶಿಕ್ಷಣ), ಚಿಕ್ಕಳ್ಳಿ ಪಿ.ದೇವರಾಜ್ (ಶಿಕ್ಷಣ, ರಂಗಭೂಮಿ, ಶರಣ ಸಾಹಿತ್ಯ), ಡಾ.ಎಂ. ಪಳನಿಸ್ವಾಮಿ (ಸಾಹಿತ್ಯ ಮತ್ತು ಕನ್ನಡ ಪ್ರೀತಿ), ಸ್ವರಾಜ್ ಜೈನ್ ಬಾಬು (ಸಮಾಜ ಸೇವೆ).

ಪ್ರಶಸ್ತಿಯನ್ನು ಅ.9ರಂದು ಬೆಳಗ್ಗೆ 10.30ಕ್ಕೆ ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಶಿಕ್ಷಕಿ ಭಾಗ್ಯಲಕ್ಷ್ಮಿ ನಾರಾಯಣ್ ವಿರಚಿತ ಕಲ್ಲೋಲಿನಿ ಕಥಾಸಂಕಲನ ಬಿಡುಗಡೆ, ದಸರಾ ಕವಿಗೋಷ್ಠಿ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಉಚಿತ ತಾಂತ್ರಿಕ ಕೌಶಲಾಭಿವೃದ್ಧಿ ತರಬೇತಿಗೆ ಅರ್ಜಿ ಆಹ್ವಾನ

ಮೈಸೂರು,ಅ.8– ಕರ್ನಾಟಕ ಸರ್ಕಾರದ ಎಐಟಿಟಿ, ಎಸ್.ಸಿ.ಪಿ ಮತ್ತು ಟಿಎಸ್‌ಪಿ ಯೋಜನೆಯಡಿ ರಾಜ್ಯದಲ್ಲಿ ವಾಸವಾಗಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅರ್ಹ ಯುವಕ ಯುವತಿಯರಿಂದ ಉದ್ಯೋಗ ಆಧಾರಿತ ಉಚಿತ ತಾಂತ್ರಿಕ ಕೌಶಲಾಭಿವೃದ್ಧಿ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ. ಎಸ್‌ಎಸ್‌ಎಲ್‌ಸಿ, ಐಟಿಐ, ಡಿಪ್ಲೊಮಾ, ಬಿ.ಇ ಹಾಗೂ ವಿವಿಧ ವಿದ್ಯಾರ್ಹತೆಯ 16ರಿಂದ 45 ವರ್ಷದೊಳಗಿನ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಅ.30 ಕೊನೆಯ ದಿನಾಂಕವಾಗಿದ್ದು, ಹೆಚ್ಚಿನ ಮಾಹಿತಿಗಾಗಿ ದೂ.ಸಂ: 9945442654, 9945479700 ಅಥವಾ 9900864686 ಅನ್ನು ಸಂಪರ್ಕಿಸಬಹುದು.

ನಿಧನ




ಇಂದಿರಮ್ಮ

ಮೈಸೂರು,ಅ.8–ಜಯದೇವನಗರ ಸರ್ಕಾರಿ ಪ್ರಾಥಮಿಕ ಶಾಲೆ ಶಿಕ್ಷಕಿ, ಹೆಬ್ಬಾಳು ವಾಣಿ ವಿಲಾಸ ಬಡಾವಣೆ ನಿವಾಸಿ ಹಾಗೂ ದಿವಂಗತ ನಾಗರಾಜು ಅವರ ಪತ್ನಿ ಇಂದಿರಮ್ಮ (53) ಮಂಗಳವಾರ ಬೆಳಗ್ಗೆ ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಮೃತರು ಇಬ್ಬರು ಸಹೋದರಿಯರು, ಓರ್ವ ಸಹೋದರ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಕುಂಬಾರಕೊಪ್ಪಲು ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ದಸರಾ ಗೀತಾರಾಧನ, 6.30 ದಸರಾದಲ್ಲಿ ಇಂದು, ಪ್ರಸ್ತುತಿ: ಜಾಂಪಣ್ಣ ಆಶೀಹಾಳ್, 6.35 ಮತ್ತು ಸಂಜೆ 6.10 ವಾದ್ಯ ವೈಭವ–ಸಂಗೀತ ವಾದ್ಯಗಳ ಪರಿಚಯ ಮಾಲಿಕೆ, ಪ್ರಸ್ತುತಿ: ಚೈತ್ರಿಕಾ. ಎಸ್., 6.40 ರಾಜಮಾರ್ಗ–ಮೈಸೂರಿನ ಇತಿಹಾಸ ಪ್ರಸಿದ್ಧ ಮಾರ್ಗಗಳ ಪರಿಚಯ, ಪ್ರಸ್ತುತಿ: ಡಾ.ಮೈಸೂರು ಉಮೇಶ್, 6.50 ರೈತರಿಗೆ ಸಲಹೆ, 7.15 ವಾತ್ಸಲ್ಯವಾಣಿ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಮಕ್ಕಳ ರಕ್ಷಣಾ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, 7.45 ಶರಣ ಸಂಸ್ಕೃತಿ ಉತ್ಸವ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಶ್ರೀಜಗದ್ಗುರು ಮುರುಘ ರಾಜೇಂದ್ರ ಬೃಹನ್ಮಠ, ಚಿತ್ರದುರ್ಗ, 8.30 ಚಿತ್ರಗೀತೆಗಳು, 9.05 ಚಾಮುಂಡಿ ಹಬ್ಬ–ದಸರಾ ಸಂಭ್ರಮ, ಜನಪದರ ನಾಲಿಗೆಯಲ್ಲಿ ಮೈಸೂರು ದೇವತೆ, ರಚನೆ–ಡಾ.ಪಿ.ಕೆ. ರಾಜಶೇಖರ್, ಪ್ರಸ್ತುತಿ: ಡಾ.ಮೈಸೂರು ಉಮೇಶ್, 10.00 ದಸರಾ ಪ್ರಯುಕ್ತ ಶ್ರೀ ಮುತ್ತುಸ್ವಾಮಿ ದೀಕ್ಷಿತರ ನವಾವರಣ ಕೃತಿಗಳನ್ನೊಳಗೊಂಡ ವಿಶೇಷ ಸಂಗೀತ ಸರಣಿ–ನಮೋ ಜಗತ್ತಾರಿಣಿ, ನಿರ್ಮಾಣ–ಮೈಸೂರು. ಎಸ್. ರಾಜಲಕ್ಷ್ಮೀ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ **ಮಧ್ಯಾಹ್ನ:** 12.30 ಆಯುಷ್‌ವಾಣಿ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 12.35 ದೇವರನಾಮ–ಮಂಜುಳಾ. ಇ.ಎಂ., 12.45 ಜನಪದ ಸಂಗೀತ, 1.20 ಭಾವಗೀತೆಗಳು–ಸುನಂದಾ ದಿಲೀಪ್, 2.40 ಏಳುತಲೆ ನೆನೆದೇವು–ದಸರಾ ಸಂದರ್ಭದಲ್ಲಿ ಜನಪದ ಶಕ್ತಿದೇವತೆಯನ್ನು ಕುರಿತ ವಿಶೇಷ ರೂಪಕ ಮಾಲಿಕೆ, ಪ್ರಸ್ತುತಿ: ಡಾ.ಮೈಸೂರು ಉಮೇಶ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಆರ್.ಗಣೇಶ್ ಮತ್ತು ಆರ್. ಕುಮಾರೇಶ್–ಯುಗಳ ವಯೋಲಿನ್ ವಾದನ, 4.00 ಮಹಿಳಾರಂಗದಲ್ಲಿ ನವರಾತ್ರಿ ಸಂಭ್ರಮ, ಪ್ರಸ್ತುತಿ: ಸಹನ ಮತ್ತು ಕೀರ್ತನ, 4.45 ಹಿಂದಿ ಪಾಠ–ಅನುರಾಧಾಮೂರ್ತಿ, 6.50 ಕೃಷಿರಂಗ: ಕೃಷಿ ಹಾಡುಗಳು, 7.00 ಭಾರತ ಮತ್ತು ಶ್ರೀಲಂಕಾ ತಂಡಗಳ ನಡುವೆ ದುಬೈ ಇಂಟರ್‌ನ್ಯಾಷನಲ್ ಕ್ರಿಕೆಟ್ ಕ್ರೀಡಾಂಗಣ, ದುಬೈಯಲ್ಲಿ ನಡೆಯಲಿರುವ ಐಸಿಸಿ ಮಹಿಳೆಯರ ಟಿ20 ವರ್ಲ್ಡ್ ಕಪ್ ಕ್ರಿಕೆಟ್ ಪಂದ್ಯಾವಳಿಯ ನೇರ ವೀಕ್ಷಕ ವಿವರಣೆ

ಇಂದಿನ ಪಂಚಾಂಗ

09.10.2024 ಬುಧವಾರ, ಮಳೆ ನಕ್ಷತ್ರ: ಹಸ್ತ, 27.09.2024 ರಿಂದ 09.10.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಶುಕ್ಲ ಪಕ್ಷ,
ತಿಥಿ: ಷಷ್ಠಿ, ನಕ್ಷತ್ರ: ಮೂಲ, ರಾಹುಕಾಲ : ಮಧ್ಯಾಹ್ನ 12 ರಿಂದ 1.30ರವರೆಗೆ

■ **ಶ್ರೀ ಶ್ರೀ ಸುಬ್ಬರಾಯ ದಾಸರ ಪ್ರಸನ್ನ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ :** ನವರಾತ್ರಿ ಬ್ರಹ್ಮೋತ್ಸವ, ಬೆಳಗ್ಗೆ ಉತ್ಸವ, ಧನ್ವಂತ್ರಿ ಹೋಮ, ಸಾಯಂಕಾಲ ಹೂವಿನ ಚಪ್ಪರ, ಸ್ಥಳ: ದೇವಸ್ಥಾನ ಆವರಣ, ಕೃಷ್ಣ ವಿಲಾಸ ರಸ್ತೆ, ದೇವರಾಜ ಮೊಹಲ್ಲಾ.

■ **ಶ್ರೀ ಲಕ್ಷ್ಮೀ ವೆಂಕಟರಮಣಸ್ವಾಮಿ ದೇವಸ್ಥಾನ ಟ್ರಸ್ಟ್ :** ಶ್ರೀ ಲಕ್ಷ್ಮೀವೆಂಕಟರಮಣ ಸ್ವಾಮಿಯ 50ನೇ ಬ್ರಹ್ಮೋತ್ಸವ, ಬೆಳಗ್ಗೆ ಲಕ್ಷ್ಮೀಕಲ್ಯಾಣೋತ್ತರ, ಕಲಶಾರಾಧನೆ, ನಿತ್ಯಹೋಮ, ಲಾಜಾಹೋಮ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸಂಜೆ ಶಾತ್ತುಮೊರೈ, ಸಂಜೆ 7 ಗಂಟೆಗೆ ಪಲ್ಲಕ್ಕಿ ಉತ್ಸವ, ಲಕ್ಷ್ಮೀ ಸಹಸ್ರನಾಮ ಹೋಮ, ಮಂಗಳಾರತಿ, ಸ್ಥಳ: ದೇವಸ್ಥಾನದ ಆವರಣ, ವಾಣಿವಿಲಾಸ ಮೊಹಲ್ಲಾ.

■ **ಶೃಂಗೇರಿ ಶ್ರೀ ಶಂಕರ ಮಠ, ಅಭಿನವ ಶಂಕರಾಲಯ :** ಶ್ರೀ ಶಾರದಾಶರನ್ನವರಾತ್ರೋತ್ಸವ–2024, ಬೆಳಗ್ಗೆಯಿಂದ ಷಷ್ಠಿ, ಶ್ರೀ ಸರಸ್ವತಿ (ವೀಣಾಧಾರಿಣಿ), ವಿದ್ಯಾಸರಸ್ವತೀ ಹೋಮ, ಸ್ಥಳ: ಶಂಕರ ಮಠದ ಆವರಣ, ಫೋರ್ಟ್ ಮೊಹಲ್ಲಾ.

■ **ತ್ರಯೀನ್ಯಾಸ್ ಶ್ರೀ ವಿದ್ಯಾ ಫೌಂಡೇಷನ್ :** 28ನೇ ವರ್ಷದ ಶರನ್ನವರಾತ್ರಿ ಮಹೋತ್ಸವ, ಬೆಳಗ್ಗೆ 8.30 ರಿಂದ ಮಹಾಭಿಷೇಕ, ಶ್ರೀ ಸರಸ್ವತಿ ಆವಾಹನ, ಶ್ರೀ ಕಾಲರಾತ್ರಿ, ಶ್ರೀ ವಿದ್ಯಾ ಲವಣದುರ್ಗಾ ಪೂಜಾ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀಚಕ್ರಾರ್ಚನೆ, ಶ್ರೀ ಸುಂದರಕಾಂಡ ಪಾರಾಯಣ, ಸಂಜೆ 5.30ಕ್ಕೆ ಶ್ರೀ ಬಾಲಾ ತ್ರಿಪುರಸುಂದರೀ ಮತ್ತು ಶ್ರೀ ದಶಶ್ಯಾಮಲಾ ಹೋಮ, ಶ್ರೀ ವಾಗ್ವಾದಿನಿ, ಶ್ರೀ ವಾಗೀಶ್ವರಿ, ಶ್ರೀ ರುಕಶ್ಯಾಮಲಾ, ಶ್ರೀ ವೀಣಾಶ್ಯಾಮಲಾ, ಶ್ರೀ ವೇಣುಶ್ಯಾಮಲಾ, ಶ್ರೀ ಶಾರಿಕಾಶ್ಯಾಮಲಾ, ಶ್ರೀ ನಕುಲಿಶ್ಯಾಮಲಾ, ಶ್ರೀ ಹಸಂತಿ ಶ್ಯಾಮಲಾ, ಶ್ರೀ ಲಘು ಶ್ಯಾಮಲಾ, ಶ್ರೀ ರಾಜಶ್ಯಾಮಲಾ ಹೋಮ, ಪೂರ್ಣಾಹುತಿ, ಕುಂಕುಮಾರ್ಚನೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ತ್ರಯಿನ್ಯಾಸ್, ಜಯಲಕ್ಷ್ಮೀಪುರಂ.

■ **ಹೇಮಲತಾ ಕುಮಾರಸ್ವಾಮಿ :** ಮೈಸೂರು ಮನೆ ಮನೆ ದಸರಾ ಬೊಂಬೆ ಪ್ರದರ್ಶನ, ಸ್ಥಳ: 567/3, 2ನೇ ರಾಮಚಂದ್ರ ಅಗ್ರಹಾರ, ಖಿಲ್ಲೆ ಮೊಹಲ್ಲಾ.

■ **ಶ್ರೀ ಚಂದ್ರಮೌಳೇಶ್ವರ ಸ್ವಾಮಿ ದೇವಸ್ಥಾನ ಚಾರಿಟಬಲ್ ಟ್ರಸ್ಟ್ :** ಶರನ್ನವರಾತ್ರಿ ಉತ್ಸವ–2024, ಬೆಳಗ್ಗೆ 9ಕ್ಕೆ ಸರಸ್ವತಿ ಆವಾಹನ, ಶ್ರೀ ಮಹಾಸರಸ್ವತಿ ಹೋಮ, ವೀಣಾಶಾರದೆ ಅಲಂಕಾರ, ಸ್ಥಳ: ದೇವಸ್ಥಾನದ ಪ್ರಾಂಗಣ, ವಾಣಿವಿಲಾಸ ಮೊಹಲ್ಲಾ, ಬೆಳಗ್ಗೆ 9 ಗಂಟೆಯಿಂದ

■ **ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು, ರಾಜ್ಯಶಾಸ್ತ್ರ ವಿಭಾಗ :** ಬೆಳಗ್ಗೆ 9ಕ್ಕೆ 21ನೇ ಶತಮಾನದಲ್ಲಿ ಗಾಂಧೀಜಿ ಅರಿವು ಜಾಥಾ, ನ್ಯಾಯಾಲಯದ ಗಾಂಧಿ ಪುತ್ಥಳಿ ಮುಂಭಾಗದಿಂದ ಶ್ರೀ ನಟರಾಜ ಸಭಾ ಭವನದವರೆಗೆ, ಮಾಲಾರ್ಪಣೆ : ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಜಾಥಾ ಉದ್ಘಾಟನೆ : ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಲೋಕಾಯುಕ್ತ ನ್ಯಾಯಾಧೀಶರಾದ ಶ್ರೀಮತಿ ಜೆ.ಸಿ. ಭಾಗ್ಯ, ಮುಖ್ಯ ಅತಿಥಿಗಳು : ಸಹಾಯಕ ಪೊಲೀಸ್ ಆಯುಕ್ತ ಹೆಚ್.ಬಿ. ರಮೇಶ್‌ಕುಮಾರ್, ಸ್ಥಳ: ಗಾಂಧಿ ಪುತ್ಥಳಿ, ನ್ಯಾಯಾಲಯದ ಆವರಣ; ಬೆಳಗ್ಗೆ 10.30ಕ್ಕೆ 21ನೇ ಶತಮಾನದಲ್ಲಿ ಗಾಂಧೀಜಿ ರಾಜಕೀಯ ನಿಲುವುಗಳ ಪ್ರಸ್ತುತತೆ ಕುರಿತ ಚಿಂತನ–ಮಂಥನ ದುಂಡು ಮೇಜಿನ ಸಭೆ, ಸಾನ್ನಿಧ್ಯ : ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ : ವಿಧಾನಪರಿಷತ್ ಸಭಾಧ್ಯಕ್ಷ ಬಸವರಾಜ ಹೊರಟ್ಟಿ, ಪುಷ್ಪಾರ್ಚನೆ : ಹಿರಿಯ ಗಾಂಧಿ ಮಾರ್ಗಿ ವೈ.ಸಿ. ರೇಚಣ್ಣ, ಸ್ಥಳ: ಶ್ರೀ ನಟರಾಜ ಸಭಾ ಭವನ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಗರ್ಭಾಶಯದ ಫೈಬ್ರಾಯ್ಡ್‌ಗಳ ವೈದ್ಯಕೀಯ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ ಸಂಜೆ 4.30ರವರೆಗೆ.

■ **ವ್ಯವಸ್ಥಾಪಕರು :** ಕೆ.ಎಸ್. ರಾಘವೇಂದ್ರ ಅವರಿಂದ ಪೇಪರ್ ಪಲ್ಪ್ ಉಪಯೋಗಿಸಿ ಕೈಯಿಂದ ಮಾಡಿದ ಬೊಂಬೆಗಳ ಮೂಲಕ ದಶಾವತಾರ ಒಳಗೊಂಡ ಶ್ರೀ ಬಾಲಕೃಷ್ಣ ಲೀಲೆ ಪ್ರಸಂಗಗಳ ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ವಿಜಯನಗರ 2ನೇ ಹಂತ, ಬೆಳಗ್ಗೆ 10 ಗಂಟೆಯಿಂದ.

■ **ವಿದ್ಯಾವರ್ಧಕ ಸಂಘ, ವಿದ್ಯಾವರ್ಧಕ ಕಾನೂನು ಕಾಲೇಜು :** ವಿಕಾಸ ಪರ್ವ–2024–25ನೇ ಸಾಲಿನ ಹೊಸ ವಿದ್ಯಾರ್ಥಿಗಳಿಗೆ ಮೂರು ದಿನಗಳ ಪುನಶ್ಚೇತನ ಕಾರ್ಯಕ್ರಮ, ಸ್ಥಳ: ಪ್ರೊ. ಪಿ.ಎಂ. ಚಿಕ್ಕಬೋರಯ್ಯ ಹಾಲ್, ಕಾಲೇಜು ಆವರಣ, ಬೆಳಗ್ಗೆ 10 ಗಂಟೆಯಿಂದ.

■ **ಸ್ವರ್ಣ ನೃಸಿಂಹ ದತ್ತ ಸಾಯಿ ಪೀಠಿಕೆ ಸೇವಾ ಟ್ರಸ್ಟ್ :** ಶರನ್ನವರಾತ್ರಿ ವೈಭವ–2024, ಸಪ್ತಮಿ, ಬೆಳಗ್ಗೆ ಸರಸ್ವತಿ ಹೋಮ, ಸ್ಥಳ: ಶ್ರೀ ವೆಂಕಟಾರ್ಜುನ ಧ್ಯಾನ ಮಂದಿರ, ಹಾರೋಹಳ್ಳಿ ಗ್ರಾಮ. ಸಂಜೆ 6 ಗಂಟೆಗೆ ರವಿಶಂಕರ್ ಅವರಿಂದ ಕೊಳಲು ವಾದನ, ಕುಂಕುಮಾರ್ಚನೆ, ಶ್ರೀ ಲಲಿತಾಸಹಸ್ರನಾಮ, ಸ್ಥಳ: ಗುರುನಿವಾಸ, ಸೋನಾರ್ ಬೀದಿ, ನಾರಾಯಣಶಾಸ್ತ್ರಿ ರಸ್ತೆ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಮೈಸೂರಿನ ಹೊಯ್ಸಳ ಕನ್ನಡ ಸಂಘ, ಸವಿಗನ್ನಡ ಪತ್ರಿಕಾ ಬಳಗ :** ದಿವಂಗತ ಶ್ರೀಮತಿ ಬಿ.ಆರ್. ನಾಗಲತಾ ಸ್ಮರಣಾರ್ಥ ಶ್ರೀಮತಿ ಭಾಗ್ಯಲಕ್ಷ್ಮಿ ನಾರಾಯಣ್ ವಿರಚಿತ 'ಕಲ್ಲೋಲಿನಿ' ಕಥಾಸಂಕಲನ ಬಿಡುಗಡೆ, ಸವಿಗನ್ನಡ ಸಾಂಸ್ಕೃತಿಕ ಪ್ರಶಸ್ತಿ ಪ್ರದಾನ, ಕಾವ್ಯ ದಸರಾ ಕವಿ ಸಮ್ಮೇಳನ, ಸಾನ್ನಿಧ್ಯ : ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಉದ್ಘಾಟನೆ : ಮಹಾಕವಯತ್ರಿ ಡಾ. ಲತಾ ರಾಜಶೇಖರ್, ಪ್ರಶಸ್ತಿ ಪ್ರದಾನ : ಗ್ರಾಸಿಮ್ ವಿಶ್ರಾಂತ ಪ್ರಧಾನ ವ್ಯವಸ್ಥಾಪಕ ರೋ. ಎಂ. ಚಿನ್ನಸ್ವಾಮಿ, ಹಿರಿಯ ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಪುಸ್ತಕ ಬಿಡುಗಡೆ : ಕೃಷಿ ವಿಜ್ಞಾನಿ ಡಾ. ವಸಂತಕುಮಾರ್ ತಿಮಕಾಪುರ, ಅಧ್ಯಕ್ಷತೆ : ಹೊಯ್ಸಳ ಕನ್ನಡ ಸಂಘದ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ದಸರಾ ಕವಿಗೋಷ್ಠಿ ಅಧ್ಯಕ್ಷತೆ : ವಿಶ್ರಾಂತ ಪೊಲೀಸ್ ಅಧಿಕಾರಿ ಶಿವಬಸಪ್ಪ ಹೊರೆಯಾಲ, ಮುಖ್ಯ ಅತಿಥಿಗಳು : ಲೇಖಕ ಡಿ. ಪದ್ಮನಾಭ, ಶಿಕ್ಷಕಿ ಶ್ರೀಮತಿ ಭಾಗ್ಯಲಕ್ಷ್ಮಿ ನಾರಾಯಣ್, ರಂಗನಾಥ್, ಮೈಸೂರು, ಸ್ಥಳ: ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಸುಯೋಗ್ ಆಸ್ಪತ್ರೆ :** ಉಚಿತ ಆ್ಯಂಜಿಯೋಗ್ರಾಂ ಮತ್ತು ಆ್ಯಂಜಿಂಯೋಪ್ಲಾಸ್ಟಿ ಶಿಬಿರದ ಸಮಾರೋಪ ಸಮಾರಂಭ, ಉದ್ಘಾಟನೆ : ಮೇಘಾಲಯದ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್, ಮುಖ್ಯ ಅತಿಥಿಗಳು : ಮೂಳೆ ಮತ್ತು ಕೀಲು ಶಾಸ್ತ್ರ ತಜ್ಞರಾದ ಡಾ.ಮೋಹನ್, ಸುಯೋಗ್ ಆಸ್ಪತ್ರೆಯ ಟ್ರಸ್ಟಿ ಶ್ರೀಮತಿ ಸುಧಾ ಯೋಗಣ್ಣ, ಸ್ಥಳ: ಸುಯೋಗ್ ಆಸ್ಪತ್ರೆ ಸಭಾಂಗಣ, ರಾಮಕೃಷ್ಣನಗರ, ಬೆಳಗ್ಗೆ 10.30ಕ್ಕೆ.

■ **ಜೆಎಸ್‌ಎಸ್ ಸಿಂಹ ಸುಬ್ಬಮಹಾಲಕ್ಷ್ಮಿ ಪ್ರಥಮ ದರ್ಜೆ ಕಾಲೇಜು :** ರಾಷ್ಟ್ರೀಯ ಗ್ರಂಥಪಾಲಕರ ದಿನಾಚರಣೆ, ಗ್ರಂಥಾಯಣ ನಾಟಕ ಪ್ರದರ್ಶನ, ಮುಖ್ಯ ಅತಿಥಿಗಳು : ಹಿರಿಯ ಪ್ರಾಧ್ಯಾಪಕ ಡಾ. ಎನ್.ಎಸ್. ಹರಿನಾರಾಯಣ, ರಂಗ ನಿರ್ದೇಶಕ ಪ್ರವೀಣ್ ಬೆಳ್ಳಿ, ಅಧ್ಯಕ್ಷತೆ : ಜೆಎಸ್‌ಎಸ್ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಶ್ರೀಮತಿ ವನಜಾ ಬಿ. ಪಂಡಿತ್, ಉಪಸ್ಥಿತರು : ಆಡಳಿತಾಧಿಕಾರಿ ಶ್ರೀಮತಿ ಅನುಪಮ ಬಿ. ಪಂಡಿತ್, ಪ್ರಾಂಶುಪಾಲ ಡಾ. ಟಿ.ಎಸ್. ರಾಕೇಶ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಆರ್.ಕೆ. ಭರತ್, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮೈಸೂರು ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ :** ದಸರಾ ಮಹೋತ್ಸವ–2024 ಅಂಗವಾಗಿ ಛಾಯಾಚಿತ್ರ ಪ್ರದರ್ಶನ, ಸ್ಥಳ: ಸುಚಿತ್ರ ಕಲಾ ಗ್ಯಾಲರಿ, ಕಲಾಮಂದಿರ, ಬೆಳಗ್ಗೆ 11.30 ರಿಂದ.

■ **ಚಾರು ಸಾಂಸ್ಕೃತಿಕ ಪ್ರತಿಷ್ಠಾನ :** ದಸರಾ–2024 ಪ್ರಯುಕ್ತ ವಿಶೇಷ ಕಾರ್ಯಕ್ರಮ, ಪ್ರತಿಷ್ಠಾನದ ವಿದ್ಯಾರ್ಥಿಗಳಿಂದ ಮನೋರಂಜನಾ ಕಾರ್ಯಕ್ರಮ, ಸ್ಥಳ: ಎಸ್‌ಬಿಎಂ ಮತ್ತು ಇತರ ಬ್ಯಾಂಕ್ ನೌಕರರ ಕ್ಷೇಮಾಭಿವೃದ್ಧಿ ಬಡಾವಣೆ, ವರ್ತುಲ ರಸ್ತೆ, ಸಂಜೆ 5 ಗಂಟೆಗೆ.

■ **ಶ್ರೀ ಮುಕ್ಕಣ್ಣೇಶ್ವರ ಸ್ವಾಮಿ ದೇವಸ್ಥಾನ :** ನವರಾತ್ರಿ ಪೂಜಾ ಕಾರ್ಯಕ್ರಮ, ಭಜನೆ, ರವಿಕಾಂತಾನಂದಸ್ವಾಮಿ ಅವರಿಂದ ಪ್ರವಚನ, ಸ್ಥಳ: ದೇವಸ್ಥಾನದ ಆವರಣ, ಸಂಜೆ 5.30 ರಿಂದ.

■ **ಶ್ರೀ ಉತ್ತರಾದಿ ಮಠ ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ :** ಶರನ್ನವರಾತ್ರಿಯ ಪ್ರಯುಕ್ತ 'ಶ್ರೀನಿವಾಸ ಕಲ್ಯಾಣ' ಪ್ರವಚನ, ಪಂ. ಶ್ರೀ ಪ್ರಭಂಜನಾಚಾರ್ಯ ವಿದ್ಯಾಪತಿ ಅವರಿಂದ, ಸ್ಥಳ: ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಶ್ರೀ ಉತ್ತರಾದಿ ಮಠ, ಸಂಜೆ 5.30ಕ್ಕೆ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ವಿದುಷಿ ಡಾ. ರೇಖಾ ಶ್ರೀರಾಮಚಂದ್ರಮೂರ್ತಿ ಅವರಿಂದ ಗಾಯನ, ವಿದುಷಿ ಆರ್. ವರಲಕ್ಷ್ಮಿ–ಪಿಟೀಲು, ವಿದ್ವಾನ್ ಬಿ.ಆರ್. ಶ್ರೀಧರ್–ಮೃದಂಗ, ವಿದ್ವಾನ್ ಟಿ.ಎನ್. ಅಜಯ್–ಘಟಂ, ಸ್ಥಳ: ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನ, ಎಸ್‌ಬಿಎಂ ಕಾಲೋನಿ, ಶ್ರೀರಾಂಪುರ, ಸಂಜೆ 6ಕ್ಕೆ.

■ **ರಂಗಾಯಣ, ಮೈಸೂರು :** ನವರಾತ್ರಿ ಅಂಗವಾಗಿ ರಂಗ ಉತ್ಸವ, ಮೂಡಲಪಾಯ ಯಕ್ಷಗಾನ ಟ್ರಸ್ಟ್, ಕೊನೆಹಳ್ಳಿ, ತಿಪಟೂರು ತಾಲೂಕು ತಂಡದಿಂದ ಕರಿಭಂಟನ ಕಾಳಗ ನಾಟಕ ಪ್ರದರ್ಶನ, ಸ್ಥಳ: ರಂಗಾಯಣ ಆವರಣ, ಸಂಜೆ 6.30ಕ್ಕೆ.

ಸುತ್ತೂರಿನಲ್ಲಿಂದು

■ **ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ, ಸ್ಪೆಷಲ್ ಇಂಟರೆಸ್ಟ್ ಗ್ರೂಪ್, ಎನ್‌ಎಸ್‌ಎಸ್ ಘಟಕ, ಸ್ಕೂಲ್ ಆಫ್ ಲೈಫ್ ಸೈನ್ಸಸ್:** ಪಾಲಿಸಿಸ್ಟಿಕ್ ಓವರಿಯನ್ ಸಿಂಡ್ರೋಮ್ ಕುರಿತು ಗ್ರಾಮೀಣ ಮಹಿಳೆಯರಿಗೆ ಜಾಗೃತಿ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಜೆಎಸ್‌ಎಸ್ ಸಂಶೋಧನಾ ಅಕಾಡೆಮಿ ಡೀನ್ ಡಾ.ವಿಶಾಲ್ ಕೆ.ಗುಪ್ತ, ಭಾಷಣಕಾರರು: ಸಹಾಯಕ ಪ್ರಾಧ್ಯಾಪಕ ಡಾ.ಹೆಚ್.ಎಸ್.ಮೇಘನಾ, ಗೌರವ ಅತಿಥಿಗಳು: ಡಾ.ಎಂ.ರಮ್ಯಾ, ಎಂ.ಸಿ.ಮಹದೇವಸ್ವಾಮಿ, ಅಧ್ಯಕ್ಷತೆ: ಸ್ಕೂಲ್ ಆಫ್ ಲೈಫ್ ಸೈನ್ಸಸ್ ಮುಖ್ಯಸ್ಥ ಡಾ.ಕೆ.ಎ.ರವೀಶ, ಸ್ಥಳ: ದೊಡ್ಡಮ್ಮತಾಯಿ ದೇವಸ್ಥಾನ ವೃತ್ತ, ಸುತ್ತೂರು, ಮಧ್ಯಾಹ್ನ 2.30ಕ್ಕೆ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಅಕ್ಟೋಬರ್ 9 ಬುಧವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 173 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಪರ್ಯಾಯ ನಾಯಕತ್ವ; ಸಿದ್ದರಾಮಯ್ಯ ಬಣದಲ್ಲೇ ಬಿರುಕು
ಸಂಧಾನ–ಸಮಾಧಾನಕ್ಕೆ ಜಾರಕಿಹೊಳಿ
ಮೈಸೂರು ಯಾತ್ರೆ!


ಸತೀಶ್ ಜಾರಕಿಹೊಳಿ

ಬೆಂಗಳೂರು, ಅ.8(ಕೆಎಂಶಿ)– ಪರ್ಯಾಯ ನಾಯಕತ್ವಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬಣದಲ್ಲೇ ಬಿರುಕು ಮೂಡಿದೆ.

ಮುಡಾ ಬಿಡಿ ನಿವೇಶನ ಹಾಗೂ ಪ್ರಾಧಿಕಾರದ ಹಣವನ್ನು ಗೊತ್ತುಗುರಿ ಇಲ್ಲದೆ ಎರಡು ಕ್ಷೇತ್ರಗಳ ಅಭಿವೃದ್ಧಿಗೆ ಬಳಸಿದ ವಿಚಾರಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (ಇಡಿ) ಯಾವುದೇ ಕ್ಷಣದಲ್ಲಿ ಮುಖ್ಯಮಂತ್ರಿ ಅವರಿಗೆ ನೋಟಿಸ್ ಜಾರಿ ಮಾಡಿ ಕಾನೂನು ಕ್ರಮಕ್ಕೆ ಮುಂದಾಗಬಹುದು. ಕರ್ನಾಟಕದ ಮುಖ್ಯಮಂತ್ರಿ ವಿರುದ್ಧ ತನಿಖೆಗೆ ಕೋರ್ಟ್‌ಗಳು ಆದೇಶ ನೀಡಿದ ನಂತರ ಕಾಂಗ್ರೆಸ್ ವರಿಷ್ಠರು ಮೌನ ವಹಿಸಿರುವುದಲ್ಲದೆ, ತೆರೆಮರೆಯಲ್ಲೇ ಪರ್ಯಾಯ ನಾಯಕತ್ವಕ್ಕೆ ಅನ್ವೇಷಣೆ ನಡೆಸಿದ್ದಾರೆ. ಇದರ ಸುಳಿವರಿತ ಸಿದ್ದರಾಮಯ್ಯ, ತಾವು ಅಧಿಕಾರ ತ್ಯಜಿಸಿದರೆ, ತಮ್ಮ ಬೆಂಬಲಿಗರೇ ನಾಯಕತ್ವ ವಹಿಸಿಕೊಳ್ಳಬೇಕೆಂಬ ತೀರ್ಮಾನಕ್ಕೆ ಬಂದಿದ್ದಾರೆ. ಇದರ ಹಿನ್ನೆಲೆಯಲ್ಲೇ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ತಮ್ಮ ಬೆಂಬಲಿಗರ ಮೂಲಕ ಕರ್ನಾಟಕ ರಾಜಕೀಯಕ್ಕೆ ■6ನೇ ಪುಟಕ್ಕೆ

ನಾನು ಮುಖ್ಯಮಂತ್ರಿ ಆಗಲು ವಿಪಕ್ಷಗಳ ಒತ್ತಾಸೆ!
ಮೈಸೂರಿನಲ್ಲಿ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಮಾರ್ಮಿಕ ನುಡಿ

ಮೈಸೂರು, ಅ.8(ಬಿಎಲ್‌ಯು)– ನಾನು ಮುಖ್ಯಮಂತ್ರಿ ಆಗುತ್ತೇನೆ ಎಂದು ವಿರೋಧ ಪಕ್ಷದ ನಾಯಕರು ಹೇಳುತ್ತಿದ್ದು, ಇದು ಅವರಿಗೆ ನನ್ನ ಮೇಲಿರುವ ಪ್ರೀತಿಯನ್ನು ತೋರಿಸುತ್ತದೆ ಎಂದು ಮುಖ್ಯಮಂತ್ರಿ ರೇಸ್‌ನಲ್ಲಿ ಬಿಂಬಿತರಾಗುತ್ತಿರುವ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಪ್ರಸ್ತುತ ರಾಜಕೀಯ ಬೆಳವಣಿಗೆ ಬಗ್ಗೆ ಮಾರ್ಮಿಕವಾಗಿ ನುಡಿದರು.

ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ತಮ್ಮ ನಾಯಕ ಮುಖ್ಯಮಂತ್ರಿ ಆಗಬೇಕೆಂದು ಬೆಂಬಲಿಗರು ಆಶಯ ವ್ಯಕ್ತಪಡಿಸುವುದು ಸಹಜ. ಅದರಂತೆ ನನ್ನ ಬೆಂಬಲಿಗರು ಕೂಡ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿರಬಹುದು ಎಂದು ಸ್ಪಷ್ಟಪಡಿಸಿದರು. ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿ ಮೂರು ವರ್ಷ ಇರುತ್ತಾರೋ ಅಥವಾ ಐದು ವರ್ಷ ಇರುತ್ತಾರೋ ■6ನೇ ಪುಟಕ್ಕೆ

ಸಚಿವತ್ರಯರ ಗುಪ್...ಗುಪ್ ಮಾತುಕತೆ!

ಮೈಸೂರು, ಅ.8–ಇಂದು ಬೆಳಗ್ಗೆಯಿಂದ ಮೈಸೂರಲ್ಲಿ ಶಾಸಕರು, ಮುಖಂಡರು ಹಾಗೂ ಕಾಂಗ್ರೆಸ್ ಕಾರ್ಯಕರ್ತರ ಭೇಟಿಯಾಗಿ ಮಾತುಕತೆ ನಡೆಸಿದ್ದ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಇಂದು ರಾತ್ರಿ ಗೃಹ ಸಚಿವ ಡಾ. ಜಿ.ಪರಮೇಶ್ವರ್ ಹಾಗೂ ಸಮಾಜ ಕಲ್ಯಾಣ ಸಚಿವ ಹೆಚ್.ಸಿ.ಮಹದೇವಪ್ಪ ಅವರೊಂದಿಗೆ ಮಾತುಕತೆ ನಡೆಸಿದರು. ವಿಜಯನಗರ ಎರಡನೇ ಹಂತದಲ್ಲಿರುವ ಚಾಮರಾಜನಗರ ಸಂಸದ ಸುನೀಲ್ ಬೋಸ್ ಅವರ ನಿವಾಸದಲ್ಲಿ ಈ ಮೂವರು ಗಂಟೆಗೂ ಹೆಚ್ಚು ಕಾಲ ಸಭೆ ನಡೆಸಿದರು. ಆದರೆ ಮಾತುಕತೆ ವಿವರ ತಿಳಿದು ಬಂದಿಲ್ಲ. ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಗಳಲ್ಲಿ ಮುಂಚೂಣಿಯಲ್ಲಿದ್ದಾರೆಂದು ಹೇಳಲಾಗುತ್ತಿರುವ ಸತೀಶ್ ಜಾರಕಿಹೊಳಿ ಹಳೇ ಮೈಸೂರು ಭಾಗದ ಪಕ್ಷದ ನಾಯಕರ ಒಲವು ಗಿಟ್ಟಿಸುವ ಉದ್ದೇಶದಿಂದ ದಿಢೀರ್ ಪ್ರವಾಸ ಕೈಗೊಂಡಿದ್ದಾರೆಂದು ಹೇಳಲಾಗುತ್ತಿದೆ.

ಈ ಭಾಗದಲ್ಲಿ ಹೆಚ್ಚಾಗಿ ಸಂಪರ್ಕ ಸಾಧಿಸಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಸತೀಶ್ ಜಾರಕಿಹೊಳಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸೂಚನೆಯಂತೆ ಈ ಪ್ರವಾಸ ಕೈಗೊಂಡು ಶಾಸಕರು, ಮುಖಂಡರು, ■6ನೇ ಪುಟಕ್ಕೆ


ಅರಮನೆ ಆವರಣದಲ್ಲಿ ಮಂಗಳವಾರ ಸಂಜೆ ಪೊಲೀಸ್ ಬ್ಯಾಂಡ್ ಕಾರ್ಯಕ್ರಮ ನಡೆಯಿತು.

ಅರಮನೆ ಅಂಗಳದಲ್ಲಿ ಪೊಲೀಸ್ ಬ್ಯಾಂಡ್ ವಾದ್ಯ ಸಂಗೀತದ ಹೊನಲು

● ಖ್ಯಾತ ಸಂಗೀತ ನಿರ್ದೇಶಕ ಎ.ಆರ್.ರೆಹಮಾನ್ ಗೀತೆಗೆ ಹೊಮ್ಮಿದ ವಾದ್ಯ ಸಂಗೀತ ● ನವೋಲ್ಲಾಸದ ನಾದ ತರಂಗದಲ್ಲಿ ತೇಲಿದ ಜನ

ಮೈಸೂರು,ಅ.8(ಪಿಎಂ)–ಮುಕ್ಕಾಲ ಮುಕ್ಕಾಬಲ ಲೈಲಾ ಓ ಲೈಲಾ... ಊರ್ವಶಿ ಊರ್ವಶಿ ಟೇಕ್ ಇಟ್ ಈಜಿ ಊರ್ವಶಿ... ಹೀಗೆ ಖ್ಯಾತ ಸಂಗೀತ ನಿರ್ದೇಶಕ ಎ.ಆರ್. ರೆಹಮಾನ್ ಅವರ ಗೀತೆಗಳನ್ನು ಒಗ್ಗೂಡಿಸಿ ಹೊಮ್ಮಿಸಿದ ವಾದ್ಯಸಂಗೀತಕ್ಕೆ ಶ್ರೋತೃಗಳು ನವೋಲ್ಲಾಸದ ನಾದ ತರಂಗದಲ್ಲಿ ತೇಲಿದರು.

ಅಲ್ಲದೆ, ಶಾಸ್ತ್ರೀಯ ವಾದ್ಯಸಂಗೀತವೂ ಸಭಿಕರನ್ನು ತಲೆದೂಗುವಂತೆ ಮಾಡಿತು. ಅರಮನೆ ಆವರಣದಲ್ಲಿ ದಸರಾ ಪ್ರಯುಕ್ತ ಕರ್ನಾಟಕ ರಾಜ್ಯ ಪೊಲೀಸ್ ವತಿಯಿಂದ ಮಂಗಳವಾರ ಹಮ್ಮಿಕೊಂಡಿದ್ದ ಸಮೂಹ ವಾದ್ಯಮೇಳದಲ್ಲಿ (ಪೊಲೀಸ್ ಮಾಸ್ ಬ್ಯಾಂಡ್) ಆಂಗ್ಲ ವಾದ್ಯವೃಂದ ಮತ್ತು ಕರ್ನಾಟಕ ವಾದ್ಯ ವೃಂದ ಸಾದರಪಡಿಸಿದ ವಾದ್ಯಸಂಗೀತದಲ್ಲಿ ಹೀಗೆ ನಾದಮಯ ಲೋಕವೊಂದು ಅನಾವರಣಗೊಂಡು ಸಭಿಕರನ್ನು ಮಂತ್ರಮುಗ್ಧರನ್ನಾಗಿಸಿತು.

ಎ.ಆರ್.ರೆಹಮಾನ್ ಅವರ ಚಿತ್ರಗೀತೆಗಳನ್ನು ಬಹು ವಾದ್ಯೋಪಕರಣಗಳನ್ನು ನುಡಿಸುವ ಮೂಲಕ ಆಂಗ್ಲ ವಾದ್ಯವೃಂದವು ಸಭಿಕರಲ್ಲಿ ರೋಮಾಂಚನ ಉಂಟು ಮಾಡಿತು. ಅಲ್ಲದೆ, ಪಾಶ್ಚಾತ್ಯ ಹಾಗೂ ಶಾಸ್ತ್ರೀಯ ಸಂಗೀತದ ■6ನೇ ಪುಟಕ್ಕೆ

ಹರ್ಯಾಣದಲ್ಲಿ ಬಿಜೆಪಿ ಹ್ಯಾಟ್ರಿಕ್ ಗೆಲುವು; ಜಮ್ಮು–ಕಾಶ್ಮೀರ ಗೆದ್ದ ಐಎನ್‌ಡಿಐಎ

ಬಹುಮತ 46

ಹರ್ಯಾಣ 90 ಕ್ಷೇತ್ರ

ಪಕ್ಷಗಳು	ಫಲಿತಾಂಶ
ಬಿಜೆಪಿ	48
ಕಾಂಗ್ರೆಸ್	37
ಐಎನ್‌ಎಲ್‌ಡಿ+	2
ಜೆಜೆಪಿ+	0
ಆಪ್	0
ಇತರೆ	3

ಬಹುಮತ 46

ಜಮ್ಮು ಮತ್ತು ಕಾಶ್ಮೀರ (90/90)

ಪಕ್ಷಗಳು	ಫಲಿತಾಂಶ
ಕಾಂಗ್ರೆಸ್+	49
ಬಿಜೆಪಿ	29
ಪಿಡಿಪಿ	3
ಇತರರು	9

ನವದೆಹಲಿ: ಹರ್ಯಾಣದಲ್ಲಿ ಬಿಜೆಪಿ ಹ್ಯಾಟ್ರಿಕ್ ಗೆಲುವು ದಾಖಲಿಸಿದರೆ, ಸಂವಿಧಾನದ 370ನೇ ವಿಧಿ ರದ್ದುಗೊಂಡ ದಶಕದ ಬಳಿಕ ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಗೆ ನಡೆದ ಮೊದಲ ಚುನಾವಣೆಯಲ್ಲಿ ನ್ಯಾಷನಲ್ ಕಾನ್ಫರೆನ್ಸ್–ಕಾಂಗ್ರೆಸ್ ಮೈತ್ರಿಕೂಟ 'ಐಎನ್‌ಡಿಐಎ' ಸರಳ ಬಹುಮತ ಪಡೆದುಕೊಂಡಿದೆ.

ಕಮಲ ಕಮಾಲ್: ಹರ್ಯಾಣ ವಿಧಾನಸಭೆಯ ಒಟ್ಟು 90 ಕ್ಷೇತ್ರಗಳಲ್ಲಿ ಬಿಜೆಪಿ–48, ಕಾಂಗ್ರೆಸ್–37, ಐಎನ್‌ಎಲ್‌ಡಿ–2 ಹಾಗೂ ಇತರರು 3 ಸ್ಥಾನ ಗಳಿಸಿದ್ದಾರೆ. ಚುನಾವಣೋತ್ತರ ಸಮೀಕ್ಷೆಗಳು ಹರ್ಯಾಣದಲ್ಲಿ ಕಾಂಗ್ರೆಸ್ ಜಯಭೇರಿ ಬಾರಿಸಲಿದೆ ಎಂದು ಹೇಳಿತ್ತು. ಆದರೆ ಕಮಲ ಕಮಾಲ್ ಮಾಡಿದೆ. ನಯಾಬ್ ಸಿಂಗ್ ಸೈನಿ ಹರ್ಯಾಣ ಮುಖ್ಯಮಂತ್ರಿ ಆಗುವುದು ಬಹುತೇಕ ಖಚಿತವಾಗಿದೆ.

ಕಣಿವೆ ರಾಜ್ಯ: ಜಮ್ಮು ಮತ್ತು ಕಾಶ್ಮೀರದಲ್ಲಿ 15 ವರ್ಷಗಳ ಬಳಿಕ ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ ನೇತೃತ್ವದಲ್ಲಿ ಸರಕಾರ ರಚನೆಗೆ ಸಿದ್ಧತೆ ನಡೆದಿದೆ. ಮಾಜಿ ಸಿಎಂ ಉಮರ್ ಅಬ್ದುಲ್ಲಾ ಮತ್ತೊಮ್ಮೆ ಮುಖ್ಯಮಂತ್ರಿ ಗಾದಿಗೇರುವುದು ಬಹುತೇಕ ಖಚಿತವಾಗಿದೆ. ವಿಧಾನಸಭೆಯ 90 (5 ನಾಮನಿರ್ದೇಶನ ಹೊರತುಪಡಿಸಿ) ಕ್ಷೇತ್ರಗಳ ಪೈಕಿ ಮೈತ್ರಿಕೂಟ 49 ಸ್ಥಾನಗಳಲ್ಲಿ ಗೆಲುವು ಸಾಧಿಸಿದ್ದು, ಕೂದಲೆಳೆ ಅಂತರದಲ್ಲಿ ಬಹುಮತದ ಗೆರೆ ದಾಟಿದೆ. ಐವರು ನಾಮನಿರ್ದೇಶಿತ ■6ನೇ ಪುಟಕ್ಕೆ


ನಯಾಬ್ ಸಿಂಗ್ ಸೈನಿ ಜಯಭೇರಿ ಸಂಭ್ರಮ

ಸಿದ್ದರಾಮಯ್ಯ ಯಾವುದೇ ಕಾರಣಕ್ಕೂ ಬದಲಾವಣೆ ಇಲ್ಲ


ಪರಮೇಶ್ವರ್

ಮೈಸೂರು, ಅ.8(ಬಿಎಲ್‌ಯು)– ಯಾವುದೇ ಕಾರಣಕ್ಕೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಬದಲಾವಣೆ ಮಾಡುವುದಿಲ್ಲ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಸ್ಪಷ್ಟಪಡಿಸಿದ್ದಾರೆ. ದಸರಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಮೈಸೂರಿಗೆ ಆಗಮಿಸಿದ್ದ ಡಾ.ಪರಮೇಶ್ವರ್, ನಗರದ ಮೆಟ್ರೋಪೋಲ್ ಹೋಟೆಲ್‌ನಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡುತ್ತಿದ್ದ ವೇಳೆ ಈ ಪ್ರತಿಕ್ರಿಯೆ ನೀಡಿದರು. ಸಿದ್ದರಾಮಯ್ಯ ಅವರೇ ಐದು ವರ್ಷ ಮುಖ್ಯಮಂತ್ರಿಯಾಗಿ ಮುಂದುವರೆಯಲಿದ್ದಾರೆ. ಈ ಬಗ್ಗೆ ಹೈಕಮಾಂಡ್ ಕೂಡ ಸ್ಪಷ್ಟ ನಿಲುವು ಪ್ರಕಟಿಸಿದೆ ಎಂದು ಹೇಳಿದರು.

ಮುಡಾ ಪ್ರಕರಣದಲ್ಲಿ ಹೈಕಮಾಂಡ್ ಸಿದ್ದರಾಮಯ್ಯ ಬೆಂಬಲಕ್ಕೆ ನಿಂತಿದೆ. ಸದ್ಯಕ್ಕೆ ರಾಜ್ಯದಲ್ಲಿ ಮುಖ್ಯಮಂತ್ರಿ ಸ್ಥಾನ ಖಾಲಿ ಇಲ್ಲ. ಹಾಗಾಗಿ ಸಿದ್ದರಾಮಯ್ಯ ಬದಲಾವಣೆಯ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದರು. ಸತೀಶ್ ಜಾರಕಿಹೊಳಿ ತಮ್ಮನ್ನು ಭೇಟಿ ಮಾಡಿದ ಬಗ್ಗೆ ಪ್ರತಿಕ್ರಿಯೆ ನೀಡಿದ ಡಾ.ಪರಮೇಶ್ವರ್, ನಾನು ಕೂಡ ಹಲವು ಸಚಿವರನ್ನು ಭೇಟಿ ಆಗುತ್ತೇನೆ. ಸತೀಶ್ ಜಾರಕಿಹೊಳಿ ಸೇರಿದಂತೆ ಡಾ.ಮಹದೇವಪ್ಪ ಜೊತೆಗೆ ಕಾಫಿ ಕುಡಿಯುತ್ತೇನೆ. ಹಾಗೆಂದ ಮಾತ್ರಕ್ಕೆ ಈ ಭೇಟಿಗೆ ವಿಶೇಷ ಅರ್ಥ ಕಲ್ಪಿಸುವುದು ಬೇಡ ಎಂದು ಸ್ಪಷ್ಟನೆ ನೀಡಿದರು.

ಜಾತಿಗಣತಿ ವರದಿ ಜಾರಿಗೆ ಒಕ್ಕಲಿಗರ ಸಂಘ ವಿರೋಧ
ಮರು ಸಮೀಕ್ಷೆ ನಡೆಸುವಂತೆ ಆಗ್ರಹ; ಸರ್ಕಾರ ಹಾಲಿ ವರದಿ ಜಾರಿಗೆ ಮುಂದಾದರೆ ಉಗ್ರ ಹೋರಾಟದ ಎಚ್ಚರಿಕೆ

ಬೆಂಗಳೂರು, ಅ.8(ಕೆಎಂಶಿ)– ರಾಜ್ಯ ಸರ್ಕಾರ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ಹೆಸರಲ್ಲಿ ನಡೆಸಿರುವ ಜಾತಿಗಣತಿ ವರದಿ ಅನುಷ್ಠಾನ ಮಾಡಬಾರದು ಎಂದು ಒಕ್ಕಲಿಗರ ಸಂಘ ಒತ್ತಾಯಿಸಿದೆ. ಎಲ್ಲಾ ಸಮುದಾಯಗಳಿಗೆ ಅನುಕೂಲವಾಗುವಂತೆ ಎಲ್ಲಾ ಜನವಸತಿಗಳಿಗೆ ಮತ್ತೆ ಭೇಟಿ ನೀಡಿ ವೈಜ್ಞಾನಿಕವಾಗಿ ಮರು ಸಮೀಕ್ಷೆ ನಡೆಸಬೇಕು. ಪ್ರತಿ ಮನೆಗೆ ಭೇಟಿ ನೀಡಿ ಅಗತ್ಯ ಮಾಹಿತಿ ಸಂಗ್ರಹಿಸಿ ಕಾಲಮಿತಿಯಲ್ಲಿ ವರದಿ ಪಡೆಯಬೇಕು ಹಾಗೂ ಸಾರ್ವಜನಿಕವಾಗಿ ಮುಕ್ತ ಚರ್ಚೆಗೆ ಅವಕಾಶ ನೀಡಿದ ನಂತರವಷ್ಟೇ ಅನುಷ್ಠಾನಕ್ಕೆ ತರಬೇಕು.

ಜಾತಿಗಣತಿ ವರದಿ ಅನುಷ್ಠಾನಕ್ಕೆ ಯಾವುದೇ ಆಕ್ಷೇಪ ಇಲ್ಲ, ಆದರೆ, ಎಲ್ಲಾ ಜನಾಂಗಕ್ಕೂ ಅನುಕೂಲವಾಗುವಂತೆ ವೈಜ್ಞಾನಿಕ ರೀತಿಯಲ್ಲಿ ಮರು ಸಮೀಕ್ಷೆ ನಡೆಸಬೇಕು ಎಂದು ಸಂಘ ಆಗ್ರಹಪಡಿಸಿದೆ. ಈ ಸಂಬಂಧ ಪತ್ರಿಕಾ ಪ್ರಕಟಣೆ ನೀಡಿರುವ ಸಂಘ, ನೈಜ ವರದಿ ಪಡೆದು ಜಾರಿಗೆ ತರಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಸಂಪುಟ ಸಚಿವರುಗಳನ್ನು ಒತ್ತಾಯಿಸುತ್ತೇವೆ ಎಂದಿದೆ. ಈ ಹಿಂದೆ ಸಮೀಕ್ಷೆ ವೇಳೆ ಬಹಳಷ್ಟು ಮನೆಗಳಿಗೆ ಭೇಟಿ ನೀಡಿಲ್ಲ ಎಂಬುದಾಗಿ ಸಹಸ್ರಾರು ಪತ್ರಗಳು ಹಾಗೂ ದೂರವಾಣಿ ಕರೆಗಳು ಒಕ್ಕಲಿಗರ ಸಂಘಕ್ಕೆ ಬಂದಿವೆ. ■6ನೇ ಪುಟಕ್ಕೆ


ರ್‍ಯಾಪರ್ ಬಾದ್‌ಶಾ ರಿದಂನಲ್ಲಿ ಮಿಂದೆದ್ದ ಯುವ ಸಮೂಹ

● ನಿಂತಲ್ಲೇ... ಕುಂತಲ್ಲೇ... ಕುಣಿದು ಕುಪ್ಪಳಿಸಿದ ಪ್ರೇಕ್ಷಕರು ● ದಿನ ಕಳೆದಂತೆ ಅತ್ಯಂತ ಹೆಚ್ಚು ಜನರ ಸೆಳೆಯುತ್ತಿರುವ ಮೆಗಾ ಇವೆಂಟ್ ಯುವ ದಸರಾ

ಮೈಸೂರು, ಅ.8(ಎಂಕೆ)– ಬ್ಯಾಡ್ ಬಾಯ್ ಬಾದ್‌ಶಾ ಆನ್ ಫೈಯರ್.... ರ್‍ಯಾಪರ್ ರಗಡ್ ಹಾಡುಗಳಿಗೆ ರಂಗೇರಿದ ಯುವ ದಸರಾ...! ಮೈಸೂರು ಹೊರವಲಯದ ರಿಂಗ್ ರಸ್ತೆಯಲ್ಲಿರುವ ಉತ್ತನಹಳ್ಳಿ ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನವರ ದೇವಸ್ಥಾನದ ಸಮೀಪದಲ್ಲಿ ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ ಮಹೋತ್ಸವ ಮೆಗಾ ಮನರಂಜನಾ ಭವ್ಯ ವೇದಿಕೆ ಯುವ ದಸರಾ ಕಾರ್ಯಕ್ರಮದ ಮೂರನೇ ದಿನವಾದ ಮಂಗಳವಾರ ಖ್ಯಾತ ರ್‍ಯಾಪರ್, ಬಾಲಿವುಡ್ ಗಾಯಕ ಬ್ಯಾಡ್ ಬಾಯ್ ಖ್ಯಾತಿಯ ಬಾದ್‌ಶಾ, ಪಡ್ಡೆ ಹೈಕಳಲ್ಲಿ ಕಿಚ್ಚು–ಹಚ್ಚಿದರು.

ಟಿಕ್... ಟಿಕ್... ಗಡಿಯಾರದ ಸದ್ದಿನೊಂದಿಗೆ ಬೆಂಕಿಯ ಜ್ವಾಲೆಯ ನಡುವೆ ಮಿಂಚಿನಂತೆ ಬಂದ ಬಾದ್‌ಶಾ, ಯುವ ಮನಸುಗಳಲ್ಲಿ ಸಂಚಲನ ಸೃಷ್ಟಿಸಿದರು. ನಮಸ್ಕಾರ ಮೈಸೂರು... ಹೇಗಿದ್ದೀರಾ... ಹ್ಯಾಪಿ ದಸರಾ... ನಾನಿಲ್ಲಿಗೆ ಹಾಡಲು ಬಂದಿಲ್ಲ... ನಿಮ್ಮೊಂದಿಗೆ ಪಾರ್ಟಿ ಮಾಡಲು ಬಂದಿದ್ದೇನೆ... ನಾನು ಗಾಯಕನಲ್ಲ, ನಾನೊಬ್ಬ ಬರಹಗಾರ ನನ್ನ ಭಾವನೆಯನ್ನು ಬರೆದು ಹಾಡುತ್ತೇನೆ... ನನ್ನೊಂದಿಗೆ ಹಾಡುವಿರಾ... ಕುಣಿಯುವಿರಾ... ಎಂದು ಜನಸಾಗರವನ್ನೇ ತನ್ನತ್ತ ಸೆಳೆದ ಬಾದ್‌ಶಾ, ಕುಳಿತಿದ್ದವರೆಲ್ಲರೂ ಎದ್ದು, ಕುಣಿದು ಕುಪ್ಪಳಿಸಿ ಮೈಮರೆಯುವಂತೆ ಮಾಡಿದರು. ತಮ್ಮ ಅಬ್ಬರದ ಡಿಜೆ ಸದ್ದಿನಿಂದ ಬೆಚ್ಚಿಬೀಳಿಸಿದ ಬಾದ್‌ಶಾ, ಎಲ್ಲರೊಂದಿಗೆ ಧ್ವನಿಗೂಡಿಸಿ ಹಾಡಿದರಲ್ಲದೆ ಕುಂತಲ್ಲಿ, ನಿಂತಲ್ಲಿ ಕೈ–ಕಾಲುಗಳನ್ನಾಡಿಸಿ ನಲಿದಾಡುವಂತೆ ಮಾಡಿದರು. 'ಲಡಕಿ ಬ್ಯುಟಿಫುಲ್', 'ಹೇ ಪಾಗಲ್' ಸೇರಿದಂತೆ ಹತ್ತಾರು ಆಲ್ಬಂ ರಿದಂ ಹಾಡುಗಳ ಮೂಲಕ ಗಂಟೆಗೂ ಹೆಚ್ಚು ಕಾಲ ಇಡೀ ವೇದಿಕೆ ಸಂಗೀತ, ಸಂಭ್ರಮ, ಸಡಗರ, ಮೋಜು, ಮಸ್ತಿ, ಮನರಂಜನೆಯಿಂದ ರಂಗೇರುವಂತೆ ಮಾಡಿದರು. ಕಡೆಗೆ ನಟ ಪುನೀತ್ ರಾಜ್‌ಕುಮಾರ್ ಅವರ 'ನೀನೆ ರಾಜಕುಮಾರ' ಹಾಡನ್ನು ಹಾಡುವ ಮೂಲಕ ಗೌರವ ಅರ್ಪಿಸಿ, ಕನ್ನಡಿಗರ ಹೃನ್ಮನ ಗೆದ್ದರು.

ಮನ ತಣಿಸಿದ ಸಂಗೀತ: ಇದಕ್ಕೂ ಮುನ್ನ ವೇದಿಕೆಗೆ ಆಗಮಿಸಿದ ಹಿನ್ನೆಲೆ ಗಾಯಕಿ ಸಂಗೀತ ರವೀಂದ್ರನಾಥ್, 'ಬೆಳಕಿನ ಕವಿತೆ ಬೆಡಗಿಗೆ ಸೋತೆ', ■6ನೇ ಪುಟಕ್ಕೆ



ಖ್ಯಾತ ರ್‍ಯಾಪರ್, ಬಾಲಿವುಡ್ ಗಾಯಕ ಬ್ಯಾಡ್ ಬಾಯ್ ಖ್ಯಾತಿಯ ಬಾದ್‌ಶಾ ರಿದಂ ಸಂಗೀತ.

ಜನ ಸಾಗರ... ಭರಪೂರ ಮನರಂಜನೆ...

ಯುವ ದಸರಾ ಮೂರನೇ ದಿನವೂ ಜನ ಸಾಗರವೇ ಹರಿದು ಬಂದಿತ್ತು. ವೇದಿಕೆಯಿಂದ ಕಣ್ಣು ಹಾಯಿಸಿದಷ್ಟು ದೂರದವರೆಗೆ ಕಿಕ್ಕಿರಿದು ನಿಂತಿದ್ದ ಜನ ಸಮೂಹ ಕುಣಿದು ಕುಪ್ಪಳಿಸಿತು. ಶಿಳ್ಳೆ–ಚಪ್ಪಾಳೆಯೊಂದಿಗೆ ಸಂಭ್ರಮಿಸಿದರು. ಟಿಕೆಟ್ ಖರೀದಿಸಿ ಕಾಯ್ದುಕೊಂಡಿದ್ದ ಸೀಟ್‌ಗಳು ಸಹ ಭರ್ತಿಯಾಗಿದ್ದವು. ರ್‍ಯಾಪರ್ ಬಾದ್‌ಶಾ ರಿದಂ ಸಂಗೀತಕ್ಕೆ ಯುವ ದಸರಾ ಬಣ್ಣದ ಬೆಳಕಿನಲ್ಲಿ ಬೆರೆತುಹೋಯಿತು. ಯುವತಿಯರಂತೂ ಬಾದ್ ಶಾ... ಬಾದ್‌ಶಾ.. ಎಂದು ಕೂಗುತ್ತಾ ಅಭಿಮಾನ ತೋರಿದರಲ್ಲದೆ ನಿಂತಲ್ಲೇ ನರ್ತಿಸಿದರು.



ನಕ್ಕರೆ ಅದೇ ಸ್ವರ್ಗ

ಟೀಚರ್ : ನೀವು ನನ್ನ ತರಗತಿಯಲ್ಲಿ ನಿದ್ದೆ ಮಾಡಲು ಸಾಧ್ಯವಿಲ್ಲ..
ವಿದ್ಯಾರ್ಥಿ : ಗೊತ್ತಿದೆ ಮೇಡಂ.. ಆದರೆ..
ಟೀಚರ್ : ಏನು ಆದರೆ?
ವಿದ್ಯಾರ್ಥಿ : ನೀವು ಸ್ವಲ್ಪ ಮೆತ್ತಗೆ ಪಾಠ ಮಾಡಿದರೆ, ನಾನು ಮಲಗಿಕೊಳ್ಳಬಹುದು.

ಮೈಸೂರು ಮಿತ್ರ

ಬುಧವಾರ, 9 ಅಕ್ಟೋಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಪಾಸಿಟಿವ್ ಥಿಂಕಿಂಗ್ ಅಂದ್ರೆ ಪ್ರತಿ ಸಲವೂ ಒಳ್ಳೆಯದೇ ಆಗುತ್ತದೆಂದು ನಿರೀಕ್ಷಿಸುವುದಲ್ಲ. ಎಲ್ಲವೂ ಒಳ್ಳೆಯದಕ್ಕೇ ಆಗುತ್ತಿದೆ ಎಂದು ತಿಳಿದು ಮುನ್ನಡೆಯುವುದು.

ವೇದ ಸುಳ್ಳಾದರೂ
ಗಾದೆ ಸುಳ್ಳಾಗದು { ಸಂಕಟ ಬಂದಾಗ ವೆಂಕಟರಮಣ

ನಿಮ್ಮ ಪತ್ರಗಳು

ಅವ್ಯವಸ್ಥೆಯ ತಾಣವಾಗಿದೆ ಚಾಮುಂಡಿಬೆಟ್ಟದ ದೇವಸ್ಥಾನ



ಮಾನ್ಯರೆ,

ಚಾಮುಂಡಿ ಬೆಟ್ಟದಲ್ಲಿ ಕಣ್ಗಾವಲಾಗಿರುವ ಕ್ಯಾಮರಾಗಳು ಕಣ್ಣು ಮುಚ್ಚಿ ಕುಳಿತಿವೆ. ಸ್ವಚ್ಛ ಮೈಸೂರಿಂದ ಹೆಸರು ಪಡೆದ ಮೈಸೂರು ಚಾಮುಂಡಿಬೆಟ್ಟದಲ್ಲಿ ಕಸದ ರಾಶಿ ತುಂಬಿದೆ. ವಿಶ್ವವಿಖ್ಯಾತ ಮೈಸೂರು ದಸರಾ ಪ್ರಾರಂಭವಾಗಿ ಆರು ದಿನ ಕಳೆದರೂ ತಾಯಿ ಚಾಮುಂಡೇಶ್ವರಿ ಸನ್ನಿಧಾನದಲ್ಲಿ ಸ್ವಚ್ಛತೆ ಇಲ್ಲದೆ ನಿರ್ಲಕ್ಷ್ಯ ಎದ್ದು ಕಾಣುತ್ತಿದೆ. ಗೋಪುರಕ್ಕೆ ಬಣ್ಣ ಹೊಡೆದು ನಂತರ ಆ ಬಣ್ಣಗಳು ನೆಲಕ್ಕೆ ಬಿದ್ದಿದ್ದರೂ ಸಹ ಆ ಬಣ್ಣವನ್ನು ಸ್ವಚ್ಛ ಮಾಡದೆ ಹಾಗೆಯೇ ಬಿಡಲಾಗಿದೆ. ಹಾಗೂ ಸಿಸಿ ಕ್ಯಾಮರಾ ಕೂಡ ಒಡೆದು ಹೋಗಿದೆ. ಇನ್ನು ಪ್ಲಾಸ್ಟಿಕ್ ಬಳಕೆ ಎದ್ದು ಕಾಣುತ್ತಿದೆ. ವಿಐಪಿ ಜನರ ಮಧ್ಯ ಸಾಮಾನ್ಯ ಜನರ ಪರದಾಟ ಹೆಚ್ಚಾಗಿದೆ. ಸಿಬ್ಬಂದಿ ವರ್ಗದವರ ಹಣದ ವ್ಯವಹಾರ ಹೆಚ್ಚಾಗಿದೆ. ಕೆಲವರಿಂದ ಹಣ ಪಡೆದು ಟಿಕೆಟು ಕೂಡ ಕೊಡದೆ ನೇರವಾಗಿ ದರ್ಶನ ಮಾಡಲು ಬಿಡುತ್ತಾರೆ. ಮುಖ ನೋಡಿ ಮಣೆ ಹಾಕುವ ಸಂಸ್ಕೃತಿ ಹೆಚ್ಚಾಗಿದೆ. ಇದರಿಂದ ಸಾಮಾನ್ಯ ಭಕ್ತಾದಿಗಳು ಸರದಿ ಸಾಲಿನಲ್ಲಿ ಬರುವವರಿಗೆ ಗಂಟೆಗಟ್ಟಲೇ ಕಾಯುವ ಪರಿಸ್ಥಿತಿ ಎದುರಾಗಿದೆ. ಭಾರತದಲ್ಲಿ ಪ್ರಖ್ಯಾತಿ ಪಡೆದ ಚಾಮುಂಡಿಬೆಟ್ಟ ಇಂತಹ ದುಸ್ಥಿತಿಗೆ ಬಂದಿರುವುದು ವಿಷಾದಕರ. ದಯಮಾಡಿ ಒಂದು ಮನವಿ ದೇವಸ್ಥಾನದ ಬಾಗಿಲನ್ನು ಬೆಳಗ್ಗೆ 5.30ಕ್ಕೆ ತೆರೆದು ಸಾರ್ವಜನಿಕರ ದರ್ಶನಕ್ಕೆ ಅನುವು ಮಾಡಿಕೊಟ್ಟರೆ ತುಂಬಾ ಒಳ್ಳೆಯದು. ಇತ್ತೀಚಿನ ದಿನಗಳಲ್ಲಿ 7.30ಕ್ಕೆ ದೇವರ ಬಾಗಿಲು ತೆಗೆಯುತ್ತಿದ್ದಾರೆ.

–ಮಧು ಪೂಜಾರ್ ಎನ್., ಮೈಸೂರು.

ಪರಸಯ್ಯನಹುಂಡಿ ರಸ್ತೆ ಡಾಂಬರೀಕರಣಗೊಳಿಸಿ

ಮಾನ್ಯರೆ,

ಮೈಸೂರು–ಹೆಚ್.ಡಿ.ಕೋಟೆ ರಸ್ತೆಯ ಪರಸಯ್ಯನಹುಂಡಿಯಲ್ಲಿ ದಸರಾಗೆ ಸಾರ್ವಜನಿಕರನ್ನು ಸ್ವಾಗತಿಸುವ ಬೆಳಕಿನ ಕಮಾನನ್ನು ಅಳವಡಿಸಲಾಗಿದೆ. ಇಡೀ ಮೈಸೂರು ದಸರಾದ ಸಂಭ್ರಮದಲ್ಲಿ ಮಿಂದೇಳುತ್ತಿದೆ. ಆದರೆ ಇದೇ ಕಮಾನಿನ ಕೇವಲ ನೂರು ಮೀಟರ್ ಅಂತರದಲ್ಲಿರುವ ತಿರುವಿನಲ್ಲಿ ರಸ್ತೆಯು ಆಳದ ಗುಂಡಿಗಳಿಂದ ಕೂಡಿದೆ. ದಸರಾ ಸಂಭ್ರಮಕ್ಕೆ ಅತೀ ಹೆಚ್ಚು ವಾಹನಗಳು ಈ ರಸ್ತೆಯಲ್ಲಿ ಚಲಿಸುತ್ತವೆ. ಮಳೆ ಬಿದ್ದರೆ ಆ ಗುಂಡಿಯ ಆಳದ ಅರಿವಿಲ್ಲದೆ ಅಪಘಾತವಾಗುವುದು ನಿಶ್ಚಿತ. ಕೆಲವು ತಿಂಗಳ ಹಿಂದೆ ಗುಂಡಿಗಳನ್ನು ಮುಚ್ಚಿದ್ದರು. ಮಳೆಯ ಕಾರಣ ಮತ್ತೆ ಹಾಳಾಗಿದೆ. ದಯಮಾಡಿ ಸಂಬಂಧಪಟ್ಟ ಅಧಿಕಾರಿಗಳು ಈ ಸಮಸ್ಯೆಯನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ಗುಣಮಟ್ಟದ ಡಾಂಬರನ್ನು ಹಾಕಿ ಸರಿಪಡಿಸುವಂತೆ ಈ ಮೂಲಕ ಮನವಿ.

–ಮಂಜೇಶ್ ದೇವಗಳ್ಳಿ, ಮೈಸೂರು

ಸಚಿವ ಸೋಮಣ್ಣಗೆ ಅಭಿನಂದನೆಗಳು

ಮಾನ್ಯರೆ,

ಇನ್ನು ಮುಂದೆ ರೈಲ್ವೆ ಇಲಾಖೆ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಕನ್ನಡ ಭಾಷೆಯಲ್ಲೇ ಬರೆಯಲು ರಾಜ್ಯದ ಅಭ್ಯರ್ಥಿಗಳಿಗೆ ಅವಕಾಶ ಕಲ್ಪಿಸಿಕೊಡಲಾಗಿದೆ. ಇದಕ್ಕಾಗಿ ಶ್ರಮ ವಹಿಸಿದ ಕೇಂದ್ರ ರೈಲ್ವೆ ಸಚಿವ ವಿ. ಸೋಮಣ್ಣ ಅವರಿಗೆ ಅಭಿನಂದನೆಗಳು. ಈ ಬೇಡಿಕೆ ಕಳೆದ ನಾಲ್ಕು ದಶಕಗಳಿಂದ ಕೇಳಿ ಬರುತ್ತಿತ್ತು ಎನ್ನಲಾಗಿದೆ. ಮುಂಬರುವ ದಿನಗಳಲ್ಲಿ ಸುಮಾರು 16,000 ಹುದ್ದೆಗಳಿಗೆ ರೈಲ್ವೆ ಇಲಾಖೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸುವ ನಿರೀಕ್ಷೆ ಇದ್ದು, ನಮ್ಮ ರಾಜ್ಯದ ಅಭ್ಯರ್ಥಿಗಳು ಕನ್ನಡದಲ್ಲೇ ಬರೆಯುವ ಮೂಲಕ ಹೆಚ್ಚಿನ ಅಂಕಗಳಿಸಿ ಹೆಚ್ಚಿನ ಉದ್ಯೋಗಾವಕಾಶ ಪಡೆಯುವ ಸಾಧ್ಯತೆಗಳಿವೆ. ಈ ಹಿಂದೆ ಐಎಎಸ್ ಪರೀಕ್ಷೆಯನ್ನು ಮೊದಲ ಬಾರಿಗೆ ಕನ್ನಡದಲ್ಲೇ ಬರೆದ ದಿವಂಗತ ಕೆ. ಶಿವರಾಮ್ ಐಎಎಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಹಲವು ಪ್ರಮುಖ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದರು. ಬ್ಯಾಂಕಿಂಗ್ ಸೇರಿದಂತೆ ಕೇಂದ್ರ ಸರ್ಕಾರ ನಡೆಸುವ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ರಾಜ್ಯದ ಅಭ್ಯರ್ಥಿಗಳಿಗೆ ಕನ್ನಡದಲ್ಲೇ ಬರೆಯುವ ಅವಕಾಶ ಸಿಕ್ಕರೆ ಮತ್ತಷ್ಟು ಅನುಕೂಲವಾಗುತ್ತದೆ. ರಾಜ್ಯವನ್ನು ಪ್ರತಿನಿಧಿಸುವ ಸಂಸತ್ ಸದಸ್ಯರು ಹಾಗೂ ಕೇಂದ್ರ ಸಚಿವರು ಇದರ ಬಗ್ಗೆ ಹೆಚ್ಚಿನ ಪ್ರಯತ್ನ ಪಡಬೇಕಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಹೊಸದಾಗಿ ಜಾತಿ ಗಣತಿ ನಡೆಯುವಂತಾಗಲಿ

ಮಾನ್ಯರೆ,

ಕಳೆದ ಒಂಬತ್ತು ವರ್ಷಗಳ ಹಿಂದೆ ಮಾಡಿದೆ ಎನ್ನಲಾಗುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಜಾತಿ ಸಮೀಕ್ಷೆಯ ವರದಿಯನ್ನು ಈಗ ಬಿಡುಗಡೆ ಮಾಡುವುದಾಗಿ ಮುಖ್ಯಮಂತ್ರಿಗಳು ಮುನ್ನೆಲೆಗೆ ತಂದಿದ್ದಾರೆ. ಮಾಧ್ಯಮಗಳ ಮುಂದೆಯೂ ಹೇಳುತ್ತಿದ್ದಾರೆ. ಆದರೆ ಜಾತಿ ಸಮೀಕ್ಷೆ ಸರಿಯಾದ ರೀತಿಯಲ್ಲಿ ನಡೆದಿಲ್ಲ ಎಂಬುದಕ್ಕೆ ಅನೇಕ ಕಾರಣಗಳಿವೆ. ಉದಾಹರಣೆಗೆ ನನ್ನ ಸ್ವಂತ ಅನುಭವವನ್ನೇ ಹೇಳುತ್ತೇನೆ. ನಮ್ಮ ಮನೆಗಾಗಲೀ ಅಥವಾ ನಮ್ಮ ಬೀದಿಗಾಗಲೀ ಯಾವುದೇ ಅಧಿಕಾರಿಗಳು ಬಂದು ಸಮೀಕ್ಷೆ ನಡೆಸಿಲ್ಲ.

ಸಮೀಕ್ಷೆ ನಡೆಸುವವರು ಬಂದಾಗ ನಾವು ಊರಿನಲ್ಲಿ ಇಲ್ಲದೇ ಇರಬಹುದೆಂದು ನಮ್ಮ ಅಕ್ಕ- ಪಕ್ಕದ ಮನೆಯವರನ್ನು ಜಾತಿ ಸಮೀಕ್ಷೆ ಮಾಡುವವರು ಯಾರಾದರೂ ಮನೆ ಬಳಿ ಬಂದಿದ್ದರ ಎಂದು ವಿಚಾರಿಸಿದರೆ ಇಲ್ಲ ಎನ್ನುತ್ತಾರೆ. ಹಾಗಿದ್ದ ಮೇಲೆ ಜಾತಿ ಸಮೀಕ್ಷೆ ಮಾಡಿರುವುರುವುದಾದರು ಎಲ್ಲಿ?

ಎಲ್ಲೋ ಎ.ಸಿ. ರೂಂನಲ್ಲಿ ಕುಳಿತು ಮಾಡಿರುವ ಜಾತಿ ಗಣತಿಯನ್ನು ಯಾರೂ ಒಪ್ಪಲು ಸಾಧ್ಯವಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ಒಂದು ಅಂದಾಜಿನ ಪ್ರಕಾರ, ಸುಮಾರು 40 ರಿಂದ 50 ಲಕ್ಷ ಜನರು ಈ ಜಾತಿ ಗಣತಿಯಿಂದ ಹೊರಗುಳಿದಿದ್ದಾರೆ. ಈಗಾಗಲೇ ಆಡಳಿತ ಮತ್ತು ವಿರೋಧ ಪಕ್ಷಗಳಿಂದ ಈಗ ನಡೆದಿರುವ ಜಾತಿ ಗಣತಿಯನ್ನು ಪರಿಗಣಿಸಬಾರದೆಂಬ ಒತ್ತಾಯವು ಇರುವುದರಿಂದ ಹೊಸದಾಗಿ ನಿಖರವಾಗಿ ಜಾತಿ ಗಣತಿ ನಡೆಯುವಂತಾಗಲಿ.

–ಬೂಕನಕೆರೆ ವಿಜೇಂದ್ರ, ಲೇಖಕರು. ಕುವೆಂಪು ನಗರ, ಮೈಸೂರು



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ಡಾ. ಸುಧಾ ಅವರ 'ನೆನಪಿನ ಹೆಜ್ಜೆಗಳು'


ಜೀವನ ಚರಿತ್ರೆಯನ್ನು ಬರೆಯುವ ಸಂಪ್ರದಾಯ ಎಲ್ಲಾ ದೇಶಗಳಲ್ಲೂ ಇದೆ. ನಮ್ಮ ದೇಶದಲ್ಲಿ ಬಾಣಭಟ್ಟನು ಬರೆದ ಹರ್ಷ ಚರಿತ (ಕ್ರಿ.ಶ. ಏಳನೆಯ ಶತಮಾನದ ಪೂರ್ವಾರ್ಧ) ಸ್ಥಾಣ್ವೀಶ್ವರದ ಚಕ್ರವರ್ತಿ ಹರ್ಷವರ್ಧನನ ಜೀವನವನ್ನು ವರ್ಣಿಸುತ್ತದೆ. ಹಾಗೇ ವೇಮಭೂಪಾಲ ಚರಿತ ಮುಂತಾದ ಗ್ರಂಥಗಳೂ ರಾಜರ ಕಥೆಗಳನ್ನು ಅತಿಶಯೋಕ್ತಿ–ಉತ್ಪ್ರೇಕ್ಷೆಗಳೊಡನೆ ಹೇಳುತ್ತವೆ. ಕೆಲವರು ಕವಿಗಳು ಆ ರಾಜರ ಕಥೆಗಳೊಡನೆ ತಮ್ಮ ಚರಿತ್ರೆಯನ್ನೂ ಹೇಳಿರುವುದುಂಟು. ಬಿಲ್ಹಣನು ವಿಕ್ರಮಾಂಕ ದೇವ ಚರಿತ ಎಂಬ ಮಹಾಕಾವ್ಯದಲ್ಲಿ ಕೊನೆಯ ಸರ್ಗವನ್ನು ತನ್ನ ಕಥೆಯನ್ನೂ ಬರೆದಿದ್ದಾನೆ. ಹರ್ಷ ಚರಿತದ ಆರಂಭದಲ್ಲಿ ಬಾಣನೂ ತನ್ನ ಕಥೆಯನ್ನು ಹೇಳಿದ್ದಾನೆ. ಆದರೆ ಅವೆಲ್ಲ ಕಾವ್ಯಾಂಶಕ್ಕೇ ಪ್ರಾಧಾನ್ಯವನ್ನು ಕೊಟ್ಟಿವೆ. ವಾಸ್ತವಾಂಶ ಗಳು, ಐತಿಹಾಸಿಕ ಘಟನೆಗಳು ಅಲ್ಲಿ ಗೌಣವಾಗಿವೆ.

ಪಾಶ್ಚಾತ್ಯ ಭಾಷೆಗಳ ಮತ್ತು ಸಾಹಿತ್ಯದ ಪರಿಚಯವಾದ ಮೇಲೆ ಭಾರತ ದೇಶದಲ್ಲಿ ಹೊಸ ರೀತಿಯ, ವಾಸ್ತವ್ಯ ಪ್ರಧಾನ ಚರಿತ್ರೆಗಳೂ ಆತ್ಮಚರಿತ್ರೆಗಳೂ ಬಂದುವು. ಅವು ಹೊಸ ಸಾಹಿತ್ಯ ಪ್ರಕಾರವನ್ನೇ ಸೃಷ್ಟಿಸಿದವು ಎನ್ನಬಹುದು. ಕುವೆಂಪು ಅವರ **ನೆನಪಿನ ದೋಣಿಯಲ್ಲಿ,** ಎಸ್.ಎಲ್. ಭೈರಪ್ಪನವರ **ಭಿತ್ತಿ** ಇತ್ಯಾದಿಗಳು ಈ ಪ್ರಕಾರದ ಉತ್ತಮ ಉದಾಹರಣೆಗಳು. ಅವುಗಳಲ್ಲಿ ಎಲ್ಲರಿಗೂ ಮಾರ್ಗದರ್ಶನವನ್ನು ಮಾಡಬಲ್ಲ ತತ್ತ್ವವೂ ಸತ್ತ್ವವೂ ಇವೆ.

ಅಂತಹವರು ವಿಶ್ವ ಪ್ರಸಿದ್ಧ ಕವಿಗಳೋ ಸಾಹಿತಿಗಳೋ ಆಗಿದ್ದರು. ಅವರು ಆತ್ಮ ಚರಿತ್ರೆಯನ್ನು ಬರೆಯುವುದು ಸರಿ. ಸಾಮಾನ್ಯರ ಬದುಕಿನಲ್ಲಿ ಉಲ್ಲೇಖಾರ್ಹವಾದ ಅಂಶವೇನಿರುತ್ತದೆ? ಎನ್ನುವುದು ಸರಿಯಲ್ಲ. ಎಲ್ಲರಲ್ಲೂ ಪ್ರತಿಭೆಯ ಅಂಶ ಇದ್ದೇ ಇರುತ್ತದೆ. ಪ್ರತಿಯೊಬ್ಬರ ಜೀವನದಲ್ಲೂ ವೈಶಿಷ್ಟ್ಯ ಹಾಸು ಹೊಕ್ಕಾಗಿರುತ್ತದೆ. ಅದು ಬೆಳಕಿಗೆ ಬಂದಾಗ ನಾವು ಸಾಮಾನ್ಯರೆಂದು ಭಾವಿಸಿದ್ದವರೂ ಅಸಾಮಾನ್ಯ ಪ್ರಜ್ಞಾಪುಂಜ ಎಂಬ ಅರಿವು ಉಂಟಾಗುತ್ತದೆ. ವ್ಯಕ್ತಿಗಳಲ್ಲಿರುವ ನಿರೂಪಣಾ ಶಕ್ತಿ ಅವರ ಗ್ರಂಥಗಳನ್ನು ಓದಿದಾಗ ಗೋಚರವಾಗುತ್ತದೆ.

ಡಾ. ಸುಧಾ ಕನ್ನಡ ಸಾಹಿತ್ಯ ಲೋಕಕ್ಕೆ ಅಪರಿಚಿತರೇನಲ್ಲ. ಈ ಹಿಂದೆಯೇ ಹತ್ತು ಕೃತಿಗಳನ್ನು ಕನ್ನಡಕ್ಕೆ ನೀಡಿದ್ದಾರೆ. **ಸುಂದರ ಸಕುರದ ನಾಡಿನಲ್ಲಿ, ಪುರಾತನ ಹೊನ್ನೆಸಳುಗಳು, ಅಮರ ಕೋಶದಲ್ಲಿ ಪ್ರಾಣಿ ಪ್ರಪಂಚ, ಮುಂಜಾನೆಯ ಮಂಜಿನ ಹನಿಗಳು, ಹುಲಿಗಳ ಪ್ರವಾಸ ಮತ್ತು ಇತರ ಕಥೆಗಳು, ಕಾಫಿಗೂ ಡಿಗ್ರಿ ಕೊಡ್ತಾರೆ, ಚಿತ್ತ ಚಿತ್ತಾರ, ಮಾನವನ ಅನುವಂಶೀಯ ಕಾಯಿಲೆಗಳು, ನಂಯಾಗರದ ನಾಡಲ್ಲಿ**... ಇತ್ಯಾದಿ ಕೃತಿಗಳು ಕನ್ನಡಕ್ಕೆ ಅವರ ಕೊಡುಗೆ. ಅಲ್ಲದೆ ಇಂಗ್ಲೀಷಿನಲ್ಲಿ In search of Roots, tour of Tigers and other environmental stories, principles of Zoology ಎಂಬ ಗ್ರಂಥಗಳನ್ನು ಬರೆದು ಪ್ರಕಟಿಸಿದ್ದಾರೆ.

ನೆನಪಿನ ಹೆಜ್ಜೆಗಳನ್ನು ಅವರು ಆತ್ಮಕಥನವೆಂದು ಕರೆದಿದ್ದಾರೆ. ಶೈಶವದ ನೆನಪು ಯಾರಿಗೂ ನೆನಪಿನಲ್ಲಿರುವುದಿಲ್ಲ. ಆದ್ದರಿಂದ ಕಥನವನ್ನು ಬಾಲ್ಯದಿಂದ ಆರಂಭಿಸಿದ್ದಾರೆ. ಶಾಲೆ, ಸ್ಲೇಟು, ಬಳಪ, ಪೆನ್ಸಿಲ್, ಪೆನ್ ಇತ್ಯಾದಿಗಳ ಅನುಭವ, ವಿದ್ಯಾರ್ಥಿಗಳು ನವಿಲುಗರಿಯನ್ನು ಪುಸ್ತಕದಲ್ಲಿಟ್ಟುಕೊಂಡಿರುವುದು ಇದೆಲ್ಲ ನಮ್ಮೆಲ್ಲರ ಅನುಭವವೇ. ಇದೆಲ್ಲ ನಡೆದದ್ದು ಹೊಸಪೇಟೆಯಲ್ಲಂತೆ. ಅನಂತರ ಚಿತ್ರದುರ್ಗದ ಚಿತ್ರಣ. ಅಲ್ಲಿ ಟೈಫಾಯ್ಡ್‌ನಿಂದ ಬಳಲಿದ್ದು, ಅಜ್ಜಿಯ ಮನೆಯಲ್ಲಿ ಮಕ್ಕಳೆಲ್ಲರೂ ಕೈ ತುತ್ತು ತಿನ್ನುತ್ತಿದ್ದುದು ಮುಂತಾದುವು ಸ್ವಾರಸ್ಯಪೂರ್ಣವಾಗಿ ಮೂಡಿಬಂದಿವೆ. ಚಿತ್ರದುರ್ಗವಾದ ಮೇಲೆ ಮೈಸೂರಿಗೆ ಆಗಮನ. ತಂದೆ ಸರ್ಕಾರಿ ನೌಕರರಾಗಿದ್ದುದರಿಂದ ಬೇರೆ ಬೇರೆ ಊರುಗಳ ಅನುಭವ. 1960 ರಲ್ಲಿ ಸುಧಾ ಅವರ ತಂದೆ ಮೈಸೂರಿನಲ್ಲಿ ಮನೆ ಕಟ್ಟಿಸಿದ್ದು, ಗಾರೆಗಾಗಿ ಎತ್ತು ಗಾಣವನ್ನು ತಿರುಗಿಸುತ್ತಿದ್ದುದು –ಎಲ್ಲವನ್ನೂ ಸುಧಾ ವರ್ಣಿಸಿದ್ದಾರೆ. ಕ್ರೈಸ್ಟ್ ದ ಕಿಂಗ್ ಕಾನ್ವೆಂಟಿನಲ್ಲಿ ಪ್ರೌಢಶಾಲಾ ವ್ಯಾಸಂಗ. ಅಲ್ಲಿ ಕಲಿತ ಶಿಸ್ತು ಲೇಖಕ ರನ್ನು ಜೀವನ ದುದ್ದಕ್ಕೂ ಸುಮಾರ್ಗದಲ್ಲಿ ನಡೆಸಿ ಕೊಂಡು ಬಂದಿದೆ ಎಂದಿದ್ದಾರೆ. ಶಾರದಾ ವಿಲಾಸ ಕಾಲೇಜಿನ ದಿನಗಳ ಅನುಭವಗಳನ್ನು ಮೆಲುಕು



ಹಾಕಿದ್ದಾರೆ. ಅಂದಿನ ಅಧ್ಯಾಪಕರ ವಿದ್ಯಾನೈಪುಣ್ಯ, ಬೋಧನಾ ಚಾತುರ್ಯಗಳನ್ನು ವರ್ಣಿಸಿದ್ದಾರೆ. ವಿಶೇಷವಾಗಿ ಪ್ರಾಣಿ ಶಾಸ್ತ್ರವನ್ನು ಕಲಿಸುತ್ತಿದ್ದ ಪ್ರೊ. ಹೇಮಚಂದ್ರ ಅವರ ಬಗೆಗೆ ಹೇಳಿರುವ ಮಾತುಗಳು ಗಮನಾರ್ಹ. "ವಿಭಾಗದ ಮುಖ್ಯಸ್ಥರು ಪ್ರೊ. ಮೇಜರ್ ಎಂ.ಎನ್. ಹೇಮಚಂದ್ರರವರು. ನಾನು ಪ್ರಾಣಿಶಾಸ್ತ್ರದ ಅಧ್ಯಯನದಲ್ಲಿ ಸಾಧನೆ ಮಾಡಿರುವುದಕ್ಕೆ ನನ್ನ ಈ ಗುರುಗಳೇ ಸ್ಫೂರ್ತಿ ಮತ್ತು ಕಾರಣ. ಅವರಿಗೆ ಎಷ್ಟು ವಂದಿಸಿದರೂ ಸಾಲದು. ಸ್ಫೂರ್ತಿದಾಯಕವಾದ ತರಗತಿಗಳು ಅವರದ್ದು..." (ಪು. 27)

ಆ ಕಾಲದ ಹಲವರು ಅಧ್ಯಾಪಕರು ವಿದ್ಯಾರ್ಥಿಗಳ ಮೇಲೆ ಎಂಥಹ ಪರಿಣಾಮ ಬೀರುತ್ತಿದ್ದರೆಂಬುದನ್ನಿಲ್ಲಿ ಕಾಣಬಹುದು. ಇದೇ ರೀತಿ ಸುಧಾ ಅವರು ಶ್ರೇಷ್ಠ ಗುರುಗಳ ಮಾರ್ಗದರ್ಶನದಲ್ಲಿ ಸ್ನಾತಕೋತ್ತರ ಪದವಿ (ಎಂ.ಎಸ್ಸಿ)ಯನ್ನು ಪಡೆದ ಕಥನ ಚೆನ್ನಾಗಿ ಮೂಡಿಬಂದಿದೆ.

ವಿದ್ಯಾರ್ಥಿಯಾಗಿ ಕಲಿಯುವುದೇ ಬೇರೆ. ಅಧ್ಯಾಪಕರಾಗಿ ಕಲಿಸುವುದೇ ಬೇರೆ. ಅಧ್ಯಾಪಕರಾಗಿ ದುಡಿಯುವಾಗ ಸುಧಾ ಅವರ ಅನುಭವಗಳು ಅತ್ಯಂತ ರಸವತ್ತಾಗಿವೆ. ಮಹಾರಾಣಿ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಪ್ರೊ. ವೆಸ್ಲಿ, ಡಾ. ಜೆ.ಪಾಪೇಗೌಡ, ಡಾ.ಸಿ.ಕೆ. ವಿಶ್ವನಾಥ್, ಪ್ರೊ. ವಿ.ಎಂ.ಪಾರ್ವತಮ್ಮ ಇವರನ್ನು ಸುಧಾ ಅವರು ನೆನೆಸಿಕೊಂಡಿದ್ದಾರೆ, ಕೊಂಡಾಡಿದ್ದಾರೆ.

ಸಾಂಸಾರಿಕ ಜೀವನದಲ್ಲಿ ಸುಧಾ ಅವರದು ಅನುರೂಪ ದಾಂಪತ್ಯ. ಅವರ ಪತಿ ರಮೇಶ್ ಅವರು ಲಕ್ಷಕ್ಕೊಬ್ಬರು. ಅವರ ದಾಂಪತ್ಯದ ಫಲವಾಗಿದ್ದ ಚೈತ್ರಾ ಚಿಕ್ಕ ಹುಡುಗಿಯಾಗಿದ್ದಾಗಲೇ ತೀರಿ ಹೋದದ್ದು ಮಾತ್ರ ವರ್ಣಿಸಲಾಗದ ಶೋಕದ ಕಾರಣ. ಈ ಸಂದರ್ಭವನ್ನು ದಾಖಲಿಸುವಾಗ ಸುಧಾ ಅವರು –

ನಕ್ಕಷ್ಟು ದಿನ ನಿನದು, ಅತ್ತ ದಿನ ನಿನದಲ್ಲ
ನೀ ನಗುವ ಹೂವಾಗು, ಜಗದ ವನದಲ್ಲಿ
ಹೂಬಿಡದ ಲತೆಗಾರು ನೀರನೆರೆಯುವರಿಲ್ಲ
ನಗಿಸಿ ನೀ ನಗುತಲಿರೊ ಮಂಕುತಿಮ್ಮ!!

ಎಂಬ ಕೆ.ಸಿ. ಶಿವಪ್ಪನವರ ಮಾತನ್ನು ಉಲ್ಲೇಖಿಸಿದ್ದಾರೆ.

ಏಕಮಾತ್ರ ಪುತ್ರಿಯ ನಿಧನ ಮರೆಯಲಾಗದ ಶೋಕವಾದರೂ ಎದೆಗುಂದದೆ ಸುಧಾ ಅವರು ಪ್ರಾಣಿಶಾಸ್ತ್ರದಲ್ಲಿ ಸಂಶೋಧನೆಯನ್ನು ಮಾಡಿ ಡಾ. ಸುಧಾ ಆದರು. ವೃತ್ತಿ ಜೀವನದಲ್ಲಿದ್ದ ಅವರ ನಿಷ್ಠೆ ಅವರನ್ನು ಮೇಲೆ ಮೇಲಕ್ಕೆ ಒಯ್ದಿತು. ಪ್ರಾಂಶುಪಾಲರಾಗಿ ಅವರು ಮೊದಲು ಕೆಲಸ ಮಾಡಿದ್ದು ಶ್ರೀರಂಗಪಟ್ಟಣದಲ್ಲಿ. ಅಲ್ಲಿ ಹೊಸ ಕಟ್ಟಡಕ್ಕೆ ಕಾಲೇಜನ್ನು ವರ್ಗಾಯಿಸಿದ್ದು. ನ್ಯಾಕ್ ಕಮಿಟಿಯ ಆಗಮನಕ್ಕಾಗಿ ಮಾಡಿದ ಸಿದ್ಧತೆ–ಇವನ್ನೆಲ್ಲ ಸ್ವಾರಸ್ಯಪೂರ್ಣವಾಗಿ ಡಾ. ಸುಧಾ ವರ್ಣಿಸಿದ್ದಾರೆ. ಗಣಪತಿ ಹಬ್ಬದ ಮೆರವಣಿಗೆಯ ವೇಳೆ ಪ್ರಿನ್ಸಿಪಾಲರಿಗೆ ಉಂಟಾಗುವ ಆತಂಕವನ್ನು ಅವರು ಹೇಳಿದ್ದಾರೆ.

ಮೈಸೂರಿನ ಮಹಾರಾಣಿ ಕಾಲೇಜಿಗೆ ಪ್ರಿನ್ಸಿಪಾಲರಾಗಿ ಬಂದುದು ಡಾ. ಸುಧಾ ಅವರ ಜೀವನದಲ್ಲಿ ದೊಡ್ಡ ದಿನ. ತಾವು ಓದಿದ ವಿಜ್ಞಾನ ವಿಭಾಗದಲ್ಲಿ ಅಧ್ಯಾಪಕರಾಗುವ ಮತ್ತು ಪ್ರಾಂಶುಪಾಲರಾಗಿ ಮಹಾ ವಿದ್ಯಾಲಯವನ್ನು ಮುನ್ನಡೆಸುವ ಸುಯೋಗ. ಎಷ್ಟು ಜನರಿಗೆ ಲಭ್ಯವಾದೀತು!

ಆ ಸೇವಾವಧಿಯೂ ಮುಗಿದ ಮೇಲೆ ಸರ್ಕಾರದ ಲೆಕ್ಕದಲ್ಲಿ ಡಾ.ಸುಧಾ ನಿವೃತ್ತರಾದರೂ ನಾನಾ ಸ್ಥಾನಗಳಲ್ಲಿ ಕೆಲಸ ಮಾಡುತ್ತಾ ಕರ್ಮ ಯೋಗಿಯೇ ಆಗಿ ಸಮಸ್ತ ಸಮಾಜದ ಹಿತವನ್ನು ಸಾಧಿಸುತ್ತಿದ್ದಾರೆ. ಹಲವು ದೇಶಗಳಲ್ಲಿ ಪ್ರವಾಸ ಮಾಡಿರುವ ಅವರು ಅಲ್ಲಲ್ಲಿ ಗೋಚರಿ ಸಿದ ವಿಶೇಷಗಳನ್ನೆಲ್ಲ ದಾಖಲಿಸಿ ಜಿಜ್ಞಾಸುಗಳಿಗೆ ಆನಂದವನ್ನು ತಂದಿದ್ದಾರೆ.

ಕನ್ನಡ ಗದ್ಯ ಲೇಖನ ಕಲೆ ಡಾ.ಎಸ್. ಸುಧಾ ಅವರಿಗೆ ಸಿದ್ಧಿಸಿದೆ. ಅವರ ಒಂದು ಹವ್ಯಾಸದ ಬಗೆಗೆ ಅವರು ಬರೆದಿರುವ ಕೆಲವು ಸಾಲುಗಳನ್ನು ಉದಾಹರಣೆಯಾಗಿ ನೋಡಬಹುದು :

"ಒಮ್ಮೆ ಒಂದು ವಸ್ತುಪ್ರದರ್ಶನಕ್ಕೆ ಹೋಗಿದ್ದೆ, ಸುಮಾರು ಮೂವತ್ತು ವರ್ಷಗಳ ಹಿಂದೆ. ಅಲ್ಲಿ ಒಂದು ಮಣ್ಣಿನ ಆನೆ ಮನ ಸೆಳೆಯಿತು. ಅದರ ಮೈಮೇಲೆ ಕುಸುರಿ ಕೆಲಸದಂತೆ ಮಾಡಿತ್ತು. ಪ್ರಮಾಣಬದ್ಧ ವಾದ ದೇಹವನ್ನು ಸೃಷ್ಟಿಸಿದ್ದ ಆ ಕುಂಬಾರ ಕಲಾಕಾರ. ಆ ಆನೆಯನ್ನು ಕೊಂಡುಕೊಂಡೆ. ಅಲ್ಲಿಂದ ಪ್ರಾರಂಭವಾಯಿತು. ನನ್ನ ಇನ್ನೊಂದು ಹವ್ಯಾಸ ಅದೇ ಆನೆಗಳ ಸಂಗ್ರಹ. ನಿಜವಾದ ಆನೆಗಳು ಎಂದುಕೊಳ್ಳಬೇಡಿ. ಆನೆಗಳ ಮೂರ್ತಿಗಳು, ಪೈಂಟಿಂಗ್‌ಗಳು, ಚಿತ್ರಗಳು ಮತ್ತು ಎಲ್ಲಾ ರೀತಿಯ ವಸ್ತುಗಳಲ್ಲಿ ಮಾಡಿರುವಂಥದ್ದು. ನಾನು ಭೇಟಿ ಕೊಟ್ಟ ಸ್ಥಳಗಳಲ್ಲೆಲ್ಲ ಒಂದು ಆನೆಯನ್ನು ತರುವ ಅಭ್ಯಾಸವಾಗಿ ಹೋಗಿದೆ. ಇದಲ್ಲದೆ ಆನೆಗಳ ಅಂಚೆ ಚೀಟಿಗಳೂ ಇವೆ. ದೇಶ ವಿದೇಶಗಳ ಆನೆಗಳು ಸುಮಾರು ನೂರೈವತ್ತರಷ್ಟು ಸಂಗ್ರಹವಾಗಿವೆ. ಮೂರು ವರ್ಷಗಳ ಹಿಂದೆ ನನ್ನ ಆನೆ ಸಂಗ್ರಹವನ್ನು ಮೈಸೂರು ಆರ್ಟ್ ಗ್ಯಾಲರಿಯಲ್ಲಿ ಪ್ರದರ್ಶನಕ್ಕೆ ಇಟ್ಟಿದ್ದರು. ಪ್ರತಿವರ್ಷ ಆಗಸ್ಟ್ 12ನೆಯ ತಾರೀಖಿನ ದಿನವನ್ನು ಆನೆಗಳ ದಿನವನ್ನಾಗಿ ಆಚರಿಸಲಾಗುತ್ತದೆ. ಇದರ ಸಲುವಾಗಿ ಪ್ರದರ್ಶನ ಏರ್ಪಟ್ಟಿತ್ತು. ಮೈಸೂರು ಆರ್ಟ್ ಗ್ಯಾಲರಿಯವರು ನನಗೆ ಸನ್ಮಾನವನ್ನು ಮಾಡಿದರು" (ಪು. 187)

ಹೀಗೆ ಸರಳವಾದ ಕನ್ನಡ ಗದ್ಯವನ್ನು ಬರೆಯುವ ಅಭ್ಯಾಸವು ಎಲ್ಲರಲ್ಲೂ ಬೆಳೆಯಬೇಕು.

ಚೈತ್ರ ಫೌಂಡೇಷನ್

ಸಮಾಜದಿಂದ ಎಲ್ಲವನ್ನೂ ಪಡೆದುಕೊಳ್ಳುವವರು ಹಲವರಿದ್ದಾರೆ. ಆದರೆ ಸಮಾಜದಿಂದ ಪಡೆದುಕೊಂಡಿದ್ದಕ್ಕಿಂತ ಹೆಚ್ಚಾಗಿ ಅದಕ್ಕೆ ಕೊಡುವವರು ಕೆಲವರು ಮಾತ್ರ. ಅಂತಹ ವಿರಳರಲ್ಲಿ ಡಾ.ಎಸ್. ಸುಧಾ ಅವರನ್ನು ಅವರ ಪತಿ ರಮೇಶ್ ಅವರನ್ನು ಪರಿಗಣಿಸಬೇಕು. ಅವರಿಂದ ಸ್ಥಾಪಿತವಾದ ಚೈತ್ರ ಫೌಂಡೇಷನ್ ಸಮಾಜಕ್ಕಾಗಿ, ದೇಶಕ್ಕಾಗಿ, ವಿಶ್ವಕ್ಕಾಗಿ ದುಡಿದ ಅನೇಕ ಜನರನ್ನು ಸನ್ಮಾನಿಸಿದೆ. ಹಲವು ಶಾಲೆಗಳಿಗೆ ಆರ್ಥಿಕ ನೆರವನ್ನು ನೀಡಿದೆ. ಯಾರ ಕಣ್ಣಿಗೂ ಬೀಳದೆ ಸೇವಾನಿರತರಾಗಿರುವ 'ಎಲೆ ಮರೆ ಕಾಯಿ' ಎನಿಸಿಕೊಂಡವರನ್ನು ಗುರುತಿಸಿ ಗೌರವಿಸಿದೆ. ಇದು ಡಾ. ಸುಧಾ ಮತ್ತು ಅವರ ಪತಿ ರಮೇಶ್ ಅವರ ನಿಸ್ವಾರ್ಥ ಲೋಕಸಪರ್ಯೆ ಎನ್ನಬಹುದು.

ನನ್ನ ಬೇರುಗಳು ಎಂಬ ವಿಭಾಗದಲ್ಲಿ ಡಾ. ಸುಧಾ ಅವರು ತಮ್ಮ ಪೂರ್ವಜರ ಬಗೆಗೆ ಉತ್ತಮ ಮಾಹಿತಿಯನ್ನು ನೀಡಿದ್ದಾರೆ. ಅವರದು ಪೂಜ್ಯ ವೇದ ವಿದ್ವಾಂಸರ ಮನೆತನ ಎಂದು ಇದರಿಂದ ವಿದಿತವಾಗುತ್ತದೆ. ಅಂದಿನ ಕಾಲದಲ್ಲಿ ಮೈಸೂರಿನ ಮಹಾರಾಜರಿಂದ ಗೌರವಿಸಲ್ಪಟ್ಟು ಜಟಾಬಲ್ಲಭರ್ ಎಂಬ ಅಪೂರ್ವ ಬಿರುದನ್ನು ಪಡೆದ ಗೋಪಾಲಕೃಷ್ಣ ಎಂಬ ವೇದಬ್ರಹ್ಮರು ಇವರ ವಂಶದಲ್ಲಿದ್ದವರು ಎಂದ ಮೇಲೆ ಹೇಳಬೇಕೆ? ವೇದೋಚ್ಚಾರಣೆಯ ವಿವಿಧ, ಎಂಟು ಬಗೆಯ ವಿಧಾನಗಳನ್ನು ವಿಕೃತಿಗಳೆನ್ನುತ್ತಾರೆ. ಅವುಗಳಲ್ಲಿ ಜಟಾ ಎನ್ನುವುದು ಅತಿಕಷ್ಟ ಸಾಧ್ಯ. ಅದರಲ್ಲಿ ಪರಿಣಿತರಾದವರು ಜಟಾವಲ್ಲಭರ್. ಆ ವಂಶದಲ್ಲಿ ಜನಿಸಿದ ಸುಧಾ ಅವರು ವಿದ್ಯಾ ವಿಶಾರದೆಯಾಗಿರುವುದು ಸಹಜವೇ ಆಗಿದೆ.

ಒಟ್ಟಿನಲ್ಲಿ ಹೇಳಬೇಕೆಂದರೆ ಡಾ.ಎಸ್.ಸುಧಾ ಜಗತ್ತನ್ನೂ, ಜೀವನ ವನ್ನೂ, ಜ್ಞಾನವನ್ನೂ ಪ್ರೀತಿಸುವ, ಮಾನವೀಯ ದೃಷ್ಟಿಯ, ಸಕಲರಿಗೂ ಲೇಸನ್ನು ಬಯಸುವ ಆದರ್ಶ ವ್ಯಕ್ತಿ. ಅವರ ನೆನಪಿನ ಹೆಜ್ಜೆಗಳು ಸಹೃದಯರಿಗೆ ಮುದ ನೀಡುವ ಉತ್ತಮ ಬದುಕಿನ ಚರಿತ್ರೆ. ಅವರ ನಡೆಯೂ ಶುದ್ಧ, ನುಡಿಯೂ ಶುದ್ಧ. ಅವರ ಚಿಂತನೆ ಪ್ರಬುದ್ಧ. ಅವರು ಬರೆದಿರುವ ಪುಸ್ತಕ ಸದ್ವಿಚಾರ ಸಮೃದ್ಧ.

'ಕಾಂತಾರ' ರಿಷಬ್ ಶೆಟ್ಟಿಗೆ 'ಅತ್ಯುತ್ತಮ ನಟ' ರಾಷ್ಟ್ರ ಪ್ರಶಸ್ತಿ



ನವದೆಹಲಿಯ ವಿಜ್ಞಾನ ಭವನದಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಬಾಲಿವುಡ್ ಹಿರಿಯ ನಟ ಮಿಥುನ್ ಚಕ್ರವರ್ತಿ ಅವರಿಗೆ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ, 'ಕಾಂತಾರ' ಚಿತ್ರದ ನಟ, ನಿರ್ದೇಶಕ ರಿಷಬ್ ಶೆಟ್ಟಿ ಅವರಿಗೆ ಅತ್ಯುತ್ತಮ ನಟ ಪ್ರಶಸ್ತಿ, ನಿತ್ಯಾ ಮೆನನ್‌ಗೆ ಅತ್ಯುತ್ತಮ ನಟಿ ಪ್ರಶಸ್ತಿ ಪ್ರದಾನ ಮಾಡಿದರು.

ನವದೆಹಲಿ, ಅ.8– 'ಕಾಂತಾರ' ಅದ್ಭುತ ಸಿನಿಮಾದ ಸಾರಥ್ಯ ವಹಿಸಿದ್ದ ರಿಷಬ್ ಶೆಟ್ಟಿ 'ಅತ್ಯುತ್ತಮ ನಟ' ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಮುಡಿಗೇರಿಸಿಕೊಂಡಿದ್ದಾರೆ.

ನವದೆಹಲಿಯ ವಿಜ್ಞಾನ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪ್ರಶಸ್ತಿ ಪ್ರದಾನ ಮಾಡಿದರು. ರಾಷ್ಟ್ರಪತಿ ಜೊತೆ ಸಚಿವ ಅಶ್ವಿನಿ ವೈಷ್ಣವ್ ಉಪಸ್ಥಿತರಿದ್ದರು. ಪ್ರತೀ ಚಿತ್ರಗಳೂ ಪ್ರಭಾವ ಬೀರುತ್ತವೆ. ಸಮಾಜದಲ್ಲಿ ಬದಲಾವಣೆ ಅಥವಾ ಪ್ರಭಾವ ಬೀರುವ ಸಿನಿಮಾಗಳನ್ನು ಮಾಡುವುದೇ ನಮ್ಮ ಉದ್ದೇಶ. ನಾನು ಪ್ರೇಕ್ಷಕರಿಗೆ ಧನ್ಯವಾದ ಅರ್ಪಿ ಸುತ್ತೇನೆ. ರಾಷ್ಟ್ರೀಯ ಪ್ರಶಸ್ತಿಗಳು ಕಲಾವಿದನಿಗೆ ಅತ್ಯಂತ ಪ್ರತಿಷ್ಠಿತ ಬಹುಮಾನ ಎಂದು ರಿಷಬ್ ಶೆಟ್ಟಿ ಹೇಳಿದ್ದಾರೆ.

ರಿಷಬ್ ಶೆಟ್ಟಿ ನಟಿಸಿ, ನಿರ್ದೇಶಿಸಿರುವ ಈ ಚಿತ್ರ ನಿರೀಕ್ಷೆಗೂ ಮೀರಿ ಅಭೂತಪೂರ್ವ ಯಶಸ್ಸು ಕಾಣುವ ಮೂಲಕ ದಾಖಲೆ ಬರೆದಿತ್ತು 16 ಕೋಟಿ ರೂ. ಬಜೆಟ್‌ನಲ್ಲಿ ನಿರ್ಮಾಣಗೊಂಡ ಚಿತ್ರ ಕಲೆಕ್ಷನ್ ಮಾಡಿದ್ದು 450 ಕೋಟಿ ರೂಪಾಯಿಗೂ ಅಧಿಕ!. 'ಕಾಂತಾರ 1', 2022ರ ಸೆಪ್ಟೆಂಬರ್ 30ರಂದು ಬಿಡುಗಡೆ ಆಗಿತ್ತು. ಕರುನಾಡಿಗರನ್ನು ಗಮನದಲ್ಲಿಟ್ಟುಕೊಂಡು ಮಾಡಿದ್ದ ಈ ಚಿತ್ರ ಮಾತ್ರ ಗಡಿ ಮೀರಿ ವಿಸ್ತರಿಸಿತು. ಭಾರತೀಯ ಚಿತ್ರ ರಂಗದಾದ್ಯಂತ ಸದ್ದು ಮಾಡಿತು. ಪ್ರೇಕ್ಷಕರು, ಅಭಿಮಾನಿಗಳು ಮಾತ್ರವಲ್ಲದೇ ಸಿನಿವಲಯದ ಹೆಸರಾಂತರು ಈ ಸಿನಿಮಾವನ್ನು ಮೆಚ್ಚಿ ಕೊಂಡಾಡಿದ್ದರು. ಈ ಗೆಲುವು ಸಿನಿಮಾದ ಮತ್ತೊಂದು ಭಾಗ ಮೂಡಿಬರಲು ಕಾರಣವಾಯಿತು. ಚಿತ್ರದ ಪ್ರೀಕ್ವೆಲ್ ದೊಡ್ಡ ಮಟ್ಟದಲ್ಲಿ ನಿರ್ಮಾಣವಾಗುತ್ತಿದೆ.

ಈ ಚಿತ್ರದಲ್ಲಿನ ನಟನ ನಟನೆ ಅಮೋಘ. ಮೂಲತಃ ಕರಾವಳಿ ಅವರೇ ಆಗಿರುವ ಶೆಟ್ರು ಚಿತ್ರದ ಕಥೆಯನ್ನು ಅದ್ಭುತವಾಗಿ ರವಾನಿಸಿದ್ದರು. ಕರಾವಳಿ ಸಂಸ್ಕೃತಿಯನ್ನು ಎತ್ತಿಹಿಡಿದಿದ್ದ ಚಿತ್ರದ ಕ್ಲೈಮ್ಯಾಕ್ಸ್ ವರ್ಣನಾತೀತ. ಕೊನೆಯ 15–20 ನಿಮಿಷಗಳು ಸಿನಿಮಾದ ಹೈಲೈಟ್. ತಮ್ಮ ಮೈಮೇಲೆ ದೈವ ಆವಾಹನೆಯಾದಂತೆ ರಿಷಬ್‌ಶೆಟ್ಟಿ ಅದ್ಭುತವಾಗಿ ನಟಿಸಿದ್ದರು. ದೈವಾರಾಧನೆಯನ್ನು ತಮ್ಮ ಜೀವನದ ಪ್ರಮುಖ ವಿಷಯವನ್ನಾಗಿಸಿಕೊಂಡಿರುವ ಕರಾವಳಿ ಜನತೆಯಿಂದ ವ್ಯಾಪಕ ಮೆಚ್ಚುಗೆ ವ್ಯಕ್ತವಾಗಿತ್ತು.

ಆ.16ರಂದು ಪ್ರತಿಷ್ಠಿತ ಪ್ರಶಸ್ತಿ ಘೋಷಣೆಯಾಗಿತ್ತು. ಅಂದು ಸೋಷಿಯಲ್ ಮೀಡಿಯಾ ಮೂಲಕ ಸರ್ವರಿಗೂ ತಮ್ಮ ಕೃತಜ್ಞತೆ ಅರ್ಪಿಸಿದ್ದ ರಿಷಬ್ ಶೆಟ್ಟಿ, 'ಕಾಂತಾರ ಸಿನಿಮಾಗೆ ಸಿಕ್ಕಿರುವ ರಾಷ್ಟ್ರೀಯ ಪ್ರಶಸ್ತಿಯ ಗೌರವಕ್ಕೆ ನಾನು ನಿಜವಾಗಿಯೂ ಆಭಾರಿ. ನನ್ನೀ ಪಯಣದಲ್ಲಿ ಭಾಗಿಯಾದ ಪ್ರತಿಯೊಬ್ಬ ಕಲಾವಿದರು, ತಂತ್ರಜ್ಞರು ಮತ್ತು ವಿಶೇಷವಾಗಿ ಹೊಂಬಾಳೆ ಫಿಲ್ಮ್ಸ್ ತಂಡಕ್ಕೆ ನಾನು ನನ್ನ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸುತ್ತೇನೆ. ಪ್ರೇಕ್ಷಕರು ಈ ಸಿನಿಮಾಗೆ ಕೊಟ್ಟಿರುವ ಬೆಂಬಲವು ನನ್ನಲ್ಲಿ ಇನ್ನಷ್ಟು ಜವಾಬ್ದಾರಿ ತುಂಬಿದೆ. ನಮ್ಮ ವೀಕ್ಷಕರಿಗೆ ಇನ್ನೂ ಉತ್ತಮ ಚಿತ್ರ ನೀಡಲು ಹೆಚ್ಚು ಶ್ರಮಿಸಲು ನಾನು ಬದ್ಧನಾಗಿದ್ದೇನೆ. ಅತ್ಯಂತ ಗೌರವ ದಿಂದ ನಾನು ಈ ಪ್ರಶಸ್ತಿಯನ್ನು ಕನ್ನಡ ಪ್ರೇಕ್ಷಕರು, ದೈವ ನರ್ತಕರು, ಅಪ್ಪು ಸರ್‌ಗೆ ಅರ್ಪಿಸುತ್ತೇನೆ. ದೈವದ ಆಶೀರ್ವಾದ ದಿಂದ ನಾವು ಈ ಕ್ಷಣ ತಲುಪಿದ್ದೇವೆ ಎಂದು ಬರೆದುಕೊಂಡಿದ್ದರು.

200 ರೂಪಾಯಿ ನೋಟ್ ಬ್ಯಾನ್?



ಮುಂಬೈ, ಅ.8– ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ 2,000 ರೂಪಾಯಿ ಮುಖಬೆಲೆಯ ನೋಟ್‌ಗಳನ್ನು ಭಾಗಶಃ ಹಿಂಪಡೆದುಕೊಂಡಿದೆ. ಎಲ್ಲಾ 2 ಸಾವಿರ ಮುಖಬೆಲೆ ನೋಟು ತಲುಪುವ ಮೊದಲೇ ಇದೀಗ 200 ರೂ. ಮುಖಬೆಲೆ ನೋಟ್ ಹಿಂಪಡೆಯುವ ಕೆಲಸವನ್ನು ಆರ್‌ಬಿಐ ಮಾಡುತ್ತಿದೆ. ಕೆಲ ವರದಿಗಳ ಪ್ರಕಾರ, ಆರ್‌ಬಿಐ ಮಾರುಕಟ್ಟೆಯಿಂದ 200 ರೂ. ಮುಖಬೆಲೆಯ ಅಂದಾಜ 137 ಕೋಟಿ ಮೌಲ್ಯದ ಹಣ ಹಿಂಪಡೆದುಕೊಂಡಿದೆ. ಕಳೆದ ಆರು ತಿಂಗಳಿನಿಂದಲೇ ಆರ್‌ಬಿಐ ಹಣ ಹಿಂಪಡೆಯುವ ಪ್ರಕ್ರಿಯೆಯನ್ನು ಆರಂಭಿಸಿದೆ ಎಂದು ವರದಿಯಾಗಿದೆ. ಆರ್‌ಬಿಐ ಯಾಕೆ ಹಣವನ್ನು ಹಿಂಪಡೆದುಕೊಳ್ಳುತ್ತಿದೆ ಎಂಬುದರ ಬಗ್ಗಮ ಹಲವು ಪ್ರಶ್ನೆಗಳು ಮಾರುಕಟ್ಟೆಯಲ್ಲಿ ಹುಟ್ಟಿಕೊಂಡಿವೆ.

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ 200 ರೂ. ನೋಟುಗಳನ್ನು ಹಿಂಪಡೆಯುವ ಹಿಂದಿನ ಉದ್ದೇಶ ಬೇರೆಯಾಗಿದೆ ಆರ್‌ಬಿಐ ನೋಟ್ ಬ್ಯಾನ್ ಮಾಡಲು ಹಾ ಹಿಂಪಡೆಯುತ್ತಿಲ್ಲ, ಬದಲಾಗಿ ನೋಟುಗಳ ಕಳಪೆ ಸ್ಥಿತಿಯಿಂದ ವಾಪಸ್ ಪಡೆಯುತ್ತಿದೆ. ಆರ್‌ಬಿಐ ತನ್ನ ಅರ್ಧ ವಾರ್ಷಿಕ ವರದಿಯಲ್ಲಿ 200 ರೂಪಾಯಿ ನೋಟುಗಳ ಗುಣಮಟ್ಟ ಇಳಿಕೆಯಾಗಿದ್ದರ ಪರಿಣಾಮ ಒಟ್ಟು 137 ಕೋಟಿಯನ್ನು ಮಾರುಕಟ್ಟೆಯಿಂದ ಹಿಂದಕ್ಕೆ ತೆಗೆದುಕೊಳ್ಳಲಾಗಿದೆ ಎಂದು ಮಾಹಿತಿಯನ್ನು ನೀಡಿದೆ.

ಹರಿಯಾಣ: ಭಾರತದ ಶ್ರೀಮಂತ ಮಹಿಳೆ ಸಾವಿತ್ರಿ ಜಿಂದಾಲ್ ಗೆಲುವು

ಚಂಡೀಗಢ, ಅ.8– ಹರಿಯಾಣದ ಹಿಸಾರ್ ವಿಧಾನಸಭಾ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ದೇಶದ ಅತ್ಯಂತ ಶ್ರೀಮಂತ ಮಹಿಳೆ ಸಾವಿತ್ರಿ ಜಿಂದಾಲ್ ಅವರು ಗೆಲುವು ಸಾಧಿಸಿದ್ದಾರೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ಬಿಜೆಪಿಯ ಕುರುಕ್ಷೇತ್ರ ಸಂಸದ ನವೀನ್ ಜಿಂದಾಲ್ ಅವರ ತಾಯಿಯಾಗಿರುವ ಸಾವಿತ್ರಿ ಜಿಂದಾಲ್ ಅವರು ತಮ್ಮ ಸಮೀಪದ ಪ್ರತಿಸ್ಪರ್ಧಿ ಮತ್ತು ಕಾಂಗ್ರೆಸ್ ಅಭ್ಯರ್ಥಿ ರಾಮ್ ನಿವಾಸ್ ರಾಣಾ ಅವರ ವಿರುದ್ಧ 18,941 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ. ಸಾವಿತ್ರಿ ಜಿಂದಾಲ್ ಅವರು



49,231 ಮತಗಳನ್ನು ಪಡೆದರೆ, ಕಾಂಗ್ರೆಸ್ ಅಭ್ಯರ್ಥಿ 30,290 ಮತಗಳನ್ನು ಪಡೆದಿದ್ದು, ಬಿಜೆಪಿ ಅಭ್ಯರ್ಥಿ ಹಾಗೂ ನಿರ್ಗಮಿತ ಶಾಸಕ ಕಮಲ್ ಗುಪ್ತಾ ಅವರು ಕೇವಲ 17,385 ಮತಗಳನ್ನು ಪಡೆದು ಮೂರನೇ ಸ್ಥಾನಕ್ಕೆ ಕುಸಿದಿದ್ದಾರೆ.

ಫೋರ್ಬ್ಸ್ ಇಂಡಿಯಾ ಈ ವರ್ಷ, ಸಾವಿತ್ರಿ ಜಿಂದಾಲ್ ಅವರು 29.1 ಬಿಲಿಯನ್ ಅಮೆರಿಕನ್ ಡಾಲರ್ ಮೌಲ್ಯದ ಆಸ್ತಿ ಹೊಂದಿರುವ ದೇಶದ ಅತ್ಯಂತ ಶ್ರೀಮಂತ ಮಹಿಳೆ ಎಂದು ಪಟ್ಟಿ ಮಾಡಿದೆ.

ಅಕ್ಟೋಬರ್ 5 ರಂದು ನಡೆದ 90 ಸದಸ್ಯ ಬಲದ ಹರಿಯಾಣ ವಿಧಾನಸಭಾ ಚುನಾವಣೆಯ ಫಲಿತಾಂಶ ಇಂದು ಪ್ರಕಟವಾಗಿದ್ದು, ಆಡಳಿತರೂಢ ಬಿಜೆಪಿ ಸತತ ಮೂರನೇ ಬಾರಿಗೆ ಸ್ಪಷ್ಟ ಬಹುಮತದೊಂದಿಗೆ ಅಧಿಕಾರಕ್ಕೇರುತ್ತಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com



ಮೈಸೂರು ದಸರಾ ಮಹೋತ್ಸವ-2024 ಇಂದಿನ ಕಾರ್ಯಕ್ರಮಗಳು

ಬೆಳಗ್ಗೆ 7.00	:	ಯೋಗ ಚಾರಣ ಮತ್ತು ದುರ್ಗಾ ನಮಸ್ಕಾರ, ಉದ್ಘಾಟನೆ : ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ. ವೆಂಕಟೇಶ್, ಸ್ಥಳ: ಚಾಮುಂಡಿಬೆಟ್ಟದ ತಪ್ಪಲು ಮತ್ತು ದೇವಸ್ಥಾನದ ಆವರಣ
ಬೆಳಗ್ಗೆ 10.30	:	ಸಮೃದ್ಧ ಕವಿಗೋಷ್ಠಿ, ಉದ್ಘಾಟನೆ : ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಡಾ. ಎಚ್.ಎಲ್. ಪುಷ್ಪ
		ಯುವ ದಸರಾ
ಸಂಜೆ 6.00	:	ಸುಪ್ರಸಿದ್ಧ ಸಂಗೀತ ಸಂಯೋಜಕ ಹಾಗೂ ನಿರ್ದೇಶಕ ಎ.ಆರ್.ರೆಹಮಾನ್ ಅವರಿಂದ ಸಂಗೀತ ರಸಸಂಜೆ ಕಾರ್ಯಕ್ರಮ, ಸ್ಥಳ: ಜ್ವಾಲಾಮುಖಿ ತ್ರಿಪುರ ಸುಂದರಿ ದೇವಸ್ಥಾನದ ಸಮೀಪ, ಉತ್ತನಹಳ್ಳಿ ರಿಂಗ್ ರಸ್ತೆ.
		ಸಾಂಸ್ಕೃತಿಕ ಕಾರ್ಯಕ್ರಮಗಳು-ಅರಮನೆ ಆವರಣ
ಸಂಜೆ 4.00	:	ಕಾವಾಡಿಗರ ಹಾಗೂ ಮಾವುತರ ಮಕ್ಕಳಿಂದ ನೃತ್ಯ ನೃತ್ಯನವ್ವಾಲೆ
ಸಂಜೆ 4.30	:	ಅಕ್ಬರ್ ಮತ್ತು ತಂಡದಿಂದ ಸುಗಮ ಸಂಗೀತ
ಸಂಜೆ 5.15	:	ಕು. ಚೈತನ್ಯ ಷಡಕ್ಷರಿ ಮತ್ತು ತಂಡದಿಂದ ಭರತನಾಟ್ಯ
ಸಂಜೆ 6.00	:	ಉಸ್ತಾದ್ ಫಯಾಜ್ ಖಾನ್ ಮತ್ತು ಉಸ್ತಾದ್ ಶಫೀಕ್ ಖಾನ್ ಅವರಿಂದ ಹಿಂದೂಸ್ಥಾನಿ ಗಾಯನ ಮತ್ತು ಸಿತಾರ್ ಜುಗಲ್‌ಬಂದಿ
ಸಂಜೆ 7.00	:	ಡಾ. ಜ್ಯೋಸ್ತ್ನ ಶ್ರೀಕಾಂತ್ ಮತ್ತು ತಂಡ ಅವರಿಂದ ವೀಣಾವಾದನ
ರಾತ್ರಿ 8.30	:	ಪದ್ಮಶ್ರೀ ಪದ್ಮಭೂಷಣ ಸುಧಾ ರಘುನಾಥನ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ
		ಜಗನ್ಮೋಹನ ಅರಮನೆ
ಸಂಜೆ 5.00	:	ಎಂ. ಸುಮೇದಾ ಮತ್ತು ತಂಡ, ಹೊಸಪೇಟೆ ಅವರಿಂದ ಸುಗಮ ಸಂಗೀತ
ಸಂಜೆ 6.00	:	ನಮನ ಅಕಾಡೆಮಿ (ವಿದುಷಿ ಡಿ.ಕೆ. ಮಾಧವಿ) ಕಲಾವಿದರಿಂದ ಭರತನಾಟ್ಯ
ಸಂಜೆ 7.00	:	ಬಿ.ಆರ್. ಪೊಲೀಸ್ ಪಾಟೀಲ ಮತ್ತು ತಂಡ, ಬಾಗಲಕೋಟೆ ಅವರಿಂದ ಲಾವಣಿ ಪದ
ರಾತ್ರಿ 8.00	:	ವಿದುಷಿ ವಿದ್ಯಾ ಮನೋಜ್ ಮತ್ತು ತಂಡ ಅವರಿಂದ ಭರತನಾಟ್ಯ
ರಾತ್ರಿ 9.00	:	ನವೀನ್ ಅಲಗಂಜಿ ಮತ್ತು ತಂಡ, ನಂಜನಗೂಡು ಅವರಿಂದ ಸುಗಮ ಸಂಗೀತ
		ಕಲಾಮಂದಿರ
ಸಂಜೆ 4.45	:	ಮಂಟೇಸ್ವಾಮಿ ಸುಗ್ಗಿ ಕುಣಿತ ಕಲಾಸಂಘ, ಚಾಮರಾಜನಗರ ಅವರಿಂದ ಸುಗ್ಗಿ ಕುಣಿತ
ಸಂಜೆ 5.15	:	ದೊಡ್ಡರಾಚಪ್ಪ ಮತ್ತು ತಂಡ, ಟಿ. ನರಸೀಪುರ ಅವರಿಂದ ತಂಬೂರಿ ಜಾನಪದ
ಸಂಜೆ 6.00	:	ಎ.ಪಿ. ಜಗದೀಶ್ ಮತ್ತು ತಂಡ, ಅಗಿಲೆ, ಹಾಸನ ಅವರಿಂದ ಜಾನಪದ ಗಾಯನ
ಸಂಜೆ 7.00	:	ಶ್ರೀ ಗಣೇಶ ನೃತ್ಯಾಲಯ ಟ್ರಸ್ಟ್, ಬೆಂಗಳೂರು (ಭಾವನಾ ಗಣೇಶ್ ಮತ್ತು ಎಂ.ಡಿ. ಗಣೇಶ್) ತಂಡದಿಂದ ಭರತನಾಟ್ಯ
ರಾತ್ರಿ 8.00	:	ಬಿಡಾರಿ ಬಿಡಾರ ಸಾಂಸ್ಕೃತಿಕ ವೇದಿಕೆ, ಬೀದರ್ (ರೇಖಾ ಅಪ್ಪಾರಾವ್ ಸವದಿ) ತಂಡದಿಂದ ಸುಗಮ ಸಂಗೀತ
		ಗಾನಭಾರತಿ, ಕುವೆಂಪುನಗರ
ಸಂಜೆ 5.30	:	ಮಂಜುನಾಥ ವೆಂಕಪ್ಪ ದ್ಯಾವಣ್ಣವರ, ಬಾಗಲಕೋಟೆ ಅವರಿಂದ ಜನಪದ ಮುಳ್ಳುಕುಣಿತ
ಸಂಜೆ 6.00	:	ಭೀಮರಾಯ ಶರಣಪ್ಪ ಭಜಂತ್ರಿ, ಕಲಬುರ್ಗಿ ಅವರಿಂದ ಶೆಹನಾಯ್ ವಾದನ
ಸಂಜೆ 7.00	:	ವಚನಶ್ರೀ ಮತ್ತು ತಂಡ, ಯಾದಗಿರಿ ಅವರಿಂದ ಸುಗಮ ಸಂಗೀತ
ರಾತ್ರಿ 8.00	:	ನಿಖಿಲಾ ಎಂ. ರಾವ್ ಮತ್ತು ತಂಡ, ಬೆಂಗಳೂರು ಅವರಿಂದ ಭರತನಾಟ್ಯ
ರಾತ್ರಿ 9.00	:	ಡಾ. ಪಿ. ಸೋಮಶೇಖರ್ ಮತ್ತು ತಂಡ, ಮೈಸೂರು ಅವರಿಂದ ಜಾನಪದ ಗೀತೆಗಳು
		ಶ್ರೀ ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ
ಸಂಜೆ 4.30	:	ರತ್ನಮ್ಮ ಮತ್ತು ತಂಡ, ಮೈಸೂರು ಅವರಿಂದ ಮಂಗಳವಾದ್ಯ
ಸಂಜೆ 5.15	:	ಮೋಹನ ದೇವಯ್ಯ ಮತ್ತು ತಂಡ, ಮೈಸೂರು ಅವರಿಂದ ಸುಗಮ ಸಂಗೀತ
ಸಂಜೆ 6.00	:	ಗಣಪು ಬಡವಗೌಡ, ಹೊನ್ನಾವರ ಅವರಿಂದ ಹಾಲಕ್ಕಿ ಸುಗ್ಗಿ ಕುಣಿತ
ಸಂಜೆ 7.00	:	ಶ್ರೇಯಾ ಹಂಡಿಗೋಳಾ ಮತ್ತು ತಂಡ, ಬೆಳಗಾವಿ ಅವರಿಂದ ಶಾಸ್ತ್ರೀಯ ಸಂಗೀತ
ರಾತ್ರಿ 8.00	:	ಗುರುಬಸವಗೌಡ ಎನ್. ಪಾಟೀಲ್, ಬಾಗಲಕೋಟೆ ಅವರಿಂದ ಸುಗಮ ಸಂಗೀತ
ರಾತ್ರಿ 9.00	:	ಕೃಷ್ಣ ನೃತ್ಯಶಾಲೆ, ಮೈಸೂರು ಅವರಿಂದ ಭರತನಾಟ್ಯ
		ಚಿಕ್ಕಗಡಿಯಾರ (ಡೆಫರಿನ್ ಟವರ್)
ಸಂಜೆ 5.00	:	ಶ್ರೀ ಮಂಟೇಸ್ವಾಮಿ ಜಾನಪದ ಕಲಾತಂಡ, ಟಿ. ನರಸೀಪುರ (ಪಿ. ಪುನೀತ್‌ಕುಮಾರ್) ಅವರಿಂದ ಡೊಳ್ಳು ಕುಣಿತ
ಸಂಜೆ 5.30	:	ಹೆಚ್.ವಿ. ಲೋಕೇಶ್ ಮತ್ತು ತಂಡ, ಟಿ. ನರಸೀಪುರ ಅವರಿಂದ ಸ್ಯಾಕ್ಸೋಫೋನ್ ವಾದನ
ಸಂಜೆ 6.00	:	ರಾಜರಾಜೇಶ್ವರಿ ಜಾನಪದ ಕಲಾತಂಡ, ಮೈಸೂರು (ಟಿ.ಎನ್. ರಾಜೇಶ್ವರಿ) ಕಲಾವಿದರಿಂದ ಕೋಲಾಟ
ಸಂಜೆ 7.00	:	ಕೃಷ್ಣಪ್ಪ ಮತ್ತು ತಂಡ, ಕೋಲಾರ ಅವರಿಂದ ಕ್ರಾಂತಿಕಾರಿ ಗೀತೆಗಳು
ರಾತ್ರಿ 8.00	:	ನಾಗಮ್ಮ ಮತ್ತು ತಂಡ, ಹಾವೇರಿ ಅವರಿಂದ ಸುರಗಿ ಪದ
ರಾತ್ರಿ 9.00	:	ಜೀವನಸಭಾ ವಾಲಿಕರ್ ಮತ್ತು ತಂಡ ಅವರಿಂದ ಜಾನಪದ ಗೀತೆಗಳು
		ಪುರಭವನ
ಬೆಳಗ್ಗೆ 10.30	:	ಶ್ರೀಧರ್‌ನಾಥ್, ಸಾಯಿ ಕಲಾನಿಕೇತನ, ಬೆಂಗಳೂರು ಅವರಿಂದ 'ಕೃಷ್ಣ ಸಂಧಾನ' ನಾಟಕ ಪ್ರದರ್ಶನ
ಮಧ್ಯಾಹ್ನ 3.00	:	ರಂಗತರಂಗ (ಸೋಮಶೇಖರ್ ಬಿಸಲವಾಡಿ) ತಂಡದಿಂದ ಕುರುಕ್ಷೇತ್ರ ಪೌರಾಣಿಕ ನಾಟಕ ಪ್ರದರ್ಶನ
ಸಂಜೆ 6.00	:	ರಂಗಸಿರಿ ಸಾಂಸ್ಕೃತಿಕ ಕಲಾಬಳಗ, ರಾಯಚೂರು ಅವರಿಂದ 'ವೀರ ಸಿಂಧೂರ ಲಕ್ಷ್ಮಣ' ಪೌರಾಣಿಕ ನಾಟಕ ಪ್ರದರ್ಶನ
		ಕಿರು ರಂಗಮಂದಿರ, ಕಲಾಮಂದಿರ ಆವರಣ
ಮಧ್ಯಾಹ್ನ 2.00	:	ಶಾಲಿನಿ ಮತ್ತು ತಂಡ, ಬೆಂಗಳೂರು ಗ್ರಾಮಾಂತರ ಅವರಿಂದ ಶಾಸ್ತ್ರೀಯ ನೃತ್ಯ
ಮಧ್ಯಾಹ್ನ 3.00	:	ಶ್ರೀ ಮಹಾತ್ಮ ಜ್ಯೋತಿ ಬಾಫುಲೆ ಬಯಲಾಟ ಮತ್ತು ಜನಪದ ಕಲಾಸಂಘ, ಕಲಬುರಗಿ ಅವರಿಂದ ಜ್ಯೋತಿ ಬಾಫುಲೆ ನಾಟಕ ಪ್ರದರ್ಶನ
ಸಂಜೆ 7.00	:	ಅಭಿನಯ ದರ್ಪಣ ಯುವ ವೇದಿಕೆ, ಚಿಕ್ಕಮಗಳೂರು ಅವರಿಂದ ಮುಸ್ಸಂಜೆಯಲ್ಲಿ ನಡೆದ ಘಟನೆ ನಾಟಕ ಪ್ರದರ್ಶನ
		ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ
ಸಂಜೆ 5.30	:	ಸಿದ್ದೇಶ್ವರ ಬದನವಾಳು ಅವರಿಂದ ರಂಗಗೀತೆಗಳು
ಸಂಜೆ 6.30	:	ಸೌಹಾರ್ದ ಸಾಂಸ್ಕೃತಿಕ ಕಲಾಸಂಘ, ಮಂಡ್ಯ ಅವರಿಂದ ಜಾನಪದ ಗೀತೆಗಳು
ಸಂಜೆ 7.30	:	ರಂಗಭಾರತಿ ಹೂವಿನ ಹಡಗಲಿ, ಬಳ್ಳಾರಿ ಅವರಿಂದ ತೆರೆಗಳು ನಾಟಕ ಪ್ರದರ್ಶನ
		ನಟನ ರಂಗಮಂದಿರ, ರಾಮಕೃಷ್ಣನಗರ
ಸಂಜೆ 5.00	:	ಜೈ ಭೀಮ್ ರಾವ್ ಜಾನಪದ ಮತ್ತು ಸಾಂಸ್ಕೃತಿಕ ಕಲಾವಿದರ ಸಂಘ, ಮೈಸೂರು (ಜಗದೀಶ್) ಅವರಿಂದ ಸುಗಮ ಸಂಗೀತ
ಸಂಜೆ 6.30	:	ಗಜಾನನ ಜಾನಪದ ನಾಟ್ಯ ಸಂಘ, ಬನಹಟ್ಟಿ ಅವರಿಂದ ದೇವ ಗೆದ್ದ ಮಾನವ ನಾಟಕ ಪ್ರದರ್ಶನ.
		ಶ್ರೀಕಂಠೇಶ್ವರ ದೇವಸ್ಥಾನ, ನಂಜನಗೂಡು
ಸಂಜೆ 4.45	:	ಶ್ರೀ ಮಹದೇವಪ್ಪ ಮೊನಪ್ಪ ಬಡಿಗೇರ, ಬಾಗಲಕೋಟೆ ಅವರಿಂದ ಕರಡಿ ಮಜಲು
ಸಂಜೆ 5.15	:	ಯಕ್ಕೇರಪ್ಪ ನಡುವಿನಮನೆ ಮತ್ತು ತಂಡ, ಧಾರವಾಡ ಅವರಿಂದ ತತ್ತ್ವಪದ
ಸಂಜೆ 6.00	:	ಚೈತನ್ಯ ಆರ್ಟ್ಸ್ ಅಕಾಡೆಮಿ, ಬೆಂಗಳೂರು (ಡಾ. ವಸುಧಾ ಶ್ರೀನಿವಾಸ್) ಅವರಿಂದ ಸುಗಮ ಸಂಗೀತ
ಸಂಜೆ 7.00	:	ಕೆ. ನಂಜುಂಡಯ್ಯ ಮತ್ತು ತಂಡ, ಹಾಸನ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ
ರಾತ್ರಿ 8.00	:	ರಘುನಾಯಕ ಮತ್ತು ತಂಡ, ಹಾಸನ ಅವರಿಂದ ಜಾನಪದ ಗೀತೆಗಳು
ರಾತ್ರಿ 9.00	:	ವಿಜಯ ಮತ್ತು ತಂಡ, ಬೆಂಗಳೂರು ಗ್ರಾಮಾಂತರ ಅವರಿಂದ ಜಾನಪದ ನೃತ್ಯ
		ನವರಾತ್ರಿ ಜನಪದ ರಂಗ ಉತ್ಸವ, ವನರಂಗ, ರಂಗಾಯಣ
ಸಂಜೆ 6.30	:	ಮೂಡಲಪಾಯ ಯಕ್ಷಗಾನ ಟ್ರಸ್ಟ್, ಕೊನೆಹಳ್ಳಿ, ತಿಪಟೂರು, ತುಮಕೂರು ಜಿಲ್ಲೆ ಅವರಿಂದ 'ಕರಿಭಂಟನ ಕಾಳಗ' ನಾಟಕ ಪ್ರದರ್ಶನ

ಪ್ರತಿದಿನದ ಆಕರ್ಷಣೆ

ದಸರಾ ಫಲಪುಷ್ಪ ಪ್ರದರ್ಶನ, ಸ್ಥಳ: ಕುಪ್ಪಣ್ಣ ಪಾರ್ಕ್	–	ಬೆಳಗ್ಗೆ 9 ರಿಂದ ರಾತ್ರಿ 8.30
ದಸರಾ ಫಲಪುಷ್ಪ ಪ್ರದರ್ಶನ, ಸ್ಥಳ: ಲಿಂಗಾಂಬುದಿ ಕೆರೆ	–	ಬೆಳಗ್ಗೆ 9 ರಿಂದ ರಾತ್ರಿ 7
ದಸರಾ ಫಲಪುಷ್ಪ ಪ್ರದರ್ಶನ, ಸ್ಥಳ: ಕುಕ್ಕರಹಳ್ಳಿ ಕೆರೆ	–	ಬೆಳಗ್ಗೆ 9 ರಿಂದ ರಾತ್ರಿ 7
ಪುಸ್ತಕ ಮೇಳ, ಸ್ಥಳ: ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನ	–	ಬೆಳಗ್ಗೆ 10 ರಿಂದ ರಾತ್ರಿ 7
ದಸರಾ ವಸ್ತುಪ್ರದರ್ಶನ, ಸ್ಥಳ: ವಸ್ತುಪ್ರದರ್ಶನ ಮೈದಾನ	–	ಮಧ್ಯಾಹ್ನ 2.30 ರಿಂದ ರಾತ್ರಿ 8.30
ಆಹಾರ ಮೇಳ, ಸ್ಥಳ: ಮಹಾರಾಜ ಕಾಲೇಜು ಮೈದಾನ	–	ಬೆಳಗ್ಗೆ 11 ರಿಂದ ರಾತ್ರಿ 9
ರೈಲ್ ಮ್ಯೂಸಿಯಂ	–	ಬೆಳಗ್ಗೆ 10 ರಿಂದ ರಾತ್ರಿ 8

ದಸರಾ ವಸ್ತುಪ್ರದರ್ಶನದಲ್ಲಿ ನಂದಿನಿ ಮಳಿಗೆ ಉದ್ಘಾಟನೆ

ನಂದಿನಿ ಹಾಲಿನಿಂದ ಇನ್ನಷ್ಟು ಪದಾರ್ಥಗಳ ತಯಾರಿಕೆ


ದಸರಾ ವಸ್ತುಪ್ರದರ್ಶನದ ಆವರಣದಲ್ಲಿ ಮೈಮುಲ್ ವತಿಯಿಂದ ನಿರ್ಮಿಸಿರುವ ಮಳಿಗೆಯನ್ನು ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ಉದ್ಘಾಟಿಸಿದರು. ಒಕ್ಕೂಟದ ಎ.ಟಿ.ಸೋಮಶೇಖರ್, ಕೆ.ಜಿ.ಮಹೇಶ್, ಕೆ.ಉಮಾಶಂಕರ್ ಇನ್ನಿತರರಿದ್ದರು.

> "ದಸರಾ ವಸ್ತುಪ್ರದರ್ಶನದಲ್ಲಿ ಹಾಲು ಒಕ್ಕೂಟವು ಮಳಿಗೆ ತೆರೆಯುವ ಮೂಲಕ ವಸ್ತುಪ್ರದರ್ಶನಕ್ಕೆ ಬರುವ ವೀಕ್ಷರಿಗೆ ನಂದಿನಿ ಉತ್ಪನ್ನಗಳ ಬಳಕೆಯ ಮಹತ್ವ ಸಾರುತ್ತಿದೆ. ನಂದಿನಿ ಉತ್ಪನ್ನ ನಮ್ಮೆಲ್ಲರ ಹೆಮ್ಮೆಯಾಗಿದೆ. ಇದರ ಬಳಕೆ ಬಗ್ಗೆ ಜಾಗೃತಿ ಮೂಡಿಸಲು ಮಳಿಗೆ ತೆರೆಯಲಾಗಿದೆ. ಇದನ್ನು ದುಬೈ ಸೇರಿ ಅನೇಕ ಕಡೆಗಳಲ್ಲಿ ಮಾರಾಟ ಮಾಡುತ್ತಿರುವುದು ಸಂತಸದ ವಿಚಾರ. ಮತ್ತಷ್ಟು ಮಂದಿ ಇದರ ಬಳಕೆ ಮಾಡುವ ಮೂಲಕ ನಮ್ಮ ರೈತರ ಜೀವನಕ್ಕೆ ನೆರವಾಗೋಣ.
> **-ಅಯೂಬ್ ಖಾನ್, ಅಧ್ಯಕ್ಷ, ವಸ್ತುಪ್ರದರ್ಶನ ಪ್ರಾಧಿಕಾರ.**

ಮೈಸೂರು,ಅ.8(ಎಂಟಿವೈ)- ನಂದಿನಿ ಹಾಲಿನ ಸಂಗ್ರಹ ಹೆಚ್ಚಾಗಿರುವುದರಿಂದ ಶೀಘ್ರವೇ ಇನ್ನಷ್ಟು ಪದಾರ್ಥಗಳನ್ನು ತಯಾರಿಸಿ ಗ್ರಾಹಕರಿಗೆ ಸರಬರಾಜು ಮಾಡುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗಿದೆ ಎಂದು ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ತಿಳಿಸಿದ್ದಾರೆ.

ದಸರಾ ವಸ್ತುಪ್ರದರ್ಶನದ ಆವರಣದಲ್ಲಿ ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತದ ಮಳಿಗೆ ಉದ್ಘಾಟಿಸಿ ಮಾತನಾಡಿದ ಅವರು, ಮುಂದಿನ ದಿನಗಳಲ್ಲಿ ಗ್ರಾಹಕರ ಬೇಡಿಕೆಗೆ ಅನುಗುಣವಾಗಿ ನಂದಿನಿ ಹಾಲಿನಿಂದ ಹೊಸದಾಗಿ ತಿನಿಸು ತಯಾರಿಸುವ ಉದ್ದೇಶ ಹೊಂದಲಾಗಿದೆ ಎಂದು ಹೇಳಿದರು.

ಪ್ರಸ್ತುತ ಮೈಮುಲ್ ಡೇರಿಯಲ್ಲಿ 9 ಲಕ್ಷ ಲೀಟರ್ ಹಾಲು ಸಂಗ್ರಹಿಸಲಾಗುತ್ತಿದ್ದು, ಇದರಲ್ಲಿ 4 ಲಕ್ಷ ಲೀಟರ್ ಹಾಲನ್ನು ಜನತೆ ಬಳಸುತ್ತಿದ್ದಾರೆ. ಉಳಿದ ಹಾಲನ್ನು ಪುಡಿ ಮಾಡಿ ಶೇಖರಿಸಿ ಉಪ ಉತ್ಪನ್ನಗಳನ್ನು ತಯಾರಿಸಲಾಗುತ್ತಿದೆ. ರೈತರ ಹಿತ ದೃಷ್ಟಿಯಿಂದ ಚಾಕ್‌ಲೇಟ್, ಪನ್ನೀರ್, ಚೀಸ್ ಸೇರಿ ಹಲವು ಉಪ ಉತ್ಪನ್ನಗಳನ್ನು ತಯಾರಿಸಲು ಪ್ರತ್ಯೇಕ ಘಟಕಗಳನ್ನು ಆರಂಭಿಸಲಾಗುವುದು ಎಂದರು.

ಕೇರಳ ರಾಜ್ಯಕ್ಕೆ ಪ್ರತಿ ದಿನ 3,11,633 ಲೀಟರ್ ಹಾಲು ಹಾಗೂ ಚೆನ್ನೈ ಮಾರುಕಟ್ಟೆಗೆ 30 ಸಾವಿರ ಲೀಟರ್ ಹಾಲನ್ನು ರವಾನೆ ಮಾಡಲಾಗುತ್ತಿದೆ. ಮೊಸರು 65504 ಕೆ.ಜಿ, ಮಜ್ಜಿಗೆ, ಲಸ್ಸಿ, ರಾಗಿ ಅಂಬ್ಲಿಗೆ 3845 ಲೀಟರ್ ಹಾಗೂ ಇತರೆ ಉತ್ಪನ್ನಗಳ ರೂಪದಲ್ಲಿ ಮಾರಾಟ ಮಾಡಲಾಗುತ್ತಿದೆ. ಹಾಲು ಉತ್ಪಾದಕರಿಂದ ಪ್ರತಿ ಲೀಟರಿಗೆ ರೂ.32.10 ರಂತೆ ಖರೀದಿ ಮಾಡಿ ಇದಕ್ಕೆ ಮಾರುಕಟ್ಟೆ ಒದಗಿಸುವ ಮೂಲಕ ಹಾಲು ಉತ್ಪಾದಕರಿಗೆ ಪ್ರತಿ ವಾರಕ್ಕೊಮ್ಮೆ ಅಂದಾಜು 22 ಕೋಟಿಗಳಷ್ಟು ಹಣವನ್ನು ಹಾಲಿನ ಬಟವಾಡೆ ಮಾಡುವ ಮೂಲಕ ಗ್ರಾಮಾಂತರ ಪ್ರದೇಶದ ರೈತರ ಶ್ರೇಯೋಭಿವೃದ್ಧಿಗಾಗಿ ಮೈಸೂರು ಹಾಲು ಒಕ್ಕೂಟ ಶ್ರಮಿಸುತ್ತಿದೆ. ಮೈಮುಲ್‌ನಲ್ಲಿ ಈಗ 1205 ಸಂಘಗಳಿದ್ದು, 398 ಮಹಿಳಾ ಸಂಘಗಳಿವೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಒಕ್ಕೂಟದ ನಿರ್ದೇಶಕರಾದ ಎ.ಟಿ.ಸೋಮಶೇಖರ್, ಕೆ.ಜಿ.ಮಹೇಶ್, ಕೆ.ಉಮಾಶಂಕರ್, ಸಿ.ಓಂಪ್ರಕಾಶ್, ಪಿ.ಎಂ.ಪ್ರಸನ್ನ, ಕೆ.ಈರೇಗೌಡ, ಕೆ.ಎಸ್.ಕುಮಾರ್, ದ್ರಾಕ್ಷಾಯಣಿ ಬಸವರಾಜಪ್ಪ, ಲೀಲಾ ಬಿ.ಕೆ.ನಾಗರಾಜು, ಬಿ.ನೀಲಾಂಬಿಕೆ ಮಹೇಶ್ ಕುರಹಟ್ಟಿ, ಎ.ಶಿವಗಾಮಿ ಷಣ್ಮುಗಂ, ಬಿ.ಎನ್.ಸದಾನಂದ, ಬಿ.ಗುರುಸ್ವಾಮಿ, ಬಿ.ಎ.ಪ್ರಕಾಶ್, ಎ.ಬಿ.ಮಲ್ಲಿಕಾ ರವಿಕುಮಾರ್, ಸಿ.ಪ್ರಸಾದ್ ರೆಡ್ಡಿ, ಪಶುಸಂಗೋಪನ ಇಲಾಖೆ ಪ್ರತಿನಿಧಿ ಡಾ.ನಾಗರಾಜು, ಹೆಚ್.ಎಸ್.ಮಂಜುನಾಥ್, ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿ ಪ್ರತಿನಿಧಿ ರಜನಿ ತ್ರಿಪಾಠಿ, ಮೈಮುಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್.ಸುರೇಶ್ ನಾಯ್ಕ್ ಇನ್ನಿತರರು ಉಪಸ್ಥಿತರಿದ್ದರು.

ಚಿಣ್ಣರ ದಸರಾದಲ್ಲಿ ಮಕ್ಕಳ ಅತ್ಯಾಕರ್ಷಕ ವೇಷಭೂಷಣ ಸ್ಪರ್ಧೆ



ಮೈಸೂರಿನ ಜೆ.ಕೆ. ಮೈದಾನದಲ್ಲಿ ಮಂಗಳವಾರ ದಸರಾ ಅಂಗವಾಗಿ ಚಿಣ್ಣರ ವೇಷಭೂಷಣ ಸ್ಪರ್ಧೆ ಆಯೋಜಿಸಲಾಗಿತ್ತು.

ಮೈಸೂರು, ಅ.8(ಬಿಎಲ್‌ಯು)- ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ನಗರದ ಜೆ.ಕೆ. ಮೈದಾನದಲ್ಲಿ ಇಂದು ಚಿಣ್ಣರ ವೇಷಭೂಷಣ ಸ್ಪರ್ಧೆ ಆಯೋಜಿಸಲಾಗಿತ್ತು.

ಆರು ವರ್ಷದೊಳಗಿನ ಮಕ್ಕಳಿಗೆ ಆಯೋಜಿಸಿದ್ದ ಈ ಸ್ಪರ್ಧೆಯಲ್ಲಿ 32 ಮಕ್ಕಳು ಉತ್ಸಾಹದಿಂದ ಭಾಗವಹಿಸಿದ್ದರು. ಈ ವೇಳೆ ಪುಟಾಣಿ ಮಕ್ಕಳು ಕಿತ್ತೂರು ರಾಣಿ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಯಕ್ಷಗಾನ, ಸೈನಿಕರು, ಹುಲಿ ವೇಷಧಾರಿ ಸೇರಿದಂತೆ ವಿವಿಧ ವ್ಯಕ್ತಿತ್ವದ ವೇಷಭೂಷಣಗಳನ್ನು ಪ್ರದರ್ಶಿಸಿದರು. ಚಿಣ್ಣರ ವೇಷಭೂಷಣ ಅತ್ಯಾಕರ್ಷಕವಾಗಿತ್ತು. ತೀರ್ಪುಗಾರರು ಪ್ರಕಟಿಸಿದಂತೆ ಪ್ರಥಮ, ದ್ವಿತೀಯ ಹಾಗೂ ತೃತೀಯ ಬಹುಮಾನದ ಜೊತೆಗೆ ಭಾಗವಹಿಸಿದ್ದ ಎಲ್ಲಾ ಮಕ್ಕಳಿಗೆ ಸಮಾಧಾನಕರ ಬಹುಮಾನವನ್ನು ವಿತರಣೆ ಮಾಡಲಾಯಿತು.

ಸಮುದ್ರ ಚಿಪ್ಪುಗಳನ್ನು ಬಳಸಿ ಅತ್ಯಾಧುನಿಕ ಕಲಾಕೃತಿ ನಿರ್ಮಿಸಿ ಗಿನ್ನಿಸ್ ದಾಖಲೆ ಮಾಡಿರುವ ಡಾ.ರಾಧಾ ಮಲ್ಲಪ್ಪ ಅವರಿಂದ ಸಂವಾದ ಕಾರ್ಯಕ್ರಮ ಆಯೋಜಿಸಲಾಗಿತ್ತು. ಕಲಾಕೃತಿ ನಿರ್ಮಿಸುವ ಕುರಿತಂತೆ ತಮ್ಮ ಅನುಭವ ಹಂಚಿಕೊಂಡ ಡಾ.ರಾಧಾ ಮಲ್ಲಪ್ಪ ವೀಕ್ಷಕರ ಕೆಲವು ಪ್ರಶ್ನೆಗಳಿಗೆ ಉತ್ತರ ಕೂಡ ನೀಡಿದರು.

ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನದಲ್ಲಿ ನಾಳೆ ದಸರಾ ಆಚರಣೆ

ಮೈಸೂರು,ಅ.8-ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಶಬರಿಮಲ ಶ್ರೀ ಅಯ್ಯಪ್ಪ ಪೂಜಾ ಸಮಿತಿ ಆಶ್ರಯದಲ್ಲಿ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನದಲ್ಲಿ ನವರಾತ್ರಿ ಪ್ರಯುಕ್ತ ದಸರಾಹಬ್ಬದ ಆಚರಣೆಗಳನ್ನು ಹಮ್ಮಿಕೊಳ್ಳಲಾಗಿದೆ.

ಅ.10ರಂದು ಪವಿತ್ರ ಗ್ರಂಥ ಪೂಜೆ (ಪುಸ್ತಕ ಪೂಜೆ) ನಡೆಯಲಿದ್ದು, ಗ್ರಂಥ ಪೂಜೆ ಮಾಡಿಸುವವರು ಅಂದು ಸಂಜೆ 6.30ರೊಳಗೆ ಗ್ರಂಥ (ಪುಸ್ತಕ)ಗಳನ್ನು ದೇವಸ್ಥಾನದ ಕಚೇರಿಗೆ ತಲುಪಿಸಬೇಕು. ಅ.11ರಂದು ಆಯುಧ ಪೂಜೆ ನೆರವೇರಿಸಲಾಗುವುದು. ಅ.12ರಂದು ಬೆಳಗ್ಗೆ 8 ಗಂಟೆಗೆ ಸರಸ್ವತಿ ಪೂಜೆ (ವಿದ್ಯಾರಂಭಂ) ನಡೆಯಲಿದೆ. 3 ವರ್ಷ ಮೇಲ್ಪಟ್ಟ ಮಕ್ಕಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಬಹುದು. ದೇವಸ್ಥಾನದ ಅರ್ಚಕರಾದ ಸುರೇಶ್ ನಂಬೂದಿರಿ ಹಾಗೂ ಆರ್ಯದಾಸ್ ನಂಬೂದಿರಿ ಅವರು ಮಕ್ಕಳ ನಾಲಿಗೆಯ ಮೇಲೆ (ಅಕ್ಷರ ಅಭ್ಯಾಸ) 'ಹರಿಶ್ರೀ' ಎಂದು ಬರೆಯುವ ಪವಿತ್ರ ಆಚರಣೆಯನ್ನು ನೆರವೇರಿಸುವರು. ಹೆಚ್ಚಿನ ಮಾಹಿತಿಗೆ ದೂ.0821-2484688, ಮೊ. 93 428 20188 ಸಂಪರ್ಕಿಸಬಹುದು.

ಪ್ರಸ್ತುತ ದಿನಮಾನದಲ್ಲಿ ಭಾಷೆ, ಭಾವೈಕ್ಯತೆಯ ಸಾಮರಸ್ಯ ಅಗತ್ಯ

ಸಮಷ್ಟಿ ಕವಿಗೋಷ್ಠಿ ಉದ್ಘಾಟಿಸಿದ ಹಿರಿಯ ಸಾಹಿತಿ ಡಾ.ಹೆಚ್.ಎಸ್.ಶಿವಪ್ರಕಾಶ್ ಅಭಿಮತ


ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಮಂಗಳವಾರ ಆಯೋಜಿಸಿದ್ದ ಸಮಷ್ಟಿ ಕವಿಗೋಷ್ಠಿಯನ್ನು ಹಿರಿಯ ಸಾಹಿತಿ ಡಾ.ಹೆಚ್.ಎಸ್.ಶಿವಪ್ರಕಾಶ್ ಉದ್ಘಾಟಿಸಿ, ಮಾತನಾಡಿದರು.

ಮೈಸೂರು,ಅ.8(ಆರ್‌ಕೆ)- ಪ್ರಸ್ತುತ ದಿನಮಾನಗಳಲ್ಲಿ ಭಾಷೆ ಮತ್ತು ಸಾಮರಸ್ಯದ ಅಗತ್ಯವಿದೆ ಎಂದು ಹಿರಿಯ ಸಾಹಿತಿ ಡಾ. ಹೆಚ್.ಎಸ್.ಶಿವಪ್ರಕಾಶ್ ಅವರು ಇಂದಿಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ದಸರಾ ಕವಿಗೋಷ್ಠಿಯ ಪಂಚಕಾವ್ಯೋತ್ಸವದ ಅಂಗವಾಗಿ ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಆಯೋಜಿಸಿದ್ದ ಸಮಷ್ಟಿ ಕವಿಗೋಷ್ಠಿ ಉದ್ಘಾಟಿಸಿ ಮಾತನಾಡಿದ ಅವರು, ಸಮಷ್ಟಿ ಕವಿಗೋಷ್ಠಿಯು ಭಾವೈಕ್ಯತೆಯ ಸಾಮರಸ್ಯ ಕಲ್ಪಿಸುವ ವೇದಿಕೆಯಾಗಿದ್ದು, ಪ್ರಸ್ತುತ ದಿನಗಳಲ್ಲಿ ಭಾಷೆ ಮತ್ತು ಭಾವೈಕ್ಯತೆಯ ಸಾಮರಸ್ಯ ಬೇಕಾಗಿದೆ ಎಂದರು.

ಕಾವ್ಯ ರಚನೆಗೆ ಭಾಷೆ ಒಂದು ಮಾಧ್ಯಮವಷ್ಟೆ, ಸಂವೇದನೆ ಎಂಬುದು ಎಲ್ಲಾ ಭಾಷೆಗಳಲ್ಲೂ ಕಾಣಬಹುದಾಗಿದ್ದು, ಬಹು ಭಾಷೆಯ ಈ ಸಮ್ಮಿಲನವು ಉದ್ಯಾನವನದಲ್ಲಿ ಅಲಂಕರಿಸಿದ ಬಹು ಬಗೆಯ ಹೂಗಳಿದ್ದಂತೆ. ಮುಂದಿನ ದಸರಾದಲ್ಲಿ ಸಮಷ್ಟಿ ಕವಿಗೋಷ್ಠಿಗೆ ಪ್ರಾಮುಖ್ಯತೆ ನೀಡುವುದು ಒಳಿತು ಎಂದು ಸಲಹೆ ನೀಡಿದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಕವಿ, ಜ.ನಾ. ತೇಜಶ್ರೀ ಅವರು ಮಾತನಾಡಿ, ಇತ್ತೀಚೆಗೆ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಅಡ್ಡಿ ಉಂಟಾಗುತ್ತಿದ್ದು, ಹೆಣ್ಣು ಮಕ್ಕಳ ಮೇಲೆ ನಿರಂತರವಾಗಿ ಅತ್ಯಾಚಾರ, ಯಾವ ಭಾಷೆ ನಮ್ಮ ಮನಸ್ಸುಗಳನ್ನು ಬೆಸೆಯಬೇಕಾಯಿತೋ ಅದೇ ಭಾಷೆ ನಮ್ಮ ಮನಸ್ಸಿನ ಸುತ್ತ ಗೋಡೆಗಳನ್ನು ನಿರ್ಮಿಸಿದೆ. ಇದು ಈ ಸಮಯದ ದುರಂತ. ಎಲ್ಲಿ ಭಾಷೆ ಕೆಡುತ್ತದೆಯೋ ಅಲ್ಲಿ ಬದುಕು ಕೆಡುತ್ತದೆ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಬೆಂಗಳೂರಿನ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಪ್ರೊ.ಕೆ.ವೈ.ನಾರಾಯಣಸ್ವಾಮಿ, ಸಮಷ್ಟಿ ಕವಿಗೋಷ್ಠಿಯು ಸಮಾಜಕ್ಕೆ ಒಂದು ಬಳುವಳಿಯಾಗಿ, ಮುಂದಿನ ಪೀಳಿಗೆಯಲ್ಲಿ ಕವಿತೆ ಪ್ರೀತಿಸುವ ವಾತಾವರಣ ನಿರ್ಮಿಸುವಂತಾಗಬೇಕು ಎಂದು ಹೇಳಿದರು.

ಮುಖ್ಯಮಂತ್ರಿಗಳ ಕಾರ್ಯದರ್ಶಿ ಶಿವಸ್ವಾಮಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಕವಿಗೋಷ್ಠಿ ಉಪ ಸಮಿತಿ ಕಾರ್ಯಾಧ್ಯಕ್ಷ ಪ್ರೊ. ಎನ್.ಕೆ.ಲೋಲಾಕ್ಷಿ, ಉಪವಿಶೇಷಾಧಿಕಾರಿ ಪಿ.ಎನ್. ಮಲ್ಲಿಕಾರ್ಜುನಸ್ವಾಮಿ, ಕಾರ್ಯದರ್ಶಿ ಸಿ.ಕೃಷ್ಣ ಹಾಗೂ ಇತರರು ಸಮಷ್ಟಿ ಕವಿಗೋಷ್ಠಿಯಲ್ಲಿ ಭಾಗವಹಿಸಿದ್ದರು.

ಕವಿಗಳಾದ ಅಕ್ಷತಾರಾಜ ಪೆರ್ಲ ಅವರು ತುಳು ಭಾಷೆಯಲ್ಲಿ, ಇಂದಿರನ ರಾಜೇಂದ್ರನ ತಮಿಳಿನಲ್ಲಿ, ಡಾ.ಋಷಿಕೇಶ ಒಡಿಯಾ ಭಾಷೆಯಲ್ಲಿ, ಎಂ.ಆರ್. ಕಮಲ ಕನ್ನಡದಲ್ಲಿ, ಎನ್.ಕಿರಣ್‌ಕುಮಾರ್ ಮಣಿಪುರಿಯಲ್ಲಿ ಜೋಸ್ವಿ, ಎಡ್ವಿನ್ ಪಿಂಟೋ ಕೊಂಕಣಿಯಲ್ಲಿ, ಡಾ.ದೀಪಕ್‌ಭಟ್ ಸಂಸ್ಕೃತದಲ್ಲಿ, ಡಾ.ನೀಲಿಮಾಗುಂಡಿ ಮರಾಠಿಯಲ್ಲಿ, ಮನಮೋಹನ ಸಿಂಗ್ ಡೋಂಗ್ರಿ ಭಾಷೆಯಲ್ಲಿ, ಮಧೂಸ್ ಪೂವಯ್ಯ ಕೊಡವ ಭಾಷೆಯಲ್ಲಿ ಕವನಗಳನ್ನು ಪ್ರಸ್ತುತಗೊಳಿಸಿ, ಪ್ರೇಕ್ಷಕರ ಗಮನ ಸೆಳೆದರು.

ಕೆಆರ್‌ಎಸ್‌ನಲ್ಲಿ ದೀಪಾಲಂಕಾರ, ಫಲಪುಷ್ಪ ಪ್ರದರ್ಶನಕ್ಕೆ ಚಾಲನೆ

ಎರಡು ತಿಂಗಳುಗಳ ಕಾಲ ದೀಪಾಲಂಕಾರವಿರಲಿದೆ



ವಿದ್ಯುತ್ ದೀಪಾಲಂಕಾರದಿಂದ ಜಗಮಗಿಸುತ್ತಿರುವ ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲೂಕು ಕೆಆರ್‌ಎಸ್

ಶ್ರೀರಂಗಪಟ್ಟಣ: ಕೆ.ಆರ್.ಸಾಗರದ ಬೃಂದಾವನದಲ್ಲಿ ವಿಶೇಷ ದೀಪಾಲಂಕಾರ ಹಾಗೂ ಫಲಪುಷ್ಪ ಪ್ರದರ್ಶನಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಚಾಲನೆ ನೀಡಿದರು.

ನಂತರ ಸಚಿವರು ಮಾತನಾಡಿ, ದೀಪಾಲಂಕಾರ ಹಾಗೂ ಫಲಪುಷ್ಪ ಪ್ರದರ್ಶನ ಈ ಬಾರಿ ವಿಶೇಷವಾಗಿದ್ದು, ಪ್ರವಾಸಿಗರನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಕರ್ಷಿಸಲಿದೆ. ದೀಪಾಲಂಕಾರ ಹೊಸದಲ್ಲ, ಶತಮಾನದಿಂದ ನಡೆಯುತ್ತಿದೆ. ಇಂದು ಕೇವಲ ಸಾಂಕೇತಿಕವಾಗಿ ಚಾಲನೆ ನೀಡಲಾಗಿದೆ. ಪ್ರವಾಸಿಗರನ್ನು ಸೆಳೆಯುವ ನಿಟ್ಟಿನಲ್ಲಿ ಎರಡು ತಿಂಗಳು ಈ ಕಾರ್ಯಕ್ರಮ ನಡೆಯಲಿದೆ ಎಂದರು.

ಜಾತಿಗಣತಿಯನ್ನು ರಾಜಕೀಯವಾಗಿ ಚರ್ಚೆ ಮಾಡಲಾಗುತ್ತಿದೆ. ನಾನು ಒಬ್ಬ ಒಕ್ಕಲಿಗ ನಾಯಕನಾಗಿ ಹೇಳುತ್ತೇನೆ. ವೀರಶೈವ, ಒಕ್ಕಲಿಗ ಸಂಘ ಸಂಸ್ಥೆಗಳು ಜಾತಿಗಣತಿಯನ್ನು ಬೇಡ ಎನ್ನುತ್ತಿವೆ. ವಿರೋಧ ಪಕ್ಷಗಳು ಇಡೀ ರಾಷ್ಟ್ರದಲ್ಲಿ ಕೇಂದ್ರಸರ್ಕಾರವೇ ಜಾತಿಗಣತಿ ಮಾಡಬೇಕು ಎಂಬ ತೀರ್ಮಾನ ಮಾಡಿವೆ. ಅವರಿಗೆ ಕನಿಷ್ಠ ಬರಗಾಲದಲ್ಲಿ ರೈತರಿಗೆ ಅನುದಾನ ಕೊಡಿಸಲು ಆಗಿಲ್ಲ. ರಾಜ್ಯಕ್ಕೆ ಆಗುತ್ತಿರುವ ಅನ್ಯಾಯದ ಬಗ್ಗೆ ಕೇಂದ್ರದ ಬಳಿ ಮಾತನಾಡಲು ಇವರಿಗೆ ಆಗುತ್ತಿಲ್ಲ. ರಾಜ್ಯದಲ್ಲಿ ಅನೇಕ ಸಮಸ್ಯೆಗಳ ಬಗ್ಗೆ ಮಾತನಾಡಲ್ಲ. ಇನ್ನೂ ಮೂರು ವರ್ಷ ಹಾಗೇ ಮಾತನಾಡಲಿ, ಕ್ಯಾಬಿನೆಟ್‌ನಲ್ಲಿ ಜಾತಿ ಗಣತಿ ಬಗ್ಗೆ ಚರ್ಚೆ ಮಾಡುತ್ತೇವೆ ಎಂದರು.

ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ ಅವೈಜ್ಞಾನಿಕದಿಂದ ಕೂಡಿದೆ, ಸಾಕಷ್ಟು ಬಾರಿ ಚರ್ಚೆ ಮಾಡಿದ್ದೇವೆ. ಕೇಂದ್ರ ಸಚಿವ ಗಡ್ಕರಿ ಅವರನ್ನು ಭೇಟಿ ಮಾಡಿ ದೂರು ಕೊಟ್ಟಿದ್ದೇವೆ. ಹೆಚ್ಚು ಮನ್ನಣೆ ಕೊಟ್ಟಿಲ್ಲ, ಸಣ್ಣ ಪುಟ್ಟ ಸರಿಪಡಿಸಿದ್ದಾರೆ ಅಷ್ಟೆ. ಪ್ರಾರಂಭದಲ್ಲಿ ವೈಜ್ಞಾನಿಕವಾಗಿಲ್ಲ ಎಂದು ಹೇಳಿ, ಪತ್ರ ಬರೆದಿದ್ದೇವೆ. ಇದರ ಬಗ್ಗೆ ಸೂಕ್ತ ಕ್ರಮ ವಹಿಸಬೇಕು ಎಂದು ಹೇಳಿದರು.

ಪುಷ್ಪ ಪ್ರದರ್ಶನಕ್ಕೆ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಜೊತೆಯಾಗಿ ದೀಪ ಬೆಳಗುವ ಮೂಲಕ ಚಾಲನೆ ನೀಡಿದರು. ಈ ವೇಳೆ ಕ್ಷೇತ್ರದ ಶಾಸಕ ರಮೇಶ್ ಬಂಡಿಸಿದ್ದೇಗೌಡ, ದರ್ಶನ್ ಪುಟ್ಟಣ್ಣಯ್ಯ, ಹೆಚ್.ಟಿ.ಮಂಜು, ವಿಧಾನಪರಿಷತ್ ಸದಸ್ಯ ವಿವೇಕಾನಂದ, ಜಿಲ್ಲಾಧಿಕಾರಿ ಕುಮಾರ್, ಮೈಸೂರು ವಿಭಾಗೀಯ ಹಾಗೂ ತೋಟಗಾರಿಕಾ ಕಾರ್ಯದರ್ಶಿ ರಮೇಶ, ಕಾ.ನೀ. ನಿಗಮ ಅಧೀಕ್ಷಕ ಅಭಿಯಂತರ ರಘುರಾಮ, ಕಾ.ನೀ. ನಿಗಮ ಕಾರ್ಯಪಾಲಕ ಅಭಿಯಂತರ ಜಯಂತ್, ತೋಟಗಾರಿಕೆ ನಿರ್ದೇಶಕಿ ರೂಪಶ್ರೀ, ಸಹಾಯಕ ನಿರ್ದೇಶಕಿ ಸೌಮ್ಯ ಸೇರಿದಂತೆ ಇತರರು ಇದ್ದರು.

ನಂಜುಂಡೇಗೌಡ ನಿಧನ



ಭಾರತೀನಗರ, ಅ.8– ಇಲ್ಲಿಗೆ ಸಮೀಪದ ಗೋಪನಹಳ್ಳಿ ಗ್ರಾಮದ ನಂಜುಂಡೇಗೌಡ ನಿಧನರಾಗಿದ್ದಾರೆ.

ಮೃತರು ಯಡಗನಹಳ್ಳಿ ಗ್ರಾಮದ ವಿನಾಯಕ ವಿದ್ಯಾ ಸಂಸ್ಥೆಯ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಮೃತರಿಗೆ 88 ವರ್ಷ ವಯಸ್ಸಾಗಿತ್ತು ಮೃತರು ಪತ್ನಿ ನಿಂಗಮ್ಮ, ಮಂಡ್ಯ ಕಾವೇರಿ ನೀರಾವರಿ ಇಲಾಖೆಯ ಇಂಜಿನಿಯರ್ ಕೆಂಪರಾಜು, ಭಾರತಿ ಕಾಲೇಜಿನ ಉಪನ್ಯಾಸಕ ಜಗದೀಶ್ ಸೇರಿದಂತೆ ಐವರು ಪುತ್ರರು, ಮೂವರು ಪುತ್ರಿಯರನ್ನು ಅಗಲಿದ್ದಾರೆ.

ಮೃತರ ಅಂತ್ಯ ಸಂಸ್ಕಾರ ಸ್ವಗ್ರಾಮವಾದ ಗೋಪನಹಳ್ಳಿ ಗ್ರಾಮದ ತಮ್ಮ ಜಮೀನಿನಲ್ಲಿ ಮಂಗಳವಾರ ನಡೆಯಿತು.

ಕೊಮ್ಮೇನಹಳ್ಳಿ ಜಗದೀಶ್



ಕೆ.ಆರ್.ಪೇಟೆ,ಅ.8: ತಾಲೂಕಿನ ಕೊಮ್ಮೇನಹಳ್ಳಿ ಗ್ರಾಮದ ಹಿರಿಯ ರಾಜಕೀಯ ಮುತ್ಸದ್ದಿ, ಗ್ರಾಮ ಪಂಚಾಯಿತಿ ಮಾಜಿ ಸದಸ್ಯರಾದ ಕೊಮ್ಮೇನಹಳ್ಳಿ ಜಗದೀಶ್(ಜಗಣ್ಣ) ಮಂಗಳವಾರ ನಿಧನರಾದರು. ಅವರಿಗೆ ಸುಮಾರು 72 ವರ್ಷ ವಯಸ್ಸಾಗಿತ್ತು.

ಮೃತರು ಧರ್ಮಪತ್ನಿ ಇಂದ್ರಮ್ಮ, ಪುತ್ರಿ ಮೈಸೂರಿನ ತೋಟಗಾರಿಕಾ ಸರ್ಕಾರಿ ಮಹಾವಿದ್ಯಾಲಯದ ಪ್ರಾಧ್ಯಾಪಕಿ ಡಾ.ದಯಾಮಣಿ ಮೋಹನ್, ಶಿಕ್ಷಕಿ ದ್ರಾಕ್ಷಾಯಿಣಿ ಸೇರಿದಂತೆ ಇಬ್ಬರು ಪುತ್ರಿಯರು, ಅಳಿಯ ಉದ್ಯಮಿ ವಿ.ಡಿ.ಮೋಹನ್ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

ಮೃತರ ಅಂತ್ಯಕ್ರಿಯೆಯು ಹುಟ್ಟೂರು ಕೊಮ್ಮೇನಹಳ್ಳಿ ಇಂದು ಸಂಜೆ ನಡೆಯಿತು.

ಪಿಡಿಓ, ಗ್ರಾಪಂ ನೌಕರರ ಪ್ರತಿಭಟನೆಗೆ ಬೆಂಬಲ



ಪಿಡಿಓ, ಗ್ರಾಪಂ ನೌಕರರ ಪ್ರತಿಭಟನೆಗೆ ಬೆಂಬಲ ವ್ಯಕ್ತಪಡಿಸಿ ಬಿಜೆಪಿ ಮುಖಂಡ ಸಚ್ಚಿದಾನಂದ ಮಾತನಾಡಿದರು.

ಮಂಡ್ಯ,ಅ.8– ನಾನಾ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಗ್ರಾಮ ಪಂಚಾಯಿತಿಗಳ ಸದಸ್ಯರು, ಅಧಿಕಾರಿಗಳು ಮತ್ತು ನೌಕರರು ನಡೆಸುತ್ತಿರುವ ಹೋರಾಟ ತೀವ್ರ ಸ್ವರೂಪ ಪಡೆದುಕೊಂಡಿದ್ದು, ಜಿಲ್ಲೆಯ ಎಲ್ಲಾ ಭಾಗಗಳಿಂದ ಸೋಮವಾರ ಹೋರಾಟಕ್ಕೆ ಭಾಗವಹಿಸಿದ್ದ ಸಾವಿರಾರು ನೌಕರರಿಗೆ ವಿವಿಧ ಪಕ್ಷದ ಮುಖಂಡರು, ಸಂಘಟನೆಗಳು, ಪ್ರಗತಿಪರ ಹೋರಾಟಗಾರರು ಬೆಂಬಲ ಸೂಚಿಸಿದರು.

ನಗರದ ಜಿಲ್ಲಾ ಪಂಚಾಯಿತಿ ಕಚೇರಿ ಪಕ್ಕದ ಆವರಣದಲ್ಲಿ ನಡೆಯುತ್ತಿದ್ದ ಹೋರಾಟದಲ್ಲಿ ಸರ್ಕಾರದ ಧೋರಣೆಯನ್ನು ಹೋರಾಟಗಾರರು ಖಂಡಿಸಿದರು.

ಪ್ರತಿಭಟನೆಯಲ್ಲಿ ಭಾಗಿಯಾಗಿದ್ದ ಬಿಜೆಪಿ ಮುಖಂಡ ಎಸ್.ಸಚ್ಚಿದಾನಂದ ಇಂಡುವಾಳು ಮಾತನಾಡಿ, ಪ್ರತಿಭಟನಾನಿರತರೊಂದಿಗೆ ಸಮಾಲೋಚಿಸಿ ಅವರ ಬೇಡಿಕೆಗಳು, ಸಮಸ್ಯೆಗಳ ಬಗ್ಗೆ ಮಾಹಿತಿ ಪಡೆದುಕೊಂಡರು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಅಧಿಕಾರಿಗಳು ಮತ್ತು ನೌಕರರು ಹೋರಾಟ ನಡೆಸುತ್ತಿರುವುದು ಸಮಂಜಸವಾಗಿದೆ ಎಂದು ಹೇಳಿದರು.

ನಿಮ್ಮೊಂದಿಗೆ ಭಾರತೀಯ ಜನತಾ ಪಕ್ಷ ಸದಾ ಇರಲಿದೆ. ಈ ವಿಚಾರವಾಗಿ ವಿಧಾನ ಸಭೆ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಮತ್ತು ವಿಧಾನಪರಿಷತ್ ಸದಸ್ಯ ಛಲವಾದಿ ನಾರಾಯಣಸ್ವಾಮಿ ಅವರೊಂದಿಗೆ ನಾನೂ ಕೂಡ ಮಾತನಾಡುತ್ತೇನೆ. ಗ್ರಾ.ಪಂ. ನೌಕರರ ಪರವಾಗಿ ನಿಲ್ಲಬೇಕು. ಪಂಚಾಯಿತಿ ನೌಕರರ ಪರವಾಗಿ ಮೇಲ್ಮನೆ ಮತ್ತು ಕೆಳಮನೆಯಲ್ಲಿ ಹೋರಾಟ ನಡೆಸಬೇಕೆಂದು ಒತ್ತಾಯಿಸುತ್ತೇನೆ ಎಂದು ಭರವಸೆ ನೀಡಿದರು.

ಇದು ಭಂಡಗೆಟ್ಟ ಮತ್ತು ತೊಘಲಕ್ ಸರಕಾರ. ಆರ್‌ಡಿಪಿಆರ್ ನೌಕರರ ಸಮಸ್ಯೆಗಳನ್ನು ಆಲಿಸುತ್ತಿಲ್ಲ ಅನಿರ್ದಿಷ್ಟಾವಧಿ ಧರಣಿ ನಡೆಯುತ್ತಿದ್ದರೂ ಸಹ ಇಲಾಖಾ ಸಚಿವರು ಈವರೆಗೆ ಪ್ರತಿಭಟನಾನಿರತ ನೌಕರರನ್ನು ಭೇಟಿಯಾಗುವ ಸೌಜನ್ಯ ತೋರದೆ ಭಂಡತನ ಪ್ರದರ್ಶಿಸುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಜೇಷ್ಠತೆ ಆಧಾರದ ಮೇಲೆ ಗ್ರಾ.ಪಂ. ಅಧಿಕಾರಿಗಳು ಮತ್ತು ನೌಕರರಿಗೆ ಬಡ್ತಿ ನೀಡಬೇಕು. ಸೇವೆ ಕಾಯಂ ಮಾಡಬೇಕು. ನೀರುಗಂಟಿಗಳು ಮತ್ತು ಪೌರಕಾರ್ಮಿಕರಿಗೆ ವೈಜ್ಞಾನಿಕ ವೇತನ ನೀಡಬೇಕು. ಅವರಿಗೆ ಆತ್ಮಗೌರವ ಸಿಗುವಂತೆ ಸರಕಾರ ನಡೆದುಕೊಳ್ಳಬೇಕು. ಮಹಿಳಾ ನೌಕರರಿಗೆ ಒಂದು ವರ್ಷದವರೆಗೆ ಸಂಬಳ ಸಹಿತ ಹೆರಿಗೆ ರಜೆ ನೀಡಬೇಕು. ಹಿರಿಯ ಅಧಿಕಾರಿಗಳು ಕಿರುಕುಳ ಕೊಡಬಾರದು ಎಂದು ಆಗ್ರಹಿಸಿದರು.

ಪಿಡಿಒ ಮತ್ತು ಕಾರ್ಯದರ್ಶಿ ಕನಿಷ್ಠ ಮುನ್ನಾಲ್ಕು ವರ್ಷ ಒಂದೇ ಪಂಚಾಯಿತಿಯಲ್ಲಿ ಕೆಲಸ ಮಾಡಲು ಅವಕಾಶ ಕಲ್ಪಿಸಬೇಕು. ಇದರಿಂದ ಪಂಚಾಯಿತಿ ಅಭಿವೃದ್ಧಿಯಾಗಲಿದೆ. ಕೇರಳ ಮಾದರಿಯಲ್ಲಿ ವೇತನ/ಗೌರವಧನ ನೀಡಬೇಕು. ಗ್ರಾ.ಪಂ. ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಸದಸ್ಯರು ಶಿಷ್ಟಾಚಾರದ ವ್ಯಾಪ್ತಿಗೆ ಬರಬೇಕು. ಸರಕಾರಿ ಯೋಜನೆಗಳ ಶಿಲಾನ್ಯಾಸ, ಉದ್ಘಾಟನೆಯ ಫಲಕಗಳಲ್ಲಿ ಅವರ ಹೆಸರನ್ನು ಹಾಕಬೇಕು. ಒಟ್ಟಾರೆ ಪಂಚಾಯಿತಿ ನೌಕರರ ಸಮಸ್ಯೆಗಳಿಗೆ ಸರಕಾರ ಕಿವಿಯಾಗಬೇಕೆಂದು ಆಗ್ರಹಿಸಿದರು.

ಗ್ರಾಪಂ ಸದಸ್ಯರು, ನೌಕರರ ಬೇಡಿಕೆ ಅಧ್ಯಯನಕ್ಕೆ ತಜ್ಞರ ಸಮಿತಿ ರಚಿಸಿ

ಮುಖ್ಯಮಂತ್ರಿಗಳು, ಗ್ರಾಮೀಣಾಭಿವೃದ್ಧಿ ಸಚಿವರಿಗೆ ಎಂಎಲ್‌ಸಿ ದಿನೇಶ್ ಗೂಳಿಗೌಡ ಪತ್ರ



ಮಂಡ್ಯ/ಬೆಂಗಳೂರು,ಅ.8– ಗ್ರಾಮ ಪಂಚಾಯತ್ ಸದಸ್ಯರು ಹಾಗೂ ಅಧಿಕಾರಿಗಳು ಮತ್ತು ನೌಕರರ ನ್ಯಾಯಯುತ ಬೇಡಿಕೆಗಳನ್ನು ಅಧ್ಯಯನ ಮಾಡಿ ಸರ್ಕಾರಕ್ಕೆ ವರದಿ ಸಲ್ಲಿಸಲು ತಜ್ಞರ ತಂಡ ರಚಿಸಬೇಕು ಎಂದು ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಮನವಿ ಮಾಡಿದ್ದಾರೆ.

ಈ ಸಂಬಂಧ ಸಿಎಂ ಮತ್ತು ಸಚಿವರಿಗೆ ಪತ್ರ ಬರೆದಿರುವ ಶಾಸಕ ದಿನೇಶ್ ಗೂಳಿಗೌಡ, ಸರ್ಕಾರದ ಬೆಂಬಲದಿಂದ ಗ್ರಾಮ ಪಂಚಾಯತಿಗಳು, ಗ್ರಾಮ ಸರ್ಕಾರಗಳಂತೆ ಕಾರ್ಯನಿರ್ವಹಿಸುವತ್ತ ಹೆಜ್ಜೆ ಇಡುತ್ತಿವೆ. ಜನನ–ಮರಣ ಪ್ರಮಾಣ ಪತ್ರದಿಂದ ಹಿಡಿದು ವಸತಿ ಯೋಜನೆಗಳ ಅನುಷ್ಠಾನ, ಕುಡಿಯುವ ನೀರು, ಬೀದಿದೀಪಗಳ ನಿರ್ವಹಣೆ, ನೈರ್ಮಲ್ಯ ಸ್ವಚ್ಛತೆ, ಸ್ವಾವಲಂಬನೆಗೆ ನೆರವು ನೀಡುವುದರ ಜೊತೆಗೆ 29 ವಿಷಯಗಳನ್ನು ಒಳಗೊಂಡಂತೆ ಗ್ರಾಮ ಪಂಚಾಯತಿಗಳು ಸಾರ್ವಜನಿಕರಿಗೆ ಸೇವೆ ನೀಡುತ್ತಾ ಗ್ರಾಮೀಣ ಜನರ ಬದುಕಿಗೆ ನೆರವಾಗುತ್ತಿವೆ. ಆದರೆ, ಈಗ ತಮ್ಮ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ, ಕಳೆದ ನಾಲ್ಕು ದಿನಗಳಿಂದ ತಮ್ಮ ಕರ್ತವ್ಯ ಬಹಿಷ್ಕರಿಸಿ ಅನಿರ್ದಿಷ್ಟ ಮುಷ್ಕರ ನಡೆಸುತ್ತಿದ್ದು ಅವರ ಬೇಡಿಕೆ ಈಡೇರಿಸುವುದು ನಮ್ಮ ಕರ್ತವ್ಯವಾಗಿದೆ ಎಂದು ಹೇಳಿದ್ದಾರೆ.

ಆರ್‌ಡಿಪಿಆರ್ ಕುಟುಂಬದ ವಿವಿಧ ಸಂಘಟನೆಗಳ ಮುಖ್ಯಸ್ಥರನ್ನು ಸಾಧ್ಯವಾದಷ್ಟು ಶೀಘ್ರವಾಗಿ ಆಹ್ವಾನಿಸಿ ಸಭೆ ನಡೆಸಿ ಅವರ ಬೇಡಿಕೆಗಳನ್ನು ಪರಿಶೀಲನೆ ನಡೆಸಬೇಕು. ಬಡವರು, ಪರಿಶಿಷ್ಟ ಪಂಗಡ, ಪರಿಶಿಷ್ಟ ಜಾತಿ, ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತರು, ನಿರ್ಗತಿಕರ ಕಲ್ಯಾಣಕ್ಕೆ ಘನ ಸರ್ಕಾರ ಜಾರಿಗೆ ತರುವ ಹತ್ತು ಹಲವು ಮಹತ್ವಾಕಾಂಕ್ಷಿ ಯೋಜನೆಗಳನ್ನು ಸರ್ಕಾರದ ಪರವಾಗಿ ಸಮಾಜದ ಕಟ್ಟ ಕಡೆಯ ಅರ್ಹ ಫಲಾನುಭವಿಗಳಿಗೆ ತಲುಪಿಸುವವರು ಗ್ರಾಮ ಪಂಚಾಯತಿ ಜನಪ್ರತಿನಿಧಿಗಳು, ಅಧಿಕಾರಿ ಹಾಗೂ ಸಿಬ್ಬಂದಿ ವರ್ಗ ಮಾತ್ರವಲ್ಲದೇ, ಸಾಮಾನ್ಯ ಜನರ ಸಮಸ್ಯೆಗಳನ್ನು, ಬೇಡಿಕೆಗಳನ್ನು, ವಾರ್ಡ್ ಸಭೆಗಳು ಹಾಗೂ ಗ್ರಾಮ ಸಭೆಗಳ ಮೂಲಕ ಆಲಿಸಿ, ಸರ್ಕಾರದ ಹಂತಕ್ಕೆ ತಲುಪಿಸುವವರು, ಸರ್ಕಾರದ ಪರವಾಗಿ ನಿಂತು ಬಗೆಹರಿಸುವವರು ಗ್ರಾಮ ಪಂಚಾಯತ್ ನೌಕರರಾಗಿದ್ದಾರೆ ಎಂದಿದ್ದಾರೆ.

ಗ್ರಾಮ ಪಂಚಾಯತ್ ಅಧ್ಯಕ್ಷ ಉಪಾಧ್ಯಕ್ಷ, ಸದಸ್ಯರನ್ನು ರಾಜ್ಯ ಶಿಷ್ಟಾಚಾರ ವ್ಯಾಪ್ತಿಗೆ ತರಬೇಕು. ಕರ್ನಾಟಕದ ಗ್ರಾಮ ಪಂಚಾಯತ್ ವ್ಯವಸ್ಥೆ ಈಗ ದೇಶದಲ್ಲೇ ಮೊದಲ ಸ್ಥಾನದಲ್ಲಿದೆ. ಕೇರಳದಲ್ಲಿ ಗ್ರಾಪಂ ಸದಸ್ಯರ ಮಾಸಿಕ ಗೌರವಧನ 12 ಸಾವಿರ ರೂ. ಇದೆ. ಆದರೆ, ಕರ್ನಾಟಕದಲ್ಲಿ ಸದಸ್ಯರ ವೇತನ ಹಾಗೂ ಭತ್ಯೆಗಳು ಕಡಿಮೆ ಇವೆ. ಗ್ರಾಮ ಪಂಚಾಯತ್ ಸದಸ್ಯರಿಗೆ ಸಭಾ ಭತ್ಯೆ 300 ರೂ. ಇದ್ದು, ಅದನ್ನು ಕನಿಷ್ಠ 1 ಸಾವಿರ ರೂಗೆ ಏರಿಸಬೇಕು. ಅಧ್ಯಕ್ಷರಿಗೆ 15 ಸಾವಿರ, ಉಪಾಧ್ಯಕ್ಷರಿಗೆ 12 ಸಾವಿರ ಹಾಗೂ ಸದಸ್ಯರಿಗೆ 10 ಸಾವಿರ ಮಾಸಿಕ ಗೌರವಧನ ನಿಗದಿ ಮಾಡಬೇಕು. ಆರೋಗ್ಯ ವಿಮೆ, ಉಚಿತ ಬಸ್ ಪಾಸ್ ಮುಂತಾದವನ್ನು ಒದಗಿಸಬೇಕು ಎಂದು ಮನವಿ ಮಾಡಿದ್ದು, ಅವರ ಬೇಡಿಕೆಗೆ ನಾವು ಸ್ಪಂದಿಸಬೇಕಿದೆ ಎಂದಿದ್ದಾರೆ.

ಗ್ರಾಮ ಪಂಚಾಯತ್ ನೌಕರರಿಗೆ ಪಂಚಾಯತ್ ರಾಜ್ ಇಲಾಖೆಯಿಂದ ವೇತನ ಪಾವತಿಸಬೇಕು. ಇಎಸ್‌ಐ, ಪಿಎಫ್ ಜಾರಿ ಮಾಡಬೇಕು. ಕನಿಷ್ಠ 5 ಲಕ್ಷ ರೂ. ಆರೋಗ್ಯ ವಿಮೆ ನೀಡಬೇಕು. ಹೀಗೆ ಅವರ ವಿವಿಧ ಪ್ರಮುಖ ಬೇಡಿಕೆಗಳಾಗಿವೆ. ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಿಂದ ಹಿಡಿದು ಸ್ವಚ್ಛತಾ ಸಿಬ್ಬಂದಿವರೆಗೆ ಎಲ್ಲರೂ ಧರಣಿಗೆ ಇಳಿದಿರುವುದರಿಂದ ಗ್ರಾಮೀಣ ಭಾಗಗಳಲ್ಲಿ ಸಾರ್ವಜನಿಕರ ಸೇವೆಗಳಲ್ಲಿ ವ್ಯತ್ಯಯ ಉಂಟಾಗುತ್ತಿದೆ. ಇದೇ ಮೊದಲ ಬಾರಿಗೆ ಗ್ರಾಮ ಪಂಚಾಯತ್ ರಾಜ್ ಸದಸ್ಯರ ಒಕ್ಕೂಟ, ಪಿಡಿಒ ಕ್ಷೇಮಾಭಿವೃದ್ಧಿ ಒಕ್ಕೂಟ ಹಾಗೂ ಇತರೇ ನೌಕರರು ಇಡೀ ರಾಜ್ಯದಲ್ಲಿ ದೊಡ್ಡ ಪ್ರಮಾಣದಲ್ಲಿ ಪ್ರತಿಭಟನೆ ಆರಂಭಿಸಿದ್ದಾರೆ. ಹಾಗಾಗಿ ಅವರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವುದು ಸರ್ಕಾರದ ಜವಾಬ್ದಾರಿಯಾಗಿದೆ. ಆರ್‌ಡಿಪಿಆರ್ ಕುಟುಂಬದ ವಿವಿಧ ಸಂಘಟನೆಗಳ ಮುಖ್ಯಸ್ಥರನ್ನು ಸಾಧ್ಯವಾದಷ್ಟು ಶೀಘ್ರವಾಗಿ ಆಹ್ವಾನಿಸಿ ಸಭೆ ನಡೆಸಿ ಅವರ ಬೇಡಿಕೆಗಳನ್ನು ಪರಿಶೀಲನೆ ನಡೆಸಬೇಕು ಎಂದು ಒತ್ತಾಯಿಸಿದ್ದಾರೆ.

ಸರ್ಕಾರದ ಮಟ್ಟದಲ್ಲಿ ನುರಿತ ತಜ್ಞರ ಸಮಿತಿಯನ್ನು ರಚಿಸಿ, ವಿವಿಧ ರಾಜ್ಯಗಳ ಪಂಚಾಯತ್ ರಾಜ್ ವ್ಯವಸ್ಥೆಯ ಬಗ್ಗೆ ಅಧ್ಯಯನ ಮಾಡಿ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದ ಆಶಯಗಳನ್ನು ಈಡೇರಿಸುವಂತೆ ತಕ್ಷಣ ತಜ್ಞರ ಸಮಿತಿಯನ್ನು ರಚಿಸಬೇಕು. ಸಂವಿಧಾನದ ಪ್ರಕರಣ 243ಜಿ ಮತ್ತು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 58(4) ರನ್ವಯ ಗ್ರಾಮ ಪಂಚಾಯತ್‌ಗಳು ಸ್ವಯಂ ಸರ್ಕಾರಗಳಾಗಿ ಕಾರ್ಯ ನಿರ್ವಹಿಸಲು ಅಧಿನಿಯಮದ ಪ್ರಕರಣ 58 ಹಾಗೂ 1ನೇ ಅನುಸೂಚಿಯಲ್ಲಿರುವ ಜವಾಬ್ದಾರಿಗಳನ್ನು ನಿರ್ವಹಿಸಲು ಪ್ರಕರಣ 2(28ಸಿ) ರನ್ವಯ ಜವಾಬ್ದಾರಿ ನಕ್ಷೆ ರಚಿಸಬೇಕು ಎಂದು ಅವರು ಪತ್ರದ ಮೂಲಕ ಮನವಿ ಮಾಡಿದ್ದಾರೆ.

ಮೂರನೇ ಪುಟದಿಂದ

ಮುಖ್ಯಮಂತ್ರಿ ಆಗಲು ವಿಪಕ್ಷಗಳ ಒತ್ತಾಸೆ!

ಎಂಬುದು ನನಗೆ ಗೊತ್ತಿಲ್ಲ. ಈ ವಿಚಾರವನ್ನು ನೀವು ಹೈಕಮಾಂಡ್‌ಗೆ ಕೇಳಿ ಸ್ಪಷ್ಟಪಡಿಸಿಕೊಳ್ಳ ಬೇಕು ಎಂದು ಮಾಧ್ಯಮದವರಲ್ಲಿ ಸತೀಶ್ ಜಾರಕಿಹೊಳಿ ನುಡಿದರು. ಸದ್ಯ ಸಿದ್ದರಾಮಯ್ಯ ಅವರೇ ನಮ್ಮ ಮುಖ್ಯಮಂತ್ರಿಗಳಾಗಿದ್ದಾರೆ. ನಾನು ಅವರ ಸಂಪುಟದಲ್ಲಿ ಸಚಿವನಾಗಿ ಕೆಲಸ ಮಾಡುತ್ತಿದ್ದೇನೆ ಅಷ್ಟೆ. ಹಾಗಾಗಿ ಮುಖ್ಯಮಂತ್ರಿ ಬದಲಾವಣೆ ಪ್ರಶ್ನೆ ಉದ್ಭವಿಸುವುದಿಲ್ಲ. ಅಲ್ಲದೆ ಈ ವಿಚಾರವಾಗಿ ಯಾವುದೇ ಚರ್ಚೆಗಳು ನಡೆದಿಲ್ಲ. ಆದರೆ ಈ ವಿಷಯದ ಬಗ್ಗೆ ವಿರೋಧ ಪಕ್ಷಗಳು ಹಾಗೂ ಮಾಧ್ಯಮಗಳು ಚರ್ಚೆ ಮಾಡುತ್ತಿವೆ ಎಂದು ಹೇಳಿದರು. ನಾನು ಮುಖ್ಯಮಂತ್ರಿ ಆಗುತ್ತೇನೆ ಎಂದು

ವಿರೋಧ ಪಕ್ಷಗಳೇ ಹೇಳುತ್ತಿವೆ. ಆದರೆ ನಮ್ಮ ಪಕ್ಷದಲ್ಲಿ ಅಂತಹ ಯಾವುದೇ ಚರ್ಚೆಗಳು ನಡೆಯುತ್ತಿಲ್ಲ ಎಂದು ಸ್ಪಷ್ಟಪಡಿಸಿದ ಸತೀಶ್ ಜಾರಕಿಹೊಳಿ, ಇದೇ ವೇಳೆ ಅವರವರ ಬೆಂಬಲಿಗರು ಜೈಕಾರ ಹಾಕುವುದು ಸರ್ವೆ ಸಾಮಾನ್ಯ. ಅದರಂತೆ ನನ್ನ ಬೆಂಬಲಿಗರು ಸಿಎಂ ಆಗಲಿ ಎಂದು ನನ್ನ ಪರ ಜೈಕಾರ ಹಾಕುತ್ತಿದ್ದಾರೆ ಎಂದರು. ಸಿದ್ದರಾಮಯ್ಯ ಅವರೇ ಪೂರ್ಣಾವಧಿಗೆ ಮುಖ್ಯಮಂತ್ರಿಯಾದರೆ ಡಿ.ಕೆ.ಶಿವ ಕುಮಾರ್ ಅವರ ಪರಿಸ್ಥಿತಿ ಏನು ಎಂಬ ಪ್ರಶ್ನೆಗೆ, ನಾನು ಮತ್ತೊಬ್ಬರ ವಿಚಾರದಲ್ಲಿ ಪ್ರತಿಕ್ರಿಯೆ ನೀಡುವುದಿಲ್ಲ ಎಂದು ಜಾಣ್ಮೆಯ ಉತ್ತರ ನೀಡಿದರು. ಇವತ್ತಿನ ಮೈಸೂರು ಭೇಟಿಯಲ್ಲಿ ಯಾವುದೇ ವಿಶೇಷತೆ ಇಲ್ಲ. ಇಡೀ ದಿನ ಮೈಸೂರು ಸುತ್ತಾಡಿಕೊಂಡು ದಸರಾ ನೋಡುತ್ತೇನೆ ಅಷ್ಟೆ ಎಂದು ಸತೀಶ್ ಜಾರಕಿಹೊಳಿ ಸ್ಪಷ್ಟಪಡಿಸಿದರು.

ಮೈಸೂರಿಗೆ ದಿಢೀರ್ ಭೇಟಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಮುಡಾ ಹಗರಣದಲ್ಲಿ ಸಿಲುಕಿರುವ ಹಿನ್ನೆಲೆ ರಾಜ್ಯದಲ್ಲಿ ನಡೆಯುತ್ತಿರುವ ರಾಜಕೀಯ ಬೆಳವಣಿಗೆಯಲ್ಲಿ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ದೆಹಲಿ ಹಾಗೂ ಬೆಂಗಳೂರಲ್ಲಿ ಕಾಂಗ್ರೆಸ್ ನಾಯಕರ ಭೇಟಿ ನಂತರ ಮೈಸೂರಿಗೆ ಇಂದು ದಿಢೀರ್ ಭೇಟಿ ನೀಡಿದರು. ಈಗಾಗಲೇ ದೆಹಲಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಬೆಂಗಳೂರಿನಲ್ಲಿ ಗೃಹ ಸಚಿವ ಡಾ.ಜಿ.ಪರಮೇಶ್ವರ್, ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸೇರಿದಂತೆ ಇತರರನ್ನು ಭೇಟಿ ಮಾಡಿ ಸುದೀರ್ಘ ಚರ್ಚೆ ನಡೆಸಿದ ನಂತರ ಸತೀಶ್ ಜಾರಕಿಹೊಳಿ ಭೇಟಿ ರಾಜಕೀಯ ವಲಯದಲ್ಲಿ ಅಚ್ಚರಿ ಮೂಡಿಸಿದೆ.

ಯಾವುದೇ ಪೂರ್ವನಿಗದಿತ ಕಾರ್ಯಕ್ರಮ ಇಲ್ಲದಿದ್ದರೂ ಸತೀಶ್ ಜಾರಕಿಹೊಳಿ ಇಂದು ದಿಢೀರ್ ಮೈಸೂರಿಗೆ ಆಗಮಿಸಿದ್ದರು. ಜಲದರ್ಶಿನಿಯಲ್ಲಿ ಇಂದು ಬೆಳಿಗ್ಗೆ ಆಪ್ತರ ಜೊತೆ ಚರ್ಚೆ ನಡೆಸಿದ ನಂತರ ಸತೀಶ್ ಜಾರಕಿಹೊಳಿ ಮೈಸೂರು ಭಾಗದ ಶಾಸಕರ ಭೇಟಿಗೆ ತೆರಳಿದರು.

ಶಾಸಕರ ಮನೆಗೆ ಭೇಟಿ: ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡ ಅವರ ಕೆ.ಜಿ.ಕೊಪ್ಪಲು ಮನೆಗೆ ಭೇಟಿ ನೀಡಿದ ಸತೀಶ್ ಜಾರಕಿಹೊಳಿ, ಅಲ್ಲಿ ಕೆ.ಆರ್.ನಗರ ಶಾಸಕ ಡಿ.ರವಿಶಂಕರ್ ಜೊತೆ ಪ್ರಸ್ತುತ ರಾಜಕಾರಣದ ಬಗ್ಗೆ ಮಾತುಕತೆ ನಡೆಸಿದರು. ಜಾರಕಿಹೊಳಿ ಸಹೋದರರ ರಾಜಕಾರಣ ಬೆಳಗಾವಿ ಬಿಟ್ಟರೆ ಬೆಂಗಳೂರಿಗೆ ಸೀಮಿತ. ರಾಜ್ಯದಲ್ಲಿ ಯಾವುದೇ ಪಕ್ಷದ ಸರ್ಕಾರ ಬಂದರೂ ಸತೀಶ್ ಜಾರಕಿಹೊಳಿ, ರಮೇಶ್ ಜಾರಕಿಹೊಳಿ ಅಥವಾ ಬಾಲಚಂದ್ರ ಜಾರಕಿಹೊಳಿ ಮೂವರಲ್ಲಿ ಒಬ್ಬರು ಮಂತ್ರಿಯಾಗಿರುತ್ತಾರೆ. ಯಾರೇ ಮಂತ್ರಿಯಾದರೂ ಮೂವರು ಬೆಳಗಾವಿ ಬಿಟ್ಟರೆ ಬೆಂಗಳೂರಿನಲ್ಲಿ ತಮ್ಮ ರಾಜಕಾರಣ ಸೀಮಿತಗೊಳಿಸಿಕೊಂಡಿದ್ದಾರೆ.

ಸತೀಶ್ ಜಾರಕಿಹೊಳಿ, ಕಳೆದ ಒಂದು ವರ್ಷದಲ್ಲಿ ಮೈಸೂರಿನಲ್ಲಿ ಲೋಕೋಪಯೋಗಿ ಇಲಾಖೆಯ ಒಂದೇ ಒಂದು ಪ್ರಗತಿ ಪರಿಶೀಲನಾ ಸಭೆ ನಡೆಸಿಲ್ಲ. ಇಂದು ಮೈಸೂರಿಗೆ ಬಂದವರೇ ಎಲ್ಲೆಡೆ ಪಕ್ಷದ ಶಾಸಕರು, ಮುಖಂಡರು, ಕಾರ್ಯಕರ್ತರ ಭೇಟಿಯಾಗುತ್ತಿದ್ದಾರೆ. ಇದು ತೀವ್ರ ಕುತೂಹಲಕ್ಕೆಡೆ ಮಾಡಿದೆ. ಮುಂದಿನ ಮುಖ್ಯಮಂತ್ರಿ ರೇಸ್‌ನಲ್ಲಿರುವ ಸತೀಶ್ ಜಾರಕಿಹೊಳಿ, ಪಕ್ಷದ ನಾಯಕರು ಹಾಗೂ ಶಾಸಕರ ಬೆಂಬಲ ಕ್ರೋಢೀಕರಣದಲ್ಲಿ ಕಾರ್ಯಮಗ್ನರಾಗಿದ್ದಾರೆ ಎಂದು ಹೇಳಲಾಗುತ್ತಿದೆ. ಮೈಸೂರು ಅರಮನೆಯ ಪೊಲೀಸ್ ಬ್ಯಾಂಡ್ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಗೃಹ ಸಚಿವ ಡಾ.ಪರಮೇಶ್ವರ್ ಕೂಡ ಇಂದು ಮೈಸೂರಿಗೆ ಆಗಮಿಸಿದ್ದಾರೆ. ಸಮಾಜ ಕಲ್ಯಾಣ ಸಚಿವ ಡಾ.ಮಹದೇವಪ್ಪ ಸಹ ಮೈಸೂರಿನಲ್ಲೇ ಇದ್ದಾರೆ. ಮೂವರು ರಹಸ್ಯ ಸ್ಥಳದಲ್ಲಿ ಭೇಟಿಯಾಗುತ್ತಾರೆ ಎಂಬ ಮಾತಿದೆ. ಹಾಗಾಗಿ ಬೆಂಗಳೂರು, ಬೆಳಗಾವಿ ಹಾಗೂ ಮೈಸೂರು ರಾಜಕಾರಣದ ಶಕ್ತಿ ಕೇಂದ್ರವಾಗಿದೆ. ಸತೀಶ್ ಜಾರಕಿಹೊಳಿಯವರ ಕ್ಷಿಪ್ರ ರಾಜಕೀಯ ರೌಂಡ್ ಮುಂದಿನ ಕ್ಷಿಪ್ರ ಬೆಳವಣಿಗೆಗೆ ದಿಕ್ಸೂಚಿಯಾಗುವ ಎಲ್ಲಾ ಸಾಧ್ಯತೆಯೂ ಇದೆ.

ಮೈಸೂರು ಯಾತ್ರೆ!

ಹಿಂತಿರುಗಿ, ಮುಖ್ಯಮಂತ್ರಿ ಆಗಿ ಎಂಬ ಸಂದೇಶ ನೀಡಿದ್ದರು. ಅವರು ರಾಜ್ಯ ರಾಜಕಾರಣಕ್ಕೆ ಬರುವುದಿಲ್ಲ ಎನ್ನುವುದು ತಿಳಿದ ವಿಚಾರವೇ ಆದರೂ, ಎಐಸಿಸಿ ವಿಶ್ವಾಸ ಪಡೆದುಕೊಳ್ಳಲು ಸಿದ್ದರಾಮಯ್ಯ ಈ ತೀರ್ಮಾನ ಕೈಗೊಂಡಿದ್ದರು. ಖರ್ಗೆ ಅವರು ರಾಜ್ಯ ರಾಜಕಾರಣಕ್ಕೆ ಬರಲು ನಿರಾಕರಿಸಿದ ಬೆನ್ನಲ್ಲೇ ಸಿದ್ದರಾಮಯ್ಯ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರಿಗೆ ಹಸಿರು ನಿಶಾನೆ ತೋರಿದ್ದಾರಂತೆ. ಜಾರಕಿಹೊಳಿಯನ್ನು ಬೆಂಬಲಿಸಿದ್ದು ಅದೇ ಬಣಕ್ಕೆ ಸೇರಿದ ಸಚಿವರಾದ ಡಾ.ಜಿ.ಪರಮೇಶ್ವರ್ ಹಾಗೂ ಡಾ.ಹೆಚ್.ಸಿ. ಮಹದೇವಪ್ಪ ಅವರಿಗೆ ಇರಿಸು–ಮುರಿಸು ತಂದಿದೆ. ವಿಷಯ

ತಿಳಿಯುತ್ತಿದ್ದಂತೆ ಡಾ.ಪರಮೇಶ್ವರ್ ಹಾಗೂ ಡಾ.ಮಹದೇವಪ್ಪ ಈ ಎಲ್ಲಾ ಬೆಳವಣಿಗೆಗಳಿಂದ ದೂರ ಉಳಿದು ತಮ್ಮ ಜಿಲ್ಲಾ ಕೇಂದ್ರಗಳಲ್ಲೇ ಬಿಡಾರ ಹೂಡಿದ್ದಾರೆ.

ಇದರ ಸುಳಿವರಿತ ಜಾರಕಿಹೊಳಿ ಕಳೆದ ಎರಡು ದಿನಗಳ ಹಿಂದೆ ತುಮಕೂರಿಗೆ ತೆರಳಿ ಡಾ.ಪರಮೇಶ್ವರ್ ಅವರನ್ನು ಭೇಟಿ ಮಾಡಿ ಗೌಪ್ಯ ಮಾತುಕತೆ ನಡೆಸಿದರು.

ಇಂದು ಮೈಸೂರಿಗೆ ತೆರಳಿ ಡಾ. ಮಹದೇವಪ್ಪ ಅವರೊಂದಿಗೆ ಚರ್ಚಿಸಿ, ತಮ್ಮಲ್ಲಿನ ಒಗ್ಗಟ್ಟು ಕಾಪಾಡಿಕೊಳ್ಳುವ ಹಾಗೂ ವಿಶ್ವಾಸ ಗಳಿಸುವ ಪ್ರಯತ್ನ ಮುಂದುವರೆಸಿದ್ದಾರೆ. ಕಳೆದ ಎರಡು ದಿನಗಳಿಂದ ನಗರದಲ್ಲೇ ಬಿಡಾರ ಹೂಡಿದ್ದ ಜಾರಕಿಹೊಳಿ ಕೆಲವು ಸಚಿವರು ಮತ್ತು ಶಾಸಕರ ಜೊತೆಯೂ ಗೌಪ್ಯ ಮಾತುಕತೆ ನಡೆಸಿದ್ದರು.

ಸಿದ್ದರಾಮಯ್ಯ ಮಾತ್ರ ತಮಗೇನೂ ತಿಳಿದಿಲ್ಲ ಎನ್ನುವಂತಿದ್ದು, ಅಗತ್ಯ ಕಂಡು ಬಂದಲ್ಲಿ ಪರ್ಯಾಯ ನಾಯಕತ್ವಕ್ಕೆ ವೇದಿಕೆ ಸಿದ್ಧಪಡಿಸುತ್ತಿದ್ದಾರೆ. ಮತ್ತೊಂದೆಡೆ ಕೆಪಿಸಿಸಿ ಅಧ್ಯಕ್ಷರಾಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮುಂದೆ ಅವಕಾಶ ದೊರೆಯುವುದಾದರೆ ವರಿಷ್ಠರು ತಮ್ಮನ್ನು ಕೈಬಿಡುವುದಿಲ್ಲ ಎಂಬ ತುಂಬು ವಿಶ್ವಾಸದಲ್ಲಿದ್ದಾರೆ. ಇದರ ನಡುವೆಯೇ ತಮ್ಮ ಸಹೋದರ ಹಾಗೂ ಮಾಜಿ ಸಂಸದ ಡಿ.ಕೆ.ಸುರೇಶ್ ಮೂಲಕವೂ ಬಹಳ ಗೌಪ್ಯವಾಗಿ ತಮಗೆ ಅಧಿಕಾರ ತಪ್ಪದಂತೆ ಜಾಗ್ರತೆ ವಹಿಸಿದ್ದಾರೆ. ಸುರೇಶ್ ನಿನ್ನೆ ಸತೀಶ್ ಜಾರಕಿಹೊಳಿ ನಿವಾಸಕ್ಕೆ ತೆರಳಿ ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಚರ್ಚೆ ಮಾಡಿದ್ದಾರೆ. ಆದರೆ, ಮಾತುಕತೆ ವಿವರ ತಿಳಿದುಬಂದಿಲ್ಲ.

ಗುಪ್ತ್...ಗುಪ್ತ್ ಮಾತುಕತೆ!

ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಕಾರ್ಯಕ್ಕೆ ಕೈಹಾಕಿದ್ದಾರೆ. ಈ ಭಾಗದಲ್ಲಿ ಒಕ್ಕಲಿಗ ನಾಯಕರ ಪ್ರಾಬಲ್ಯವಿದ್ದು, ಅವರೆಲ್ಲಾ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಬೆಂಬಲಕ್ಕೆ ನಿಂತರೆ ಗುರಿ ತಲುಪಲು ಸಾಧ್ಯವಾಗದು ಎಂಬ ಮುನ್ನೆಚ್ಚರಿಕಾ ಕ್ರಮವಾಗಿ ಸತೀಶ್ ಜಾರಕಿಹೊಳಿ ಈ ಪ್ರಯತ್ನಕ್ಕೆ ಕೈಹಾಕಿದ್ದಾರೆ.

ಜಮ್ಮು–ಕಾಶ್ಮೀರ ಗೆದ್ದ ಐಎನ್‌ಡಿಐಎ

ಸದಸ್ಯರಿಂದ ವಿಧಾನಸಭೆ ಸದಸ್ಯರ ಸಂಖ್ಯೆ 95ಕ್ಕೆ ಹೆಚ್ಚಿದ್ದು, ಬಹುಮತದ ಮ್ಯಾಜಿಕ್ ಸಂಖ್ಯೆ 48ಕ್ಕೆ ತಲುಪಲಿದೆ. ನ್ಯಾಷನಲ್ ಕಾನ್ಫರೆನ್ಸ್ 42, ಕಾಂಗ್ರೆಸ್ 6, ಸಿಪಿಐ(ಎಂ) 1 ಕ್ಷೇತ್ರದಲ್ಲಿ ಜಯ ಗಳಿಸಿದ್ದು, 'ಐಎನ್‌ಡಿಐಎ' ಸರಳ ಬಹುಮತ ಪಡೆದಿದೆ. ಕಾಶ್ಮೀರ ಭಾಗದಲ್ಲಿ ನ್ಯಾಷನಲ್ ಕಾನ್ಫರೆನ್ಸ್ ಅತಿ ಹೆಚ್ಚು ಸ್ಥಾನ ಗಳಿಸಿವೆ. ಮೈತ್ರಿಕೂಟ ಜಯಿಸಿರುವ 49 ಕ್ಷೇತ್ರಗಳ ಪೈಕಿ 47 ಕಾಶ್ಮೀರ ವಲಯದಲ್ಲಿರುವುದು ವಿಶೇಷ.

ಕಾಂಗ್ರೆಸ್ ನೀರಸ ಪ್ರದರ್ಶನ: ಕಣಿವೆ ರಾಜ್ಯದಲ್ಲಿ ಮೈತ್ರಿಯಡಿ 39 ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡಿದ್ದ ಕಾಂಗ್ರೆಸ್ ಆರು ಕ್ಷೇತ್ರಗಳಲ್ಲಿ ಮಾತ್ರ ಗೆಲುವು ಸಾಧಿಸಿದೆ. ಹಿಂದೂ ಬಾಹುಳ್ಯದ ಜಮ್ಮು ಭಾಗದಲ್ಲಿ ಕೇವಲ ಒಂದು ಸ್ಥಾನ ಮಾತ್ರ ಗೆದ್ದಿದೆ. ಕಾಂಗ್ರೆಸ್ 2014ರಲ್ಲಿ 12 ಸ್ಥಾನ ಗೆದ್ದಿತ್ತು, ಈ ಬಾರಿ ಆರು ಸ್ಥಾನಕ್ಕೆ ಕುಸಿದಿದೆ. ಇನ್ನೊಂದೆಡೆ 56 ಕ್ಷೇತ್ರಗಳಿಗೆ ಸ್ಪರ್ಧಿಸಿದ್ದ ಎನ್‌ಸಿ ಶೇ.23.43 ಮತ ಪಡೆದು 42 ಸ್ಥಾನ ಗೆಲ್ಲುವ ಮೂಲಕ ಪ್ರಾಬಲ್ಯ ಮೆರೆದಿದೆ.

ನೆಲ ಕಚ್ಚಿದ ಪಿಡಿಪಿ: ಭಾರಿ ನಿರೀಕ್ಷೆ ಮೂಡಿಸಿದ್ದ ಮಾಜಿ ಸಿಎಂ ಮೆಹಬೂಬಾ ಮುಫ್ತಿ ಅವರ ಪಿಡಿಪಿ ನೆಲಕಚ್ಚಿದೆ. ಮುಫ್ತಿ ಪುತ್ರಿ ಇಲ್ತಿಜಾ ಮುಫ್ತಿ ಸಹ ಚುನಾವಣೆಯಲ್ಲಿ ಹೀನಾಯ ಸೋಲು ಅನುಭವಿಸಿದ್ದಾರೆ. ಅತಂತ್ರ ವಿಧಾನಸಭೆ ನಿರ್ಮಾಣವಾದಲ್ಲಿ ಕಿಂಗ್‌ಮೇಕರ್ ಆಗುವ ಕನಸು ಕಂಡಿದ್ದ ಮುಫ್ತಿಗೆ ಮುಖಭಂಗವಾಗಿದೆ. 2014ರಲ್ಲಿ 28 ಕ್ಷೇತ್ರದಲ್ಲಿ ಗೆಲುವು ಸಾಧಿಸಿದ್ದ ಪಿಡಿಪಿ 2024ರಲ್ಲಿ ಮೂರು ಸ್ಥಾನ ಗಳಿಸಿದ್ದು, ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತಾಗಿದೆ.

ಜಮ್ಮು ಮೇಲೆ ಬಿಜೆಪಿ ಹಿಡಿತ: ಜಮ್ಮು ಭಾಗದಲ್ಲಿ ಬಿಜೆಪಿ ಬಿಗಿ ಹಿಡಿತ ಸಾಧಿಸಿದೆ. ಒಟ್ಟಾರೆ 62 ಕ್ಷೇತ್ರಗಳಿಗೆ ಅಭ್ಯರ್ಥಿ ಕಣಕ್ಕಿಳಿಸಿದ್ದ ಬಿಜೆಪಿ 29 ಕ್ಷೇತ್ರಗಳಲ್ಲಿ ಜಯ ಗಳಿಸಿದೆ. ಬಿಜೆಪಿ 2014ರಲ್ಲಿ 25 ಸ್ಥಾನ ಗಳಿಸಿ, ಶೇ. 25.64ರಷ್ಟು ಮತ ಪಡೆದಿತ್ತು. ಈ ಸಲ ನಾಲ್ಕು ಸ್ಥಾನಗಳನ್ನು ತೆಕ್ಕೆಗೆ ತೆಗೆದುಕೊಂಡಿದೆ. ಆದರೆ, 370ನೇ ವಿಧಿ ರದ್ದು, ಭಯೋತ್ಪಾದನೆ ನಿಗ್ರಹ, ಹೊಸ ಉದ್ಯೋಗ ಸೃಷ್ಟಿಸುವ ಬಿಜೆಪಿ ಭರವಸೆ ಮಾತಿಗೆ ಕಾಶ್ಮೀರಿ ಜನ ಮರುಳಾಗಿಲ್ಲ. ಇನ್ನೂ ಜಮ್ಮು ಭಾಗದ ಹಿಂದೂ ಬಾಹುಳ್ಯ ಬನಿ, ರಾಂಬನ್ ಕ್ಷೇತ್ರಗಳಲ್ಲೂ ಬಿಜೆಪಿ ಅನಿರೀಕ್ಷಿತ ಸೋಲು ಅನುಭವಿಸಿದೆ.

ಗೆದ್ದ ಆಪ್ ಅಭ್ಯರ್ಥಿ ಆಸ್ತಿ 29 ಸಾವಿರ ರೂ.: ಜಮ್ಮು ಮತ್ತು ಕಾಶ್ಮೀರ ವಿಧಾನಸಭೆ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷ ಅಚ್ಚರಿ ಎಂಬಂತೆ ಒಂದು ಕ್ಷೇತ್ರದಲ್ಲಿ ಜಯ ಗಳಿಸಿದೆ. ದೋಡಾ ಕ್ಷೇತ್ರದಿಂದ ಸ್ಪರ್ಧೆ ಮಾಡಿದ್ದ ಆಪ್ ಅಭ್ಯರ್ಥಿ ಮೆಹರಾಜ್ ಮಲಿಕ್ ಅವರು ಬಿಜೆಪಿ ಅಭ್ಯರ್ಥಿಯನ್ನು 4,500 ಮತಗಳ ಅಂತರದಿಂದ ಸೋಲಿಸಿದ್ದಾರೆ.

ಸಂಗೀತದ ಹೊನಲು

ಹೊನಲು ಶ್ರೋತೃಗಳನ್ನು ಸಂಗೀತದ ಸಾಗರದಲ್ಲಿ ತೇಲಿಸಿತು. ಪೊಲೀಸ್ ಸಂಗೀತ ಕಲಾವಿದರ ಕೈಚಳಕದಲ್ಲಿ ಹೊರಹೊಮ್ಮಿದ ಸಂಗೀತದ ನಾದ ಮಾಧುರ್ಯಕ್ಕೆ ಸಭಿಕರು ಮನಸೋತು ಚಪ್ಪಾಳೆಯ ಮಳೆ ಸುರಿಸಿದರು. ಆರಂಭದಲ್ಲಿ ರಾಯಲ್ ಫ್ಯಾನ್ ಫೇರ್–ಹೆರಾಲ್ಡ್ ಟ್ರಂಪೆಟ್ (ರಾಜ ಕಹಳೆ) ಮೊಳಗಿಸುವ ಮೂಲಕ ಅತಿಥಿಗಳನ್ನು ಬರಮಾಡಿಕೊಳ್ಳಲಾಯಿತು. ಬಳಿಕ 'ಭಾರತ್ ಕೀ ಜವಾನ್...' ಗೀತೆಯ ಸಂಗೀತದೊಂದಿಗೆ ಕಲಾವಿದರ ತಂಡಗಳ ಆಗಮನವಾಯಿತು. ಆನಂತರದ ಎಲ್ಲಾ ತಂಡಗಳ ಸಮೂಹ ಪ್ರಸ್ತುತಿಯಲ್ಲಿ 'ವಂದೇ ಮಾತರಂ...', 'ಏ ಮೇರೆ ವತನ್ ಕೇ ಲೋಗೋ...', 'ಭಾರತ್ ಹಮ್ ಕೋ ಜಾನ್ ಸೇ ಪ್ಯಾರಾ...' ಗೀತೆಗಳನ್ನು ಸಾದರಪಡಿಸಿ ದೇಶಾಭಿಮಾನ ಮೆರೆಯಲಾಯಿತು. ಆ ಬಳಿಕ ಕ್ವೀನ್ಸ್ ಕಲರ್ ಮತ್ತು ಜಲ್‌ಪಕ್ಷಿ ಗೀತೆಗಳ ಹಿನ್ನಲೆ ಸಂಗೀತದೊಂದಿಗೆ ಪೊಲೀಸ್ ವಾದ್ಯ ತಂಡಗಳು ಮತ್ತು ಸ್ಟಿಕ್ ಮೇಜರ್‌ಗಳ ವಿನ್ಯಾಸಗಳ ಪ್ರಸ್ತುತಿ ಸಭಿಕರ ಮನಮೋಹಗೊಳಿಸಿತು.

ದಾಸಶ್ರೇಷ್ಠ ಕನಕದಾಸರ ರಚನೆಯ 'ನಮ್ಮಮ್ಮ ಶಾರದೆ ಉಮಾಮಹೇಶ್ವರಿ...' ಗೀತೆಯನ್ನು ಕರ್ನಾಟಕ ವಾದ್ಯವೃಂದವು ವಾದ್ಯಸಂಗೀತದಲ್ಲಿ ಪ್ರಸ್ತುತಪಡಿಸಿ ಸಭಿಕರಲ್ಲಿ ಭಕ್ತಿಭಾವ ಮೂಡಿಸಿತು. ಹಂಸಧ್ವನಿ ರಾಗದಲ್ಲಿ ಚತುರಶ್ರ ತ್ರಿಪುಟ ತಾಳದಲ್ಲಿ ಈ ಕೃತಿಗೆ ಸಂಗೀತ ಸಂಯೋಜನೆಯಾಗಿದ್ದು, ಇದನ್ನು ಅತ್ಯಂತ ಮಧುರಮಯವಾಗಿ ನುಡಿಸಿ ಸಭಿರು ತಲೆದೂಗುವಂತೆ ಮಾಡಲಾಯಿತು.

ನಂತರ 'ಲೈಟ್ ಚಾವರ್ಲಿ' ಕೃತಿಯ ಸಂಗೀತ ನಾದಸುಧೆ ಹರಿಸಿತು. 1914ರಲ್ಲಿ ಜರ್ಮನ್ ವಾದ್ಯಗಾರ ಹರ್ಮನ್ ಸ್ಟಾರ್ಕ್ ಅವರಿಂದ ರಚಿತವಾಗಿರುವ ಇದು ಕ್ವಿಕ್‌ಮಾರ್ಚ್ ಸಂಗೀತ ಸಂಯೋಜನೆ ಒಳಗೊಂಡಿದ್ದು, ಆಂಗ್ಲ ವಾದ್ಯವೃಂದ ಇದನ್ನು ಅದ್ಭುತವಾಗಿ ಸಾದರಪಡಿಸಿ ಸಭಿಕರಿಂದ ಚಪ್ಪಾಳೆ ಗಿಟ್ಟಿಸಿತು. ಜೊತೆಗೆ ಕ್ವಿಕ್‌ಮಾರ್ಚ್ ಸಹ ಅನಾವರಣಗೊಂಡು ಪ್ರೇಕ್ಷಕರನ್ನು ಸಡಗರದಲ್ಲಿ ತೇಲಿಸಿತು. ಕೆಎಆರ್‌ಪಿ ಮೌಂಟೆಡ್ ಕಂಪನಿ ಸಂಗ್ರಹದಲ್ಲಿರುವ ಅತ್ಯಾಮೂಲ್ಯ ಕೃತಿಗಳಲ್ಲಿ ಲೈಟ್ ಚಾವರ್ಲಿ ಕೂಡ ಒಂದಾಗಿದೆ.

ಮಧ್ವಾಚಾರ್ಯರ 'ಪ್ರೀಣಯಾಮೋ ವಾಸುದೇವಂ' ಕೃತಿಯನ್ನು ಮೋಹನ ರಾಗ ಹಾಗೂ ಚತುರಶ್ರ ಏಕತಾಳದಲ್ಲಿ ಕರ್ನಾಟಕ ವಾದ್ಯವೃಂದ ಸಾದರಪಡಿಸಿ, ಶಾಸ್ತ್ರೀಯ ಸಂಗೀತದ ಸೊಗಸನ್ನು ಅನಾವರಣಗೊಳಿಸಿತು. ಬಳಿಕ ಹೊಮ್ಮಿದ ರಾಕ್ ಮೆಲೋಡಿ ಸಂಗೀತಕ್ಕೆ ಸಭಿಕರು ಸಂಭ್ರಮಿಸಿದರು. ಸಂತ ತುಳಸೀದಾಸರ 'ಶ್ರೀ ರಾಮಚಂದ್ರ ಕೃಪಾಲು ಭಜಮನ' ಕೃತಿಯನ್ನು ಯಮನ್ ಕಲ್ಯಾಣಿ ರಾಗ ಮತ್ತು ಮಿಶ್ರಛಾಪು ತಾಳದೊಂದಿಗೆ ದಿಲ್‌ರೂಬ ವಾದ್ಯದೊಂದಿಗೆ ಕರ್ನಾಟಕ ವಾದ್ಯವೃಂದ ಪ್ರಸ್ತುತಪಡಿಸಿತು.

ನಂತರ ಫ್ಯೂಷನ್ ಸಂಗೀತದ ಮೋಡಿಗೆ ವೇದಿಕೆ ತೆರೆದುಕೊಂಡಿತು. ವಯೋಲಿನ್ ಮಾಂತ್ರಿಕ ಪದ್ಮಭೂಷಣ ಡಾ.ಎಲ್. ಸುಬ್ರಹ್ಮಣ್ಯ ಅವರ ಸಂಯೋಜನೆಯನ್ನು ಕರ್ನಾಟಕ ವಾದ್ಯವೃಂದ ಮತ್ತು ಆಂಗ್ಲ ವಾದ್ಯವೃಂದ ಜುಗಲ್‌ಬಂದಿ ಮಾದರಿಯಲ್ಲಿ ಪ್ರಸ್ತುತಪಡಿಸಿ ಸಂಗೀತದ ಚಮತ್ಕಾರ ಸೃಷ್ಟಿಸಿ ನಾದಲೋಕದಲ್ಲಿ ಸಭಿಕರ ತೇಲುವಂತೆ ಮಾಡಿತು.

ಬಳಿಕ ಡ್ರಮ್ಮರ್‌ಗಳ ಢಮರು ಸಂಗೀತ ಸಭಿಕರಿಗೆ ರೋಮಾಂಚನ ಅನುಭವ ನೀಡಿತು. 'ಸಾರೇ ಜಹಾನ್ ಸೇ ಅಚ್ಛಾ...' ಗೀತೆಯೊಂದಿಗೆ ಎಲ್ಲಾ ಸಮೂಹ ವಾದ್ಯಮೇಳ ತಂಡಗಳ ನಿರ್ಗಮನದೊಂದಿಗೆ ಅಪೂರ್ವ ಸಂಗೀತ ಕಾರ್ಯಕ್ರಮಕ್ಕೆ ತೆರೆಬಿದ್ದಿತು. ಅರಮನೆ ಆವರಣದಲ್ಲಿ ಅಪಾರ ಸಂಖ್ಯೆಯಲ್ಲಿ ಜನರು ಈ ವಿಶಿಷ್ಟ ಅನುಭವಕ್ಕೆ ಸಾಕ್ಷಿಯಾದರು. ಇದಕ್ಕೂ ಮುನ್ನ ವಾದ್ಯವೃಂದಗಳ ಸ್ಪರ್ಧೆಯಲ್ಲಿ ವಿಜೇತರಾದ ತಂಡಗಳಿಗೆ ಪಾರಿತೋಷಕ ವಿತರಣೆ ಮಾಡಲಾಯಿತು. ಗೃಹ ಸಚಿವ ಡಾ.ಜಿ.ಪರಮೇಶ್ವರ್ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ರಾಜ್ಯ ಪೊಲೀಸ್ ಮಹಾನಿರ್ದೇಶಕ ಮತ್ತು ಆರಕ್ಷಕ ಮಹಾನಿರೀಕ್ಷಕ ಡಾ.ಅಲೋಕ್ ಮೋಹನ್ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಡಾ.ಜಿ.ಪರಮೇಶ್ವರ್ ಅವರ ಪತ್ನಿ ಕನ್ನಿಕಾ ಪರಮೇಶ್ವರಿ, ಶಾಸಕರಾದ ತನ್ವೀರ್‌ಸೇಠ್, ಅನಿಲ್‌ಚಿಕ್ಕಮಾದು, ಡಿ.ರವಿಶಂಕರ್, ಟಿ.ಎಸ್.ಶ್ರೀವತ್ಸ, ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ ಮತ್ತಿತರರು ವೇದಿಕೆಯಲ್ಲಿದ್ದರು.

ಮಿಂದೆದ್ದ ಯುವ ಸಮೂಹ

ತಾಯಿಗೆ ತಕ್ಕ ಮಗ ಚಿತ್ರದ 'ಹೃದಯಕೆ ಹೆದರಿಕೆ', ಕಿರಿಕ್ ಪಾರ್ಟಿ ಚಿತ್ರದ 'ತೂಗು ಮಂಚದಲ್ಲಿ ಕೂತು', ರಾಬರ್ಟ್ ಚಿತ್ರದ 'ಕಣ್ಣ ಹೊಡಿಯೋಕೆ ನಿನ್ನೆ ಕಲ್ತಿನಿ ನಿನ್ನ ನೋಡಿ ಸುಮ್ಮನೆ ಹೆಂಗೆ ಇರಲಿ' ಎಂದು ಹಾಡುತ್ತಾ ಪ್ರೇಕ್ಷಕ ಸಮೂಹದ ಮನ ತಣಿಸಿದರು.

ಬಳಿಕ ರನ್ನ ಚಿತ್ರದ 'ತಿಥಿಲಿ ತಿಥಿಲಿ', ವಿಕ್ಟರಿ ಚಿತ್ರದ 'ಮೊನೆ ಮೊನೆ' ಖುಷಿ ಚಿತ್ರ 'ಕಳ್ಳ ಚಂದಮಾಮ' ಅಣ್ಣಾಬಾಂಡ್ ಚಿತ್ರದ 'ಕಾಣದಂತೆ ಮಾಯವಾದನು ನಮ್ಮ ಶಿವ' ಎಂದು ರಂಜಿಸಿದರೆ, ಆಕಸ್ಮಿಕ ಚಿತ್ರ 'ಹುಟ್ಟಿದರೆ ಕನ್ನಡ ನಾಡಲಿ ಹುಟ್ಟಬೇಕು; ಎಂಬ ಹಾಡಿನೊಂದಿಗೆ ಕನ್ನಡಾಭಿಮಾನ ಮೆರೆದರು.

ದ್ವಾಪರ ದಾಟಿಬಂದ ಕರಣ್ ಸಿಂಗ್: ಕೃಷ್ಣಂ ಪ್ರಣಯ ಸಖಿ ಚಿತ್ರದ 'ದ್ವಾಪರ ದಾಟುತ್ತಾ ನಿನ್ನನೇ ನೋಡಲು' ಹಾಡಿನೊಂದಿಗೆ ಸಿನಿ ರಸಿಕರ ಮನಗೆದ್ದ ಯುವ ಗಾಯಕ ಜಸ್ ಕರಣ್ ಸಿಂಗ್, ಪ್ರೀತಿಯ ಅಲೆ ಹಬ್ಬಿಸಿದರು. ಲವ್360 ಚಿತ್ರದ 'ಜಗವೇ ನೀನು ಗೆಳತಿಯೇ', ತ್ರಿವಿಕ್ರಮ ಚಿತ್ರದ 'ನಿನ್ನೆ ತನಕಾ' ಹಾಡುಗಳನ್ನು ಸುಮಧುರವಾಗಿ ಹಾಡುವ ಮೂಲಕ ಕುಣಿಸುವಂತೆ ಮಾಡಿದರು. ಕಡೆಗೆ ತಮ್ಮದೇ ನೆಚ್ಚಿನ 'ದ್ವಾಪರ ದಾಟುತ್ತಾ' ಹಾಡನ್ನು ಹಾಡಿ ಅಭಿಮಾನದ ಶಿಳ್ಳೇ–ಚಪ್ಪಾಳೆ ಸುರಿಮಳೆ ಪಡೆದರು.

ನೃತ್ಯ–ಸಂಗೀತ ರಸದೌತಣ: ಮೈಸೂರು ಜಿಲ್ಲಾ ನೃತ್ಯ ಸಂಯೋಜಕರ ಸಂಘದವರು ಹತ್ತಾರು ಹಾಡುಗಳಿಗೆ ಆತ್ಯಾಕರ್ಷಕ ಸಮೂಹ ನೃತ್ಯ ಪ್ರದರ್ಶನ ನೀಡಿದರೆ, ಕಲಾವಿದೆ ಇನಿಯಾ ನೇತೃತ್ವದಲ್ಲಿ ವಿಘ್ನನಿವಾರಕ ಕುರಿತು ಮೂಡಿಬಂದ ಆತ್ರೇಯ ಡ್ಯಾನ್ಸ್ ಸ್ಟುಡಿಯೋ ಸಮೂಹ ಸಾಂಪ್ರದಾಯಿಕ ನೃತ್ಯ ಪ್ರದರ್ಶನ ನೋಡುಗರ ಮನಸ್ಸಿಗೆ ಮುದ ನೀಡಿತು. ಹಾಗೆಯೇ ಯುವ ಸಂಭ್ರಮದಿಂದ ಬಡ್ತಿ ಪಡೆದು, ಯುವ ದಸರಾ ಭವ್ಯ ವೇದಿಕೆಯಲ್ಲಿ ನೃತ್ಯ ಪ್ರದರ್ಶನ ನೀಡಿದ ಇಲವಾಲದ ಕಲಾಭಾರತಿ ತಂಡ, ಪಡುವಾರಹಳ್ಳಿಯ ಮಹಾರಾಣಿ ಮಹಿಳಾ ವಾಣಿಜ್ಯ ಕಾಲೇಜು, ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜು, ಹುಣಸೂರಿನ ಶ್ರೀ ಡಿ.ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಪುಟ್ಟಸ್ವಾಮಿ ಪ್ರಥಮ ದರ್ಜೆ ಕಾಲೇಜು ತಂಡಗಳು ಮಹಿಳಾ ಸಬಲೀಕರಣ, ನಾಡು–ನುಡಿ, ಸೈನಿಕರು, ದಸರಾ ಆನೆ ಅರ್ಜುನ ಕುರಿತು ಮನಮೋಹಕ ನೃತ್ಯ ಪ್ರದರ್ಶನ ನೀಡುವ ಮೂಲಕ ರಸದೌತಣ ನೀಡಿದರು.

ಒಳ್ಳೆ ಸರ್ಕಾರ, ಒಳ್ಳೊಳ್ಳೆ ನಿರ್ಧಾರ: ಮೈಸೂರಿನ ಮೇಟಗಳ್ಳಿಯ ಜೆಎಸ್‌ಎಸ್‌ಎಸ್ ಕಾಲೇಜು ವಿದ್ಯಾರ್ಥಿಗಳು ಸರ್ವಧರ್ಮ ಸಮಾನತೆ ಹಾಗೂ ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ಬಿಂಬಿಸುವ ಆಕರ್ಷಕ ನೃತ್ಯದೊಂದಿಗೆ ಇದು ಒಳ್ಳೆಯ ಸರ್ಕಾರ.. ಒಳ್ಳೊಳ್ಳೆಯ ನಿರ್ಧಾರ ಎಂದು ಹಾಡಿ ಹೊಗಳಿದರು.

ಒಕ್ಕಲಿಗರ ಸಂಘ ವಿರೋಧ

ಈ ಹಿನ್ನೆಲೆಯಲ್ಲಿ ಈಗಾಗಲೇ ಎರಡು–ಮೂರು ಬಾರಿ ಸರ್ಕಾರ ಹಾಗೂ ಹಿಂದುಳಿದ ವರ್ಗಗಳ ಆಯೋಗಕ್ಕೆ ಜಾತಿಗಣತಿ ಮರು ಸಮೀಕ್ಷೆ ನಡೆಸುವಂತೆ ಸಂಘ ಮನವಿ ಮಾಡಿತ್ತು. ಇದೇ ಒತ್ತಾಯವನ್ನು ಅಖಿಲ ಭಾರತ ವೀರಶೈವ ಮಹಾಸಭಾ ಸಹಾ ಮಾಡಿದೆ, ಇತರೆ ಸಮುದಾಯಗಳೂ ಮನವಿ ಮಾಡಿವೆ. ಇವುಗಳ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಹಾಗೂ ಸಚಿವರುಗಳು ಗಂಭೀರವಾಗಿ ಪರಿಗಣಿಸಬೇಕು ಎಂದು ಆಗ್ರಹಿಸುತ್ತೇವೆ.

ಸಂಪುಟ ಸಭೆಯಲ್ಲಿ ಜಾತಿಗಣತಿ ವರದಿ ಮಂಡಿಸಿ ಚರ್ಚೆ ನಡೆಸಿ ಅನುಷ್ಠಾನಕ್ಕೆ ತರುವ ಕುರಿತು ಮಾಧ್ಯಮಗಳಲ್ಲಿ ವರದಿಯಾಗಿದ್ದು, ಅವೈಜ್ಞಾನಿಕ ವರದಿ ಬಗ್ಗೆ ಸಂಪುಟ ಸಭೆಯಲ್ಲಿ ಚರ್ಚಿಸುವ ಅಗತ್ಯವಿಲ್ಲ. ಕೆಲವು ಪ್ರಭಾವಿಗಳ ಹಾಗೂ ಸಂಘಟನೆಗಳ ಒತ್ತಡಕ್ಕೆ ಸರ್ಕಾರ ಮಣಿಯಬಾರದು, ರಾಜಕೀಯ ದುರುದ್ದೇಶದಿಂದ ಜಾತಿಗಣತಿ ಅನುಷ್ಠಾನವಾಗಬಾರದು, ಸರ್ವಸಮ್ಮತ ವರದಿ ಅನುಷ್ಠಾನಗೊಳ್ಳಬೇಕು. ವೈಜ್ಞಾನಿಕ ವರದಿ ಪಡೆಯದೇ ಹಠಕ್ಕೆ ಬಿದ್ದು ಪ್ರಸ್ತುತ ವರದಿ ಅನುಷ್ಠಾನಕ್ಕೆ ಸರ್ಕಾರ ಮುಂದಾದರೆ ಒಕ್ಕಲಿಗರ ಸಂಘದ ನೇತೃತ್ವದಲ್ಲಿ ಇತರ ಸಂಘ–ಸಂಸ್ಥೆಗಳ ಜೊತೆಗೂಡಿ ಉಗ್ರ ಹೋರಾಟ ನಡೆಸುವುದು ಅನಿವಾರ್ಯವಾಗಲಿದೆ ಎಂದು ಸಂಘ ಎಚ್ಚರಿಸಿದೆ.

ಮೈಸೂರಲ್ಲಿ ರೋಚಕ ಬೈಕ್ ಸ್ಟಂಟ್

ಟಾರ್ಚ್‌ಲೈಟ್ ಪರೇಡ್‌ನಲ್ಲಿ 'ಶ್ವೇತ ಅಶ್ವ' ಮಿಲಿಟರಿ ಪೊಲೀಸರ ಸಾಹಸ ಪ್ರದರ್ಶನ



ಚಿತ್ರ: ಎಂ.ಎನ್.ಲಕ್ಷ್ಮೀನಾರಾಯಣ ಯಾದವ್

ಒಂದೇ ಬೈಕ್‌ನಲ್ಲಿ 7 ಮಂದಿ ಸ್ಟಂಟ್ ಮಾಡುತ್ತಾ ಸಾಗುತ್ತಿರುವ ಮಿಲಿಟರಿ ಪೊಲೀಸ್ ತಂಡ.



ಬುಲೆಟ್ ಮೇಲೆ ನಿಂತು ಸೆಲ್ಯೂಟ್ ಹೊಡೆಯುತ್ತಿರುವ ತಂಡದ ನಾಯಕ ನಾಯಬ್ ಸುಬೇದಾರ್ ಎಂ.ಕೆ.ಸಿಂಗ್



7 ಬೈಕ್‌ನಲ್ಲಿ ಸ್ಟಂಟ್ ಮಾಡುತ್ತಾ ಸಾಗುತ್ತಿರುವ ಮಿಲಿಟರಿ ಪೊಲೀಸ್ ತಂಡ.



ಬೈಕ್ ಮೇಲೆ ಮಲಗಿಕೊಂಡು ಸಾಗುತ್ತಿರುವುದು.



ಮುಂಭಾಗದ ಮಡ್‌ಗಾರ್ಡ್ ಮೇಲೆ ಹಿಮ್ಮುಖವಾಗಿ ಕುಳಿತು ಬೈಕ್ ಓಡಿಸುತ್ತಿರುವುದು.



ಚಲಿಸುತ್ತಿದ್ದ ಬೈಕ್‌ನಲ್ಲಿ ಸ್ಟಂಟ್ ಮಾಡುತ್ತಿರುವುದು.

ಮೈಸೂರು,ಅ.8(ಎಂಟಿವೈ)– ದಸರಾ ಮಹೋತ್ಸವದ ಜಂಬೂಸವಾರಿ ದಿನ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ನಡೆಯುವ ಟಾರ್ಚ್‌ಲೈಟ್ ಪರೇಡ್‌ನಲ್ಲಿ ಭಾರತೀಯ ಸೇನೆಯ ಮಿಲಿಟರಿ ಪೊಲೀಸರು ಶ್ವೇತ ಬುಲೆಟ್ ಬೈಕಿನಲ್ಲಿ ಮೈನವಿರೇಳಿಸುವ ಸಾಹಸ ಪ್ರದರ್ಶನ ನೀಡಲಿದ್ದು, ತಾಲೀಮಿನಲ್ಲಿ ನಿರತರಾಗಿದ್ದಾರೆ.

ಜಂಬೂಸವಾರಿ ನಂತರ ಬನ್ನಿಮಂಟಪದ ಮೈದಾನದಲ್ಲಿ ಸೇನಾ ಸಿಬ್ಬಂದಿಗಳ ತಂಡ ಬೈಕ್ ಮೂಲಕ ರೋಚಕ ಸ್ಟಂಟ್ ನಡೆಸಿ ಪ್ರೇಕ್ಷಕರನ್ನು ಆಕರ್ಷಿಸುವುದರೊಂದಿಗೆ ರೋಮಾಂಚನಗೊಳಿಸಲಿದೆ.

ಮಿಲಿಟರಿ ಪೊಲೀಸ್ ತಂಡ: ಮಿಲಿಟರಿ ಪೊಲೀಸರ ಶ್ವೇತ ಅಶ್ವ(ಬಿಳಿ ಕುದುರೆ) ತಂಡದ 30 ಮಂದಿ ಬೆಂಗಳೂರಿನ ಕೋರ್ ಆಫ್ ಮಿಲಿಟರಿ ಆಫೀಸ್‌ನಿಂದ ಮೈಸೂರಿಗೆ ಆಗಮಿಸಿದ್ದು, ಬಿಳಿ ಬಣ್ಣದ 29 ರಾಯಲ್ ಎನ್‌ಫೀಲ್ಡ್ ಬೈಕ್ ಹಾಗೂ 4 ಹೀರೋ ಎಕ್ಸ್‌ಪ್ರೆಸ್ ಪ್ರೋ ಬೈಕ್‌ಗಳು ಸೇರಿದಂತೆ ಒಟ್ಟು 33 ಬೈಕ್‌ಗಳೊಂದಿಗೆ ಸಾಹಸ ಪ್ರದರ್ಶಿಸಲಿದ್ದಾರೆ.

ಸ್ಟಂಟ್: ನಾಯಬ್ ಸುಬೇದಾರ್ ಎಂ.ಕೆ.ಸಿಂಗ್ ನಾಯಕತ್ವದಲ್ಲಿ ಮಿಲಿಟರಿ ಪೊಲೀಸರ ತಂಡ ಬಿಳಿ ಕುದುರೆ(ಶ್ವೇತ ಅಶ್ವ) ಹೆಸರಿನ ಬೈಕ್ ತಂಡ ಅ.11 ಮತ್ತು 12ರಂದು ಸಂಜೆ 7 ಗಂಟೆಗೆ ಪಂಜಿನ ಕವಾಯತ್ ಪ್ರದರ್ಶನದಲ್ಲಿ 18ರಿಂದ 20 ನಿಮಿಷಗಳ ಕಾಲ ವಿವಿಧ ಸ್ಟಂಟ್‌ಗಳನ್ನು ಪ್ರದರ್ಶಿಸಲಿದ್ದಾರೆ. 7 ಬೈಕ್‌ಗಳಲ್ಲಿ 30 ಮಂದಿ ನಿಂತುಕೊಂಡು ಪಿರಮಿಡ್ ಮಾದರಿಯಲ್ಲಿ ಸಾಗಲಿದ್ದಾರೆ. ಅಲ್ಲದೆ, ಫೈರ್ ಜಂಪ್, ಶ್ವೇತ ಅಶ್ವ ಜಂಪ್, ಟ್ಯೂಬ್ ಲೈಟ್ ಜಂಪ್, ಸರ್ಕಲ್ ಎಕ್ಸರ್ಸೈಜ್, ಓಪನಿಂಗ್ ಕ್ರಾಸಿಂಗ್, ಪ್ಯಾರಲ್ ಕ್ರಾಸಿಂಗ್, ಗ್ರೂಪ್ ಈವೆಂಟ್ ಸೇರಿದಂತೆ ವಿವಿಧ ಕಸರತ್ತನ್ನು ಪ್ರದರ್ಶಿಸಲಿದ್ದಾರೆ. ಇದರೊಂದಿಗೆ ಬುಲೆಟ್ ಮೇಲೆ ನಿಂತು, ಮಲಗಿ ಸಾಗುವುದು. ಬೈಕ್ ಚಲಿಸುವಾಗಲೇ ಅದರ ಸೀಟ್ ಮೇಲೆ ಮಲಗಿ ಈಜಾಡುವಂತೆ ಮಾಡುವುದು, ಚಲಿಸುವ ಬೈಕ್ ಮೇಲೆ ನಿಂತುಕೊಂಡು ಸೆಲ್ಯೂಟ್ ಹೊಡೆಯುವುದು, ಬೈಕ್ ಚಲಿಸುವಾಗಲೇ ಏಣಿ ಏರುವುದು ಸೇರಿದಂತೆ ಇನ್ನಿತರ ಸ್ಟಂಟ್ ಮಾಡಿ ಸಭಿಕರನ್ನು ರಂಜಿಸಲಿದ್ದಾರೆ.

30ರಲ್ಲಿ 10 ಮಂದಿ ಕನ್ನಡಿಗರು: ಪಂಜಿನ ಕವಾಯತ್ ಪ್ರದರ್ಶನದಲ್ಲಿ ಬೈಕ್ ಸ್ಟಂಟ್ ಮಾಡಲು ಬಂದಿರುವ ಮಿಲಿಟರಿ ಪೊಲೀಸ್ ತಂಡದಲ್ಲಿ 30 ಮಂದಿ ಸದಸ್ಯರಿದ್ದು, ಅವರಲ್ಲಿ 10 ಮಂದಿ ಕನ್ನಡಿಗರೇ ಇರುವುದು ಗಮನಾರ್ಹ. ಕಳೆದ ಹಲವು ವರ್ಷಗಳಿಂದ ಮಿಲಿಟರಿ ಪೊಲೀಸ್‌ನ ಶ್ವೇತ ಅಶ್ವ ತಂಡದಲ್ಲಿ ಸೇವೆ ಸಲ್ಲಿಸುತ್ತಿದ್ದು, ಬೈಕ್ ಸ್ಟಂಟ್‌ನ ಪ್ರಮುಖ ಜವಾಬ್ದಾರಿ ನಿಭಾಯಿಸುತ್ತಿದ್ದಾರೆ.

ಎರಡು ದಿನ ತಾಲೀಮು, ಎರಡು ದಿನ ಪ್ರದರ್ಶನ: ಪಂಜಿನ ಕವಾಯತ್ ಮೈದಾನದಲ್ಲಿ ಜಂಬೂಸವಾರಿ ದಿನ ಅ.12ರಂದು ಸಂಜೆ ನಡೆಯುವ ಕವಾಯತ್ ವೇಳೆ ಬೈಕ್‌ಗಳ ಸ್ಟಂಟ್ ಪ್ರದರ್ಶಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಅ.11ರಂದು ತಾಲೀಮು ನಡೆಯಲಿದೆ. ಅಲ್ಲದೆ, ಇಂದು ಮತ್ತು ನಾಳೆ ತರಬೇತಿ ಪಡೆಯಲಿದ್ದಾರೆ. ಇದಕ್ಕಾಗಿ ಕೆಲವು ಮಾರ್ಕ್ ಮಾಡಲಾಗಿದ್ದು, ಯಾವ ಬೈಕ್ ಯಾವ ಪಾಯಿಂಟ್‌ನಲ್ಲಿ ಹೋಗಬೇಕು. ಯಾವ ಸ್ಥಳದಲ್ಲಿ ತಿರುವು ಪಡೆಯಬೇಕು. ಯಾವ ಸ್ಥಳದಲ್ಲಿ ಜಂಪ್ ಮಾಡಿಸುವುದು ಸೇರಿದಂತೆ ಕೆಲ ಸ್ಟಂಟ್‌ಗೆ ಗುರುತು ಮಾಡುವ ಪ್ರಕ್ರಿಯೆ ನಡೆಸಲಾಗಿದೆ.

ಮೈದಾನ ಸಮತಟ್ಟು: ಮಳೆಯಿಂದಾಗಿ ಪಂಜಿನ ಕವಾಯತು ಮೈದಾನದಲ್ಲಿ ಕೆಲವೆಡೆ ನೀರು ನಿಂತುಕೊಂಡು ಕೆಸರಿನಂತಾಗಿತ್ತು. ಇದರಿಂದ ಸ್ಟಂಟ್ ಮಾಡುವ ವೇಳೆ ಬೈಕ್‌ಗಳು ಜಾರುವ ಸಂದರ್ಭ ಇರುವುದನ್ನು ಗಮನಿಸಿದ ಮಿಲಿಟರಿ ಪೊಲೀಸರ ತಂಡ, ಅಗತ್ಯವಿದ್ದ ಕಡೆ ಸಮತಟ್ಟು ಮಾಡುವಂತೆ ಸೂಚನೆ ನೀಡಿದರು. ಮುಡಾ ವತಿಯಿಂದ ಮೈದಾನದಲ್ಲಿ ಸಮತಟ್ಟು ಮಾಡಲಾಯಿತು.

ಸಂಜೆಯೂ ತರಬೇತಿ: ಇಂದು ಬೆಳಗ್ಗೆ ಬೈಕ್ ಸ್ಟಂಟ್ ಮಾಡಿದ್ದ ಮಿಲಿಟರಿ ಪೊಲೀಸರ ತಂಡ ಸಂಜೆಯೂ ಬಿಳಿ ಕುದುರೆ ಬೈಕ್‌ಗಳೊಂದಿಗೆ ಪೂರ್ಣ ಪ್ರಮಾಣದ ಸ್ಟಂಟ್ ತರಬೇತಿ ಪಡೆದುಕೊಂಡರು. ಬೆಳಗ್ಗೆ ಮಾಡಿದ್ದ ಮಾರ್ಕ್‌ಗಳನ್ನು ಮುಂದಿಟ್ಟುಕೊಂಡು ಸಂಜೆ ತರಬೇತಿ ಪಡೆದರು. ಬುಧವಾರವೂ ತರಬೇತಿ ಪಡೆಯಲಿದ್ದು, ಶುಕ್ರವಾರ ಪೂರ್ಣ ಪ್ರಮಾಣದ ತಾಲೀಮು ನಡೆಸಲಿದ್ದಾರೆ.

ಜಂಬೂಸವಾರಿಯಲ್ಲಿ 50 ಸ್ತಬ್ಧಚಿತ್ರಗಳು



ನಾಡು, ನುಡಿ, ಜನಪದ, ಸಮಾನತೆ, ಸಂವಿಧಾನದ ಮಹತ್ವ ಸಾರಲಿವೆ

ಫೈಲ್ ಚಿತ್ರ

ಮೈಸೂರು, ಅ.8(ಜಿಎ)–ಮೈಸೂರು ದಸರಾ ಮಹೋತ್ಸವದ ಜಂಬೂಸವಾರಿ ಮೆರವಣಿಗೆಯಲ್ಲಿ ನಾಡು, ನುಡಿ, ಜನಪದ, ಸಮಾನತೆ ಸಂವಿಧಾನದ ಮಹತ್ವವನ್ನು ವಿವಿಧ ಜಿಲ್ಲೆಗಳ 50 ಸ್ತಬ್ಧಚಿತ್ರಗಳು ಸಾರಲಿವೆ ಎಂದು ದಸರಾ ಸ್ತಬ್ಧಚಿತ್ರ ಉಪಸಮಿತಿ (ಅಧಿಕಾರೇತರ) ಅಧ್ಯಕ್ಷ ಪ್ರಶಾಂತ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿವರ್ಷದಂತೆ ಈ ಬಾರಿ 50 ಸ್ತಬ್ಧ ಚಿತ್ರಗಳನ್ನು ಆಯ್ಕೆ ಮಾಡಿದ್ದು, ಅದರಲ್ಲಿ 31 ಜಿಲ್ಲೆಗಳು, 19 ವಿವಿಧ ನಿಗಮ ಮಂಡಳಿ ಮತ್ತು ಇಲಾಖೆಗಳ ಸ್ತಬ್ಧಚಿತ್ರಗಳನ್ನೊಳಗೊಂಡಿದೆ. ಕಲೆ, ವಾಸ್ತುಶಿಲ್ಪ, ಪ್ರವಾಸೋದ್ಯಮ, ಜಾನಪದ ಹಿನ್ನೆಲೆ, ಹಬ್ಬ ಹರಿದಿನ ಹಾಗೂ ಸಮಾನತೆ, ಭ್ರಾತೃತ್ವ, ಸಂವಿಧಾನದ ಮಹತ್ವ ಮೊದಲಾದ ವಿಷಯಗಳಿಗೆ ಆದ್ಯತೆ ನೀಡಲಾಗಿದೆ ಎಂದರು.

ಮೈಸೂರಿನ ಬಂಡಿಪಾಳ್ಯದ ಎಪಿಎಂಸಿ ಆವರಣದಲ್ಲಿ ಸ್ತಬ್ಧಚಿತ್ರ ನಿರ್ಮಾಣ ಕಾರ್ಯ ಭರದಿಂದ ಸಾಗಿದ್ದು, ಶೇ.80ರಷ್ಟು ಪೂರ್ಣಗೊಂಡಿದೆ. ಮೈಸೂರು ಜಿಲ್ಲೆಯಿಂದ ಮಾನವಕುಲದ ಸಮಾನತೆ, ಧಾರ್ಮಿಕ ಬೆಳಕಿನಿಂದ ಸಂವಿಧಾನಿಕ ನ್ಯಾಯ ಕುರಿತು ಬೆಳಕು ಚೆಲ್ಲಲಿದೆ. ಪ್ರತಿ ಬಾರಿಯಂತೆ ಒಂದು ಸ್ತಬ್ಧಚಿತ್ರದ ಹಿಂದೆ ಒಂದು ಕಲಾತಂಡವೂ ಮೆರವಣಿಗೆಯಲ್ಲಿ ಸಾಗಲಿದೆ ಎಂದು ತಿಳಿಸಿದರು.

ಯಾದಗಿರಿ, ಕೊಡಗು, ರಾಯಚೂರು, ಚಾಮರಾಜನಗರ, ಕೆಎಂಎಫ್, ವಿಜಯನಗರ, ಬೆಂಗಳೂರು ನಗರ, ಬೀದರ್, ಕೊಪ್ಪಳ, ಪ್ರವಾಸೋದ್ಯಮ ಇಲಾಖೆ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ, ಉತ್ತರ ಕನ್ನಡ, ಬೆಂಗಳೂರು ಗ್ರಾಮಾಂತರ, ದಾವಣಗೆರೆ, ಕೋಲಾರ, ಮೊದಲಾದ ಜಿಲ್ಲೆ ಹಾಗೂ ವಿವಿಧ ಇಲಾಖೆಗಳು ಪಾಲ್ಗೊಳ್ಳಲಿದ್ದು, ಪ್ರತಿವರ್ಷ ಮೆರವಣಿಯಲ್ಲಿ ಆಗುವ ಅಡಚಣೆಯನ್ನು ತಡೆಗಟ್ಟಲು ಕ್ರಮ ವಹಿಸಲಾಗುತ್ತಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಮಿತಿ ಉಪಾಧ್ಯಕ್ಷ ಈಶ್ವರ ಚಕ್ಕಡಿ, ಭಾಸ್ಕರ್ ಪರಮೇಶ್ ನಾಯಕ್, ಲಿಖಿತಾ, ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಲ್ಲಿ ವಿಶ್ವ ಮಹಿಳಾ ಟೆನ್ನಿಸ್ ಟೂರ್ನಿ ಆರಂಭ



ಮೈಸೂರಿನ ಟೆನ್ನಿಸ್ ಕ್ಲಬ್ ಮೈದಾನದಲ್ಲಿ 7 ದಿನಗಳ ಐಟಿಎಫ್ ಮೈಸೂರು ಓಪನ್ ಮಹಿಳಾ ವಿಶ್ವ ಟೆನ್ನಿಸ್ ಟೂರ್ನಮೆಂಟ್‌ಗೆ ಚಾಲನೆ ನೀಡಲಾಯಿತು.

ಮೈಸೂರು, ಅ. 8(ಆರ್‌ಕೆ)– ಮೈಸೂರಿನ ಟೆನ್ನಿಸ್ ಕ್ಲಬ್ ಮೈದಾನದಲ್ಲಿ 7 ದಿನಗಳ ಐಟಿಎಫ್ ಮೈಸೂರು ಓಪನ್ ಮಹಿಳಾ ವಿಶ್ವ ಟೆನ್ನಿಸ್ ಟೂರ್ನಮೆಂಟ್ ಆರಂಭವಾಗಿದೆ. ಐಟಿಎಫ್ ವರ್ಲ್ಡ್ ಟೆನ್ನಿಸ್ ಟೂರ್, ಕರ್ನಾಟಕ ಸ್ಟೇಟ್ ಲಾನ್ ಟೆನ್ನಿಸ್ ಅಸೋಸಿಯೇಷನ್ (ಕೆಎಸ್‌ಎಲ್‌ಟಿಎ) ಮತ್ತು ಮೈಸೂರು ಟೆನ್ನಿಸ್ ಕ್ಲಬ್ (ಎಂಟಿಸಿ) ಸಂಯುಕ್ತಾಶ್ರಯದಲ್ಲಿ ಆಯೋಜಿಸಿರುವ ಮಹಿಳಾ ವಿಶ್ವ ಟೆನ್ನಿಸ್ ಟೂರ್ನಮೆಂಟ್ ಅನ್ನು ಕೆಎಸ್‌ಎಲ್‌ಟಿಎ ಕಾರ್ಯದರ್ಶಿ ಮಹೇಶ್ವರರಾವ್ ಬಲೂನುಗಳನ್ನು ಹಾರಿಬಿಡುವ ಮೂಲಕ ಉದ್ಘಾಟಿಸಿದರು. ಅಕ್ಟೋಬರ್ 13ರವರೆಗೆ ನಡೆಯಲಿರುವ ಟೂರ್ನಿಯಲ್ಲಿ ಪ್ರಪಂಚದ 9 ರಾಷ್ಟ್ರಗಳ 32 ಮಂದಿ ಮಹಿಳಾ ಟೆನ್ನಿಸ್ ಆಟಗಾರರು ಭಾಗವಹಿಸಿದ್ದಾರೆ.

ಟೂರ್ನಮೆಂಟ್‌ಗೆ ಚಾಲನೆ ನೀಡುವ ವೇಳೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಮೈಸೂರು ಟೆನ್ನಿಸ್ ಕ್ಲಬ್ ಅಧ್ಯಕ್ಷ ಎ.ಆರ್.ಅಲಗಪ್ಪನ್, ಮೈಸೂರು ಮಹಾನಗರಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್, ಟೂರ್ನಮೆಂಟ್ ಡೈರೆಕ್ಟರ್ ಪಿ.ಎಸ್. ವಸ್ತ್ರದ್, ಕೆಎಸ್‌ಎಲ್‌ಟಿಎ ಜಂಟಿ ಕಾರ್ಯದರ್ಶಿ ಪ್ರಜ್ವಲ್‌ದೇವ್, ಐಟಿಎಫ್ ಸೂಪರ್‌ವೈಸರ್, ಇರಾನಿನ ಸಮನ್ ಹಸಾನಿ, ಅಪ್ಪು, ನಾಗರಾಜ್, ಮಂಜುನಾಥ್, ಮೋಸಿ, ಮನೋಜ್, ಡಾ. ಸುಲೇಮಾನ್ ಸೇತ್, ರಮೇಶ್ ಹಾಗೂ ಕೋಚ್‌ಗಳು ಟೆನ್ನಿಸ್ ಟೂರ್ನಿ ಉದ್ಘಾಟನೆ ವೇಳೆ ಉಪಸ್ಥಿತರಿದ್ದರು.



ಸೌಹಾರ್ದ ಭೇಟಿ

ಮೈಸೂರಿನ ಸುಣ್ಣದಕೇರಿಯಲ್ಲಿರುವ ಮಾಜಿ ಕಾರ್ಪೋರೇಟರ್ ಲೋಕೇಶ್ ಪಿಯಾ ಮನೆಗೆ ಮಂಗಳವಾರ ಸೌಹಾರ್ದಯುತವಾಗಿ ಭೇಟಿ ನೀಡಿದ್ದ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಉಪಾಹಾರ ಸ್ವೀಕರಿಸಿದರು. ಮಾಜಿ ಸಚಿವ ಶಿವಣ್ಣ ಅವರನ್ನು ಚಿತ್ರದಲ್ಲಿ ಕಾಣಬಹುದು.

ವಿದ್ಯಾರ್ಥಿನಿಲಯ ಪ್ರವೇಶಾತಿಗಾಗಿ ಅರ್ಜಿ ಆಹ್ವಾನ

ಮೈಸೂರು: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ 2024–25ನೇ ಸಾಲಿನ ಮೆಟ್ರಿಕ್ ನಂತರದ ವಿದ್ಯಾರ್ಥಿ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಕ್ಕೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ದಾಖಲೆಗಳ ವಿವರಗಳಿಗಾಗಿ https://www.bcwd.karnataka.gov.in/ ಹಾಗೂ ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ ಇ–ಮೇಲ್ bcwd helpline @gmail.comನ ಮುಖಾಂತರ ಅಥವಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ, ತಾಲೂಕು ಅಧಿಕಾರಿಗಳನ್ನು ದಾಖಲೆಗಳೊಂದಿಗೆ ಸಂಪರ್ಕಿಸಬಹುದು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು,ಅ.8(ಆರ್‌ಕೆ)–ಶ್ರೀ ಡಾ.ಬಾಲಗಂಗಾಧರನಾಥ ಸ್ವಾಮೀಜಿಯವರ ಒಕ್ಕಲಿಗರ ಸಂಘವು ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಗಳಿಸಿರುವ ವಿದ್ಯಾರ್ಥಿಗಳು ದಾಖಲಾತಿಗಳನ್ನು ಮೈಸೂರಿನ ವಿಜಯಶ್ರೀಪುರ, 2ನೇ ಮೇನ್, 2ನೇ ಕ್ರಾಸ್‌ನಲ್ಲಿರುವ ಸಂಘದ ಕಚೇರಿಗೆ ತಲುಪಿಸುವಂತೆ ಅಧ್ಯಕ್ಷ ಮೊಗಣ್ಣೇಗೌಡ ತಿಳಿಸಿದ್ದಾರೆ. ಮಾಹಿತಿಗೆ ಮೊ.8050456685 ಸಂಪರ್ಕಿಸಬಹುದು.

ದೇಶ - ವಿದೇಶ

ಅಧಿಕಾರಕ್ಕೆ ಬಂದ ಆರೇ ದಿನದಲ್ಲಿ ಮೆಕ್ಸಿಕೋ ಮೇಯರ್ ಹತ್ಯೆ



ಮೆಕ್ಸಿಕೊ: ಹಿಂಸಾಪೀಡಿತ ಗುರೆರೊ ರಾಜ್ಯದ ರಾಜಧಾನಿಯ ಮೇಯರ್ ಭಾನುವಾರ ಹತ್ಯೆಗೀಡಾಗಿದ್ದು, ಅಧಿಕಾರಕ್ಕೆ ಬಂದ ಆರೇ ದಿನದಲ್ಲಿ ಇವರ ಹತ್ಯೆಯಾಗಿದೆ ಎಂದು ರಾಜ್ಯದ ಗವರ್ನರ್ ಪ್ರಕಟಿಸಿದ್ದಾರೆ.

ನೈರುತ್ಯ ಮೆಕ್ಸಿಕೋದ ಪ್ರದೇಶವಾಗಿರುವ ಸುಮಾರು 2.8 ಲಕ್ಷ ಜನಸಂಖ್ಯೆ ಹೊಂದಿರುವ ಚಿಲ್ಪಾಂಸಿಂಗೋ ನಗರದ ಮೇಯರ್ ಅಲೆಜೆಂಡ್ರೋ ಅರ್ಕೋಸ್ ಅಧಿಕಾರ ವಹಿಸಿಕೊಂಡ ಆರೇ ದಿನಗಳಲ್ಲಿ ಹತ್ಯೆಗೀಡಾಗಿದ್ದಾರೆ. ಅವರ ಅಕಾಲಿಕ ಮರಣದಿಂದ ಇಡೀ ಗುರೇರೊ ರಾಜ್ಯ ಶೋಕಪೀಡಿತವಾಗಿದೆ ಎಂದು ಗವರ್ನರ್ ಎವೆಲಿನ್ ಸಲ್ಗಡೊ ಹೇಳಿದ್ದಾರೆ. ಪ್ರಕರಣದ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದು ಅಟಾರ್ನಿ ಜನರಲ್ ಕಚೇರಿ ಹೇಳಿದೆ.

ಪಿಕಪ್ ಟ್ರಕ್ ಒಂದರಲ್ಲಿ ಶಿರಚ್ಛೇದ ಮಾಡಲ್ಪಟ್ಟ ಮೇಯರ್ ಅವರ ರುಂಡದ ಫೋಟೊ ಜಾಲತಾಣಗಳಲ್ಲಿ ವೈರಲ್ ಆದ ಬೆನ್ನಲ್ಲೇ ಸರ್ಕಾರ ಅಧಿಕೃತವಾಗಿ ಮೇಯರ್ ಅಲೆಜೆಂಡ್ರೋ ಅರ್ಕೋಸ್ ಹತ್ಯೆಯನ್ನು ದೃಢಪಡಿಸಿದೆ.

ಶಬರಿಮಲೆ ಯಾತ್ರೆಗೆ ಆನ್‌ಲೈನ್ ಬುಕಿಂಗ್ ಕಡ್ಡಾಯ



ತಿರುವಂತನಪುರಂ: ಇನ್ನು ಮುಂದೆ ಶಬರಿಮಲೆ ಯಾತ್ರೆ ಮಾಡುವವರು ಕಡ್ಡಾಯವಾಗಿ ಆನ್‌ಲೈನ್ ಬುಕಿಂಗ್ ಮಾಡಿಸಬೇಕಿದೆ. ಏಕೆಂದರೆ ಕೇರಳ ಸರ್ಕಾರ ಶಬರಿಮಲೆ ಮಂಡಲಂ–ಮಕರವಿಳಕ್ಕು ತೀರ್ಥಯಾತ್ರೆಗೆ ಈ ಬಾರಿ ಆನ್‌ಲೈನ್ ಬುಕಿಂಗ್ ಮೂಲಕ ಯಾತ್ರಾರ್ಥಿಗಳಿಗೆ ಅವಕಾಶ ನೀಡಲು ನಿರ್ಧರಿಸಿದೆ. ದಿನಕ್ಕೆ ಗರಿಷ್ಠ 80,000 ಭಕ್ತರಿಗೆ ಅವಕಾಶ ಕಲ್ಪಿಸುವ ಸೌಲಭ್ಯ ಕಲ್ಪಿಸಲು ತೀರ್ಮಾನಿಸಿದೆ. ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅಧ್ಯಕ್ಷತೆಯಲ್ಲಿ ನಡೆದ ಪರಿಶೀಲನಾ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಈ ಬಾರಿ ಶಬರಿಮಲೆಯಲ್ಲಿ ಸ್ಪಾಟ್ ಬುಕ್ಕಿಂಗ್ ಇರುವುದಿಲ್ಲ. ಯಾತ್ರಿಗಳು ಬುಕ್ ಮಾಡದೆ ಬಂದರೆ ನಾವು ಪರಿಶೀಲಿಸುತ್ತೇವೆ ಎಂದು ಅವರು ತಿಳಿಸಿದ್ದಾರೆ. ನಿಲಕ್ಕಲ್ ಮತ್ತು ಎರುಮೇಲಿಯಲ್ಲಿ ಹೆಚ್ಚುವರಿ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ ಎಂದು ದೇವಸ್ವಂ ಸಚಿವ ವಿಎನ್ ವಾಸವನ್ ಹೇಳಿದ್ದಾರೆ. ಬುಕಿಂಗ್ ಸಮಯದಲ್ಲಿ ಪ್ರಯಾಣದ ಮಾರ್ಗವನ್ನು ಆಯ್ಕೆ ಮಾಡುವ ಅವಕಾಶವನ್ನು ಒದಗಿಸಲಾಗುತ್ತದೆ. ಹೀಗಾಗಿ, ಯಾತ್ರಿಕರು ಕಡಿಮೆ ದಟ್ಟಣೆ ಇರುವ ಮಾರ್ಗವನ್ನು ಆಯ್ಕೆ ಮಾಡಬಹುದು.

ತಾಂತ್ರಿಕ ದೋಷದಿಂದ ಕ್ವಾಂಟಾಸ್ ಫ್ಲೈಟ್‌ನ ಟಿವಿಯಲ್ಲಿ ಅಶ್ಲೀಲ ವೀಡಿಯೋ ಪ್ರಸಾರ!



ಸಿಡ್ನಿ: ತಾಂತ್ರಿಕ ದೋಷದಿಂದ ಕ್ವಾಂಟಾಸ್ ಫ್ಲೈಟ್‌ನ ಎಲ್ಲಾ ಟಿವಿ ಪರದೆ ಮೇಲೆ ನೀಲಿಚಿತ್ರ ಪ್ರಸಾರವಾದ ಘಟನೆ ನಡೆದಿದೆ. ಸಿಡ್ನಿಯಿಂದ ಟೋಕಿಯೊಗೆ ಹೊರಟಿದ್ದ ಕ್ವಾಂಟಾಸ್ ವಿಮಾನದ ಎಲ್ಲಾ ಟಿವಿ ಪರದೆಯ ಮೇಲೆ ಅನಿರೀಕ್ಷಿತವಾಗಿ ಒಂದು ಗಂಟೆ ಕಾಲ ಹೀಗೆ ನೀಲಿ ಚಿತ್ರ ಪ್ರಸಾರವಾಗಿದೆ ಎಂದು ವರದಿಯಾಗಿದೆ. ಪ್ರಸಾರವಾಗುತ್ತಿದ್ದ ಚಿತ್ರವನ್ನು ಆಫ್ ಮಾಡಲು ಹಾಗೂ ಮುಂದೆ ಓಡಿಸಲು ಸಹ ಪ್ರಯಾಣಿಕರಿಗೆ ಸಾಧ್ಯವಾಗಿಲ್ಲ. ಈ ವೇಳೆ ಪ್ರಯಾಣಿಕರು ಆಘಾತಕ್ಕೊಳಗಾಗಿದ್ದಾರೆ. ವಿಮಾನದಲ್ಲಿನ ಟಿವಿ ವ್ಯವಸ್ಥೆಯಲ್ಲಿನ ತಾಂತ್ರಿಕ ಸಮಸ್ಯೆಗಳಿಂದಾಗಿ ಈ ರೀತಿಯಾಗಿದೆ. ಇದರಿಂದ ಮಕ್ಕಳು ಹಾಗೂ ಅನೇಕ ಜನ ಮುಜುಗರಕ್ಕೊಳಗಾಗಿದ್ದಾರೆ. ಈ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಪ್ರಯಾಣಿಕರೊಬ್ಬರು ಪೋಸ್ಟ್ ಹಾಕಿದ್ದು, ನಾನು ಸಿಡ್ನಿಯಿಂದ ಹನೆಡಾಗೆ ಕ್ವಾಂಟಾಸ್ ಫ್ಲೈಟ್ QF59ನಲ್ಲಿ ಹೊರಟಿದ್ದೆ. ವಿಮಾನದಲ್ಲಿನ ಮನರಂಜನಾ ವ್ಯವಸ್ಥೆಯು ಸ್ಥಗಿತಗೊಂಡಿತ್ತು. ಈ ವೇಳೆ ನಗ್ನತೆ ಹಾಗೂ ಸೆಕ್ಸ್‌ನಂತಹ ದೃಶ್ಯಗಳು ಪ್ರಸಾರವಾಗಿದೆ. ಇದನ್ನು ಸರಿಪಡಿಸಲು ವಿಮಾನದ ಸಿಬ್ಬಂದಿ ಒಂದು ಗಂಟೆಕಾಲ ಪರದಾಡಿದ್ದಾರೆ ಎಂದು ಬರೆದುಕೊಂಡಿದ್ದಾರೆ.

ಅಪ್ರಾಪ್ತ ಬಾಲಕಿಯ ಅಪಹರಿಸಿ ಆಸಿಡ್ ಎರಚಿದ ದುಷ್ಕರ್ಮಿಗಳು



ಅಮ್ರೋಹಾ: ಅಪ್ರಾಪ್ತ ಬಾಲಕಿಯನ್ನು ಮನೆಯಿಂದ ಅಪಹರಿಸಿದ ಇಬ್ಬರು ದುಷ್ಕರ್ಮಿಗಳು ಆಕೆಯ ಮೇಲೆ ಆಸಿಡ್ ಎರಚಿದ ಪರಿಣಾಮ ಬಾಲಕಿ ಸಾವನ್ನಪ್ಪಿರುವ ಘಟನೆ ಉತ್ತರ ಪ್ರದೇಶದ ಅಮ್ರೋಹಾದಲ್ಲಿ ಘಟನೆ ನಡೆದಿದೆ.

ಎಂಟನೇ ತರಗತಿ ವಿದ್ಯಾರ್ಥಿನಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾಳೆ ಎಂದು ಪೊಲೀಸರು ತಿಳಿಸಿದ್ದಾರೆ.

ಬೆಳಗಿನ ಜಾವ 3.30ರ ಸುಮಾರಿಗೆ ಮನೆಗೆ ನುಗ್ಗಿದ ಇಬ್ಬರು ದುಷ್ಕರ್ಮಿಗಳು ನನ್ನ ಹಾಗೂ ತಂದೆಯ ಮೇಲೆ ಹಲ್ಲೆ ನಡೆಸಿ, ನನ್ನ ಸಹೋದರಿಯ ಬಾಯಿ ಮುಚ್ಚಿ ಎಳೆದೊಯ್ದರು ಎಂದು ಆಕೆಯ ಸಹೋದರ ದಾಳಿಯ ಭಯಾನಕತೆಯನ್ನು ವಿವರಿಸಿದ್ದಾನೆ.

ಈ ಸಂಬಂಧ ಬಾಲಕಿಯ ಸಹೋದರ ರಹ್ರಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು, ಎಫ್‌ಐಆರ್ ದಾಖಲಿಸಲಾಗಿದೆ. ಅಮ್ರೋಹಾ ಗ್ರಾಮದ ಇಬ್ಬರು ಶಂಕಿತರನ್ನು ಬಂಧಿಸಿ, ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಗುವನ್ನು ಟ್ರಾಲಿ ಬ್ಯಾಗ್‌ನಲ್ಲಿರಿಸಿ 118 ಕಿ.ಮೀ ಪಾದಯಾತ್ರೆ



ರಾಜಸ್ಥಾನ: ಸುಮಾರು 118 ಕಿ.ಮೀ ದೂರದವರೆಗೆ ದಂಪತಿ ಮಗುವನ್ನು ಟ್ರಾಲಿ ಬ್ಯಾಗ್‌ನಲ್ಲಿರಿಸಿ ಪಾದಯಾತ್ರೆ ನಡೆಸಿದ್ದಾರೆ. ಮದುವೆಯಾಗಿ 12 ವರ್ಷದ ಬಳಿಕ ಮಗು ಜನಿಸಿದ ಹಿನ್ನೆಲೆಯಲ್ಲಿ ತಮ್ಮ ಹರಕೆ ತೀರಿಸಲು ಬರೋಬ್ಬರಿ 118 ಕಿ.ಮೀ ದೂರದ ದೇವಾಲಯಕ್ಕೆ ಮಗುವನ್ನು ಟ್ರಾಲಿ ಬ್ಯಾಗ್‌ನಲ್ಲಿರಿಸಿದ ದಂಪತಿ ಪಾದಯಾತ್ರೆ ನಡೆಸಿದ್ದಾರೆ. ಈ ಘಟನೆ ನಡೆದಿದ್ದು ರಾಜಸ್ಥಾನದ ಬಿಲ್ವಾರಾ–ಕೋಟಾ ಹೆದ್ದಾರಿಯಲ್ಲಿ. ಟ್ರಾಲಿ ಬ್ಯಾಗ್‌ನಲ್ಲಿ ಮಗುವನ್ನು ನೋಡಿದ ಜನರು ಆಶ್ಚರ್ಯಚಕಿತರಾದರು.

ಮಾಹಿತಿ ಪ್ರಕಾರ ಜಿಲ್ಲೆಯ ಬಾಗೂರು ಬಳಿ ವಾಸವಿದ್ದ ದಂಪತಿ ಹನ್ನೆರಡು ವರ್ಷಗಳ ಹಿಂದೆ ಮದುವೆಯಾಗಿದ್ದರು. ಅವರಿಗೆ ಮಗುವಾಗಿರಲಿಲ್ಲ. ಜೋಗನಿಯ ಮಾತೆಗೆ ಹರಕೆ ಕಟ್ಟಿಕೊಂಡಿದ್ದರು. ಮಗು ಜನಿಸಿತು ಮತ್ತು ಅವರ ಆಸೆ ಈಡೇರಿದ ನಂತರ, ಅವರು ತಾಯಿಯ ಆಶೀರ್ವಾದ ಪಡೆಯಲು ನವರಾತ್ರಿಯಲ್ಲಿ ಕಾಲ್ನಡಿಗೆ ಮೂಲಕ ಹೋಗಲು ನಿರ್ಧರಿಸಿದರು. ಹಾಗಾಗಿ ಮಗುವನ್ನು ಟ್ರಾಲಿಯಲ್ಲಿಟ್ಟು ಹೋಗಲು ನಿರ್ಧರಿಸಿ, ಮಾತೆಯ ದರ್ಶನ ಪಡೆದು ಹಿಂದಿರುಗಿದ್ದಾರೆ.

ಮೈಸೂರು ಮಿತ್ರ ಬುಧವಾರ 9 ಅಕ್ಟೋಬರ್ 2024

ಮಹಿಳಾ ದಸರಾದಲ್ಲಿ ಗ್ರಾಮೀಣ ಮಹಿಳೆಯರಿಗೆ ಪ್ರಾಶಸ್ತ್ಯ ಸಿಗಲಿ

ವಿಧಾನ ಪರಿಷತ್ ಮಾಜಿ ಸದಸ್ಯೆ ಶಾಂತೆಯಂಡ ವೀಣಾ ಅಚ್ಚಯ್ಯ ಆಶಯ



ಮಡಿಕೇರಿ ಗಾಂಧಿ ಮೈದಾನದಲ್ಲಿ ನಡೆದ ಮಹಿಳಾ ದಸರಾವನ್ನು ದಿವ್ಯ ಮಂತರ್‌ಗೌಡ ಉದ್ಘಾಟಿಸಿದರು.



ಬೆಂಗಳೂರಿನ ಕಲಾವಿದೆ ಹೇಮಾ ವಿನಾಯಕ್ ಚಾಮುಂಡೇಶ್ವರಿ ಆಕರ್ಷಕ ಕಲಾಕೃತಿ ರಚಿಸಿದರು.

ಮಡಿಕೇರಿ, ಅ.8–ಮಹಿಳಾ ದಸರಾ ಉತ್ಸವದಲ್ಲಿ ಗ್ರಾಮೀಣ ಭಾಗದ ಮಹಿಳೆಯರಿಗೆ ಪ್ರಾಶಸ್ತ್ಯ ನೀಡುವ ಹಾಗೂ ಗುರುತಿಸುವ ಕಾರ್ಯ ನಡೆಯುವಂತಾಗಲಿ ಎಂದು ವಿಧಾನ ಪರಿಷತ್ ಮಾಜಿ ಸದಸ್ಯೆ ಶಾಂತೆಯಂಡ ವೀಣಾ ಅಚ್ಚಯ್ಯ ಆಶಯ ವ್ಯಕ್ತಪಡಿಸಿದರು.

ನಗರದ ಗಾಂಧಿ ಮೈದಾನದ ಕಲಾ ಸಂಭ್ರಮ ವೇದಿಕೆಯಲ್ಲಿ ನಡೆದ ಮಹಿಳಾ ದಸರಾದಲ್ಲಿ ಮಾತನಾಡಿದ ಅವರು, ಮುಂದಿನ ಮಹಿಳಾ ದಸರಾದಲ್ಲಿ ಗ್ರಾಮೀಣ ಮಹಿಳೆಯರ ಪಾಲ್ಗೊಳ್ಳುವಿಕೆಗೆ ಹೆಚ್ಚಿನ ಆದ್ಯತೆ ನೀಡುವುದರೊಂದಿಗೆ ಪ್ರತಿಭಾವಂತ ಮಹಿಳೆಯರನ್ನು ಗೌರವಿಸಬೇಕು. ಪ್ರಸ್ತುತ ಸಮಾಜದ ಪ್ರತಿಯೊಂದು ಕ್ಷೇತ್ರಗಳಲ್ಲೂ ಮಹಿಳೆಯರು ಮುಂಚೂಣಿಯಲ್ಲಿದ್ದಾರೆ. ರಾಜ್ಯ ಸರ್ಕಾರ ಮಹಿಳೆಯರ ಅಭಿವೃದ್ಧಿಗೆ ಸಾಕಷ್ಟು ಯೋಜನೆ ರೂಪಿಸಿದ್ದು, ಇವುಗಳು ಬಡ ಮಹಿಳೆಯರ ಸ್ವಾವಲಂಬಿ ಬದುಕಿಗೆ ಅವಕಾಶ ಕಲ್ಪಿಸಿದೆ ಎಂದು ತಿಳಿಸಿದರು.

ಸಂಕುಚಿತ ಭಾವನೆ ಜಾಗೃತಿದೆ: ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷೆ ಕೆ.ಪಿ.ಚಂದ್ರಕಲಾ ಮಾತನಾಡಿ, ಎಲ್ಲಾ ರಂಗಗಳಲ್ಲೂ ಮಹಿಳೆಯರು ಮುಂದೆ ಇದ್ದರೂ, ಎಲ್ಲೋ ಒಂದು ಕಡೆ ಸಂಕುಚಿತ ಭಾವನೆ ಮಹಿಳೆಯರನ್ನು ಜಗ್ಗಿಸುತ್ತಿದೆ ಎಂದರು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕ ನಟರಾಜ್ ಮಾತನಾಡಿ, ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರು ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಮಹಿಳೆಯರ ಅಭ್ಯುದಯಕ್ಕಾಗಿ ಹತ್ತು ಹಲವು ಯೋಜನೆಗಳನ್ನು ಇಲಾಖೆ ಮೂಲಕ ಸರ್ಕಾರ ಜಾರಿಗೊಳಿಸಿದೆ. ಗೃಹಲಕ್ಷ್ಮಿ ಯೋಜನೆಯಡಿ ಜಿಲ್ಲೆಯಲ್ಲಿ ಕುಟುಂಬದ ಯಜಮಾನಿಗೆ ಕಳೆದ 10 ತಿಂಗಳ ಅವಧಿಯಲ್ಲಿ 241.55 ಕೋಟಿ ರೂ. ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ಉದ್ಘಾಟನೆ: ಮಹಿಳಾ ದಸರಾ ಉತ್ಸವವನ್ನು ದಿವ್ಯ ಮಂತರ್‌ಗೌಡ ಉದ್ಘಾಟಿಸಿದರು. ನಗರಸಭಾ ಮಾಜಿ ಅಧ್ಯಕ್ಷೆ ಅನಿತಾ ಪೂವಯ್ಯ, ಅಪರ ಜಿಲ್ಲಾಧಿಕಾರಿ ಐಶ್ವರ್ಯ, ನಗರಸಭಾ ಮಾಜಿ ಅಧ್ಯಕ್ಷೆ ಜುಲೇಕಾಬಿ, ಮುಡಾ ಮಾಜಿ ಅಧ್ಯಕ್ಷೆ ಸುರಯ್ಯಾ ಅಬ್ರಾರ್, ನಗರಸಭೆ ಮಾಜಿ ಉಪಾಧ್ಯಕ್ಷರಾದ ಸವಿತಾ ರಾಕೇಶ್, ಲೀಲಾ ಶೇಷಮ್ಮ, ಸದಸ್ಯರು, ದಸರಾ ಸಮಿತಿ ಖಜಾಂಚಿ ಅರುಣ್ ಶೆಟ್ಟಿ, ಮಹಿಳಾ ದಸರಾ ಸಂಚಾಲಕ ಕುಡೆಕಲ್ ಸವಿತಾ ಹಲ ಗಣ್ಯರು ಪಾಲ್ಗೊಂಡಿದ್ದರು.

ರೂಪು ತಳೆದ ದೇವಿ ಕಲಾಕೃತಿ: ಬೆಂಗಳೂರಿನ ಕಲಾವಿದೆ ಹೇಮಾ ವಿನಾಯಕ್ ದೇವಿಯನ್ನು ಸ್ತುತಿಸುವ ಹಾಡಿಗೆ ತಕ್ಕಂತೆ ತಾಯಿ ಚಾಮುಂಡೇಶ್ವರಿ ಆಕರ್ಷಕ ಕಲಾಕೃತಿ ರಚಿಸುವ ಮೂಲಕ ಪ್ರೇಕ್ಷಕರ ಮನಗೆದ್ದರು. ಮಹಿಳಾ ದಸರಾ ಅಂಗವಾಗಿ ನಡೆದ ಮೆಹಂದಿ ಹಾಕುವುದು, ಭಾರತೀಯ ಸಾಂಪ್ರದಾಯಿಕ ಉಡುಗೆ ಸ್ಪರ್ಧೆ, ಕೇಶವಿನ್ಯಾಸ, ಗಾರ್ಭ ನೃತ್ಯ, ಸೀರೆಗೆ ನಿಖರ ಬೆಲೆ ಹೇಳುವುದು ವಿವಿಧ ಸ್ಪರ್ಧೆ ಗಮನ ಸೆಳೆದವು.

'ಮಹಿಳಾ ಪೊಲೀಸ್' ಬಂದೋಬಸ್ತ್

ಗಾಂಧಿ ಮೈದಾನದಲ್ಲಿ ನಡೆದ ಮಹಿಳಾ ದಸರಾ ಸಮಾರಂಭದಲ್ಲಿ ಇದೇ ಮೊಟ್ಟ ಮೊದಲ ಬಾರಿಗೆ ಬಂದೋಬಸ್ತ್ ಅನ್ನು ಮಹಿಳಾ ಪೊಲೀಸ್ ಸಿಬ್ಬಂದಿಗಳೇ ನಿರ್ವಹಿಸುವ ಮೂಲಕ ಭೇಷ್ ಅನಿಸಿಕೊಂಡರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಸೂಚನೆಯಂತೆ ಮಹಿಳಾ ದಸರಾದಲ್ಲಿ ತಲಾ ಒಬ್ಬರು ಎಸ್‌ಐ ಮತ್ತು ಎಎಸ್‌ಐ, 5 ಹೆಡ್‌ಕಾನ್‌ಸ್ಟೇಬಲ್, 12 ಕಾನ್‌ಸ್ಟೇಬಲ್, 6 ಗೃಹ ರಕ್ಷಕ ದಳ ಸಿಬ್ಬಂದಿ ಸೇರಿದಂತೆ ಒಟ್ಟು 25 ಮಹಿಳಾ ಸಿಬ್ಬಂದಿ ಬಂದೋಬಸ್ತ್ ಕಾರ್ಯನಿರ್ವಹಿಸಿದರು.

ಮಡಿಕೇರಿ, ಗೋಣಿಕೊಪ್ಪ ದಸರಾ ಉತ್ಸವ ಭದ್ರತೆಗೆ

2 ಸಾವಿರ ಪೊಲೀಸರ ನಿಯೋಜನೆ



ಮಡಿಕೇರಿ, ಅ.8– ಐತಿಹಾಸಿಕ ಮಡಿಕೇರಿ ಮತ್ತು ಗೋಣಿಕೊಪ್ಪ ದಸರಾ ಉತ್ಸವ ಭದ್ರತೆಗೆ 2 ಸಾವಿರ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ತಿಳಿಸಿದರು.

ನಗರದ ಜಿಲ್ಲಾ ಪೊಲೀಸ್ ಆಡಳಿತ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ದಸರಾವನ್ನು ಶಾಂತಿಯುತವಾಗಿ ಆಚರಿಸಲುವಾಗಿ ಇಬ್ಬರು ಎಎಸ್‌ಪಿ, 7 ಡಿವೈಎಸ್‌ಪಿ, 27 ವೃತ್ತ ನಿರೀಕ್ಷಕರು, 80 ಪಿಎಸ್‌ಐ, 126 ಎಎಸ್‌ಐ, 975 ಪೊಲೀಸ್ ಸಿಬ್ಬಂದಿ, 360 ಗೃಹ ರಕ್ಷಕ ದಳದ ಸಿಬ್ಬಂದಿ ಸೇರಿದಂತೆ 16 ಡಿಎಆರ್, 8 ಕೆಎಸ್‌ಆರ್‌ಪಿ ತುಕಡಿ ನಿಯೋಜಿಸಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ ಎಂದರು.

8 ಜಂಬೋ ತಂಡ ನಿಯೋಜನೆ: ಮಡಿಕೇರಿ ದಸರಾ ಉತ್ಸವದ ಶೋಭಾಯಾತ್ರೆ ಸಂದರ್ಭ ಲಕ್ಷಾಂತರ ಜನರು ನಗರಕ್ಕೆ ಆಗಮಿಸಲಿದ್ದು, ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆಗೆ ಆದ್ಯತೆ ನೀಡಲಾಗುವುದು. ಜನಸಂದಣಿ ಕಡೆಗಳಲ್ಲಿ ಹೆಣ್ಣು ಮಕ್ಕಳನ್ನು ಚುಡಾಯಿಸುವ, ಅಸಭ್ಯವಾಗಿ ವರ್ತಿಸುವ, ವಾಹನಗಳ ಸಂಚಾರಕ್ಕೆ ತೊಡಕು ಉಂಟು ಮಾಡುವ ಕಿಡಿಗೇಡಿಗಳ ಬಗ್ಗೆ ನಿಗಾ ಇಡಲು ಒಬ್ಬರು ಎಸ್‌ಐ ನೇತೃತ್ವದ 15 ಸಿಬ್ಬಂದಿ ಒಳಗೊಂಡ 8 ಜಂಬೋ ತಂಡಗಳನ್ನು ರಚಿಸಲಾಗಿದೆ. ಈ ತಂಡಗಳು ಕಿಡಿಗೇಡಿಗಳ ಬಗ್ಗೆ ನಿಗಾ ವಹಿಸಿ ಅವರ ವಿರುದ್ಧ ಪ್ರಕರಣ ದಾಖಲಿಸಲಿವೆ ಎಂದು ಹೇಳಿದರು.

ಚೀತಾ ಪಡೆ–ಡ್ರೋನ್ ನಿಗಾ: ಉತ್ಸವ ಸಂದರ್ಭ ನಗರ ದಂಚಿನ ನಿರ್ಜನ ಪ್ರದೇಶಗಳಲ್ಲಿ ಎಸಗುವ ದುಷ್ಕೃತ್ಯಗಳನ್ನು ತಡೆಗಟ್ಟಲು 10 ಚೀತಾ ಬೈಕ್‌ಗಳನ್ನು ಬಳಸಲಾಗುವುದು. ಅಲ್ಲದೆ, ಡ್ರೋನ್ ಮೂಲಕ ನಗರ ವ್ಯಾಪ್ತಿಯ ಚಟುವಟಿಕೆಗಳ ಮೇಲೆ ತೀವ್ರ ನಿಗಾವಹಿಸಲಾಗುವುದು. ದಸರಾ ಶೋಭಾಯಾತ್ರೆಯಲ್ಲಿ ದಶಮಂಟಪಗಳು ಸಾಗುವ ಹಾದಿಯಲ್ಲಿ ಈಗಾಗಲೇ ಸುಮಾರು 800 ಸಿಸಿ ಕ್ಯಾಮರಾ ಅಳವಡಿಸಲಾಗಿದೆ ಎಂದು ಎಸ್‌ಪಿ ಕೆ.ರಾಮರಾಜನ್ ತಿಳಿಸಿದರು.

ಸ್ಕೈ ಸೆಂಟ್ರಿ–ನೈಟ್ ವಿಷನ್ ಕ್ಯಾಮರಾ: ನಗರದ ಆಯಕಟ್ಟಿನ ಪ್ರದೇಶಗಳಲ್ಲಿ ಸ್ಕೈ ಸೆಂಟ್ರಿ ನಿಯೋಜಿಸಿ ಅಕ್ರಮ ಚಟುವಟಿಕೆಗಳ ಬಗ್ಗೆ ನಿಗಾವಹಿಸಲಾಗುವುದು. ಇದಕ್ಕಾಗಿ ನೈಟ್ ವಿಷನ್ ಬೈನಾಕ್ಯುಲರ್ ಮತ್ತು ಕ್ಯಾಮರಾಗಳನ್ನು ಬಳಸಲಾಗುವುದು. ನಗರ ವ್ಯಾಪ್ತಿಯ ಹಳೆಯ ಕಟ್ಟಡಗಳ ಬಗ್ಗೆ ಅದರ ಮಾಲೀಕರೆ ನಿಗಾವಹಿಸಿ, ಅಲ್ಲಿ ಯಾವುದೇ ವ್ಯಕ್ತಿಗಳು ಬರಲು ಅವಕಾಶ ನೀಡದಂತೆ ಮನವಿ ಮಾಡಿದರು. ಮಡಿಕೇರಿ ಗಾಂಧಿ ಮೈದಾನ, ಜನರಲ್ ತಿಮ್ಮಯ್ಯ ವೃತ್ತ, ನಗರ ಪೊಲೀಸ್ ಠಾಣೆ, ಹಳೇ ಖಾಸಗಿ ಬಸ್ ನಿಲ್ದಾಣಗಳಲ್ಲಿ ಒಟ್ಟು 4 ಸಹಾಯವಾಣಿ ಕೇಂದ್ರ ತೆರೆಯಲಾಗುವುದು ಎಂದು ಮಾಹಿತಿ ನೀಡಿದರು.

ವಾಹನ ಪ್ರವೇಶ ನಿರ್ಬಂಧ: ಮಡಿಕೇರಿ ದಸರಾ ಶೋಭಾಯಾತ್ರೆ ನಡೆಯುವ ಅ.12ರಂದು ಮಧ್ಯಾಹ್ನ 3 ಗಂಟೆಯಿಂದ ಅ.13ರ ಬೆಳಗೆ 10 ಗಂಟೆ ವರೆಗೆ ಮಡಿಕೇರಿ ನಗರದ ಒಳಗೆ ವಾಹನಗಳ ಪ್ರವೇಶವನ್ನು ಸಂಪೂರ್ಣ ನಿಷೇಧಿಸಲಾಗಿದೆ. ಮಂಗಳೂರು ಕಡೆಯಿಂದ ಬರುವವರು ತಾಳತ್‌ಮನೆ ಬಳಿ, ವಿರಾಜಪೇಟೆ ಕಡೆಯಿಂದ ಬರುವವರಿಗೆ ಮೇಕೇರಿಯವರೆಗೆ ಬರಲು ಮಾತ್ರ ಅವಕಾಶ ಕಲ್ಪಿಸಲಾಗಿದೆ. ಈ ಸಂದರ್ಭ ತಾಳತ್‌ಮನೆ ಮತ್ತು ಮೇಕೇರಿಯಿಂದ ಜನರಲ್ ತಿಮ್ಮಯ್ಯ ವೃತ್ತದವರೆಗೆ ಬರಲು ಆಟೋಗಳಿಗೆ ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಮಾನವೀಯತೆಗಿಂತ ಮಿಗಿಲಾದ ನೈತಿಕತೆ ಬೇರೊಂದಿಲ್ಲ



ಅರಮೇರಿ ಕಳಂಚೇರಿ ಶ್ರೀಮಠದಲ್ಲಿ ನಡೆದ ಹೊಂಬೆಳಕು ಕಾರ್ಯಕ್ರಮದಲ್ಲಿ ಲುಬ್ನಾ ಝುಕಿಯಾ ಮಾತನಾಡಿದರು.

ವಿರಾಜಪೇಟೆ, ಅ.8–ಮಾನವೀಯತೆಗಿಂತ ಮಿಗಿಲಾದ ನೈತಿಕತೆ ಬೇರೊಂದಿಲ್ಲ. ಆದ್ದರಿಂದ ಜೀವನದಲ್ಲಿ ಮತ್ತೊಬ್ಬರಿಗೆ ಕೆಡುಕು ಮಾಡಬಾರದು ಎಂದು ಮಂಗಳೂರಿನ ಸಾಮಾಜಿಕ ಕಾರ್ಯಕರ್ತೆ ಲುಬ್ನಾ ಝುಕಿಯಾ ಹೇಳಿದರು.

ಸಮೀಪದ ಅರಮೇರಿ ಕಳಂಚೇರಿ ಶ್ರೀಮಠದ ಲಿಂಗರಾಜೇಂದ್ರ ಭವನದ ಸಭಾಂಗಣದಲ್ಲಿ ನಡೆದ ಹೊಂಬೆಳಕು ಕಾರ್ಯಕ್ರಮದ 224ನೇ ಮಾಸಿಕ ತತ್ತ್ವ ಚಿಂತನ ಗೋಷ್ಠಿಯಲ್ಲಿ 'ನೈತಿಕತೆಯೇ ಸ್ವಾತಂತ್ರ್ಯದ ಭರವಸೆ' ಕುರಿತು ಉಪನ್ಯಾಸ ನೀಡಿದ ಅವರು, ಸಮಾಜದಲ್ಲಿ ಅನೈತಿಕತೆಗೆ ಕಾರಣವಾಗುವ ಎಲ್ಲಾ ಹಾದಿಗಳಿಗೆ ಕಡಿವಾಣ ಹಾಕಲು ಕಠಿಣ ಕಾನೂನು ರೂಪುಗೊಳ್ಳಬೇಕು. ಮಾನವ ನಿರ್ಮಿತ ಕಾನೂನುಗಳಿಗಿಂತ ದೇವ ನಿರ್ಮಿತ ಕಾನೂನು ಕೆಡುಕುಗಳನ್ನು ತಡೆಯುತ್ತವೆ ಎಂದರು.

ಮನುಷ್ಯ ನಾನೊಬ್ಬ ಪ್ರಜೆ ಎಂಬುದನ್ನು ಮರೆತು ಬಿಟ್ಟಿರುವುದೇ ಕೆಡುಕುಗಳಿಗೆ ಕಾರಣವಾಗಿದೆ. ಇಂದು ಜಗತ್ತು ನೈತಿಕ ದಿವಾಳಿತನ ಎದುರಿಸುತ್ತಿದೆ. ಆಧುನಿಕತೆ ಪ್ರಗತಿಪರ ಎಂಬ ವಾದದೊಂದಿಗೆ ನೈತಿಕತೆಯು ಮೀರಲಾಗುತ್ತಿದೆ. ಸಮಾಜ ದಲ್ಲಿ ಇತರರ ಸ್ವಾತಂತ್ರ್ಯಕ್ಕೆ ಧಕ್ಕೆಯಾಗದಂತೆ ನಡೆದುಕೊಳ್ಳಬೇಕು ಎಂದು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ ಬೆಳಗಾವಿಯ ಕಿತ್ತೂರು ರಾಣಿ ಚೆನ್ನಮ್ಮ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯೆ ಡಾ.ಹೆಚ್.ಎಂ.ಕಾವೇರಿ, ನೈತಿಕತೆ ಹಾಗೂ ಮೌಲ್ಯಗಳು ಜಾತಿ ಮತ್ತು ಲಿಂಗಕ್ಕೆ ಸೀಮಿತವಲ್ಲ. ಸ್ವಾತಂತ್ರ್ಯ ಎಂಬುದು ಸ್ವೇಚ್ಛಾಚಾರವಲ್ಲ, ಇತರರ ಸ್ವಾತಂತ್ರ್ಯಕ್ಕೆ ಧಕ್ಕೆ ಬಾರದಂತೆ ಅವರವರ ಹಕ್ಕುಗಳನ್ನು ನಿಭಾಯಿಸಿದಲ್ಲಿ ಸಮಾಜ ನೆಮ್ಮದಿಯಿಂದ ಕೂಡಿರುತ್ತದೆ. ಹೆಣ್ಣು ಮಕ್ಕಳಂತೆ ಗಂಡು ಮಕ್ಕಳಿಗೂ ನೈತಿಕ ಶಿಕ್ಷಣದ ಅಗತ್ಯವಿದೆ ಎಂದರು.

ಸಾನಿಧ್ಯ ವಹಿಸಿದ್ದ ಶ್ರೀ ಶಾಂತಮಲ್ಲಿಕಾರ್ಜುನಸ್ವಾಮೀಜಿ ಮಾತನಾಡಿ, ಕೆಡುಕುಗಳಿಗೆ ಕಡಿವಾಣ ಹಾಕುವ ಧರ್ಮ ಬೋಧನೆ ಇಂದಿನ ಪ್ರಗತಿಪರರು ಎನಿಸಿಕೊಂಡವರಿಗೆ ರುಚಿಸುವುದಿಲ್ಲ. ಧರ್ಮವನ್ನು ಒಪ್ಪಿಕೊಳ್ಳುವುದರಿಂದ ಎಲ್ಲಾ ಸ್ವಾತಂತ್ರ್ಯಗಳಿಗೂ ಕುಂದು ಉಂಟಾಗುತ್ತದೆ ಎಂದು ಭಾವಿಸುವರಿದ್ದಾರೆ. ಆದರೆ, ಧರ್ಮ ಕೈಬಿಟ್ಟಿರುವುದರಿಂದ ಜೀವನದಲ್ಲಿ ಸಂಬಂಧಗಳು ಕಲುಷಿತವಾಗುತ್ತಿದೆ. ಕಲೆ ಮತ್ತು ಪ್ರತಿಭೆಯ ಪ್ರತಿರೂಪಗಳಾಗಿದ್ದ ಧಾರಾವಾಹಿಗಳು ಇಂದು ಕುಟುಂಬ ಕಲಹಗಳಿಗೆ ಪುಷ್ಠಿ ನೀಡುತ್ತಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಶಫೀನಾ ಮುಹಮ್ಮದ್, ಮುಹೀನಾ ಅಬೂಬಕರ್, ಸಮೀರಾ ರಾಝಿಕ್ ಮತ್ತಿತರರು ಇದ್ದರು.

ವೇಶ್ಯಾವಾಟಿಕೆ ನಡೆಸುತ್ತಿದ್ದ ಮೂವರ ಬಂಧನ

ಮಡಿಕೇರಿ, ಅ.8–ಸೋಮವಾರಪೇಟೆ ಕರ್ಕಳ್ಳಿಯ ಬಾಡಿಗೆ ಮನೆಯೊಂದರಲ್ಲಿ ವೇಶ್ಯಾವಾಟಿಕೆ ನಡೆಸುತ್ತಿದ್ದ ಮೂವರನ್ನು ಸೋಮವಾರಪೇಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಅಲ್ಲಿನ ನಿವಾಸಿಗಳಾದ ಜಾನಕಿ (40), ರಾಜೇಶ್ (45) ಮತ್ತು ಪ್ರಕರಣದ ಪ್ರಮುಖ ಆರೋಪಿ ಮಡಿಕೇರಿಯ ಕರ್ಪಸಾಮಿ(45) ಬಂಧಿತರು.

ಕರ್ಪಸಾಮಿ ಹಿಂದೆ ಬಸ್ ಹೊಂದಿದ್ದು, ಬಸ್‌ನಲ್ಲಿ ನಷ್ಟವಾದ ಬಳಿಕ ವೇಶ್ಯಾವಾಟಿಕೆ ನಡೆಸುತ್ತಿದ್ದರು. ಈತನ ವಿರುದ್ಧ ಹಿಂದೆ ಎರಡು ವೇಶ್ಯಾವಾಟಿಕೆ ಪ್ರಕರಣ ದಾಖಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ತಿಳಿಸಿದ್ದಾರೆ.

ಸುಂಟಿಕೊಪ್ಪದಲ್ಲಿ ಸುಟ್ಟು ಕರಕಲಾದ ಅಪರಿಚಿತ ಶವ ಪತ್ತೆ



ಕಾಫಿ ತೋಟದಲ್ಲಿ ಅಪರಿಚಿತ ಶವ ಸುಟ್ಟು ಹಾಕಿದ ಸ್ಥಳವನ್ನು ಎಸ್‌ಪಿ ಕೆ.ರಾಮರಾಜನ್ ಪರಿಶೀಲಿಸಿದರು.

ಘಟನಾ ಸ್ಥಳದಲ್ಲಿ ಸಾಕಷ್ಟು ಸುಳಿವು ಪತ್ತೆಯಾಗಿವೆ. ಕೊಲೆ ಮಾಡಿದ ಬಳಿಕ ಮೃತದೇಹವನ್ನು ಸುಟ್ಟು ಹಾಕಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ವಿಧಿವಿಜ್ಞಾನ ತಾಂತ್ರಿಕ ಸಿಬ್ಬಂದಿ ತಂಡ ಕೆಲವು ಸಾಕ್ಷ್ಯಗಳನ್ನು ಸ್ಥಳದಿಂದ ಸಂಗ್ರಹಿಸಿದೆ. ಈ ಪ್ರಕರಣ ಸವಾಲಿನಂತೆ ಕಂಡು ಬರುತ್ತಿದೆ ಯಾದರೂ ನುರಿತ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ತನಿಖೆ ನಡೆಸುತ್ತಿದ್ದು, ಶೀಘ್ರದಲ್ಲೇ ಆರೋಪಿಗಳನ್ನು ಪತ್ತೆಹಚ್ಚಿ ಬಂಧಿಸಲಾಗುವುದು.

-ಕೆ.ರಾಮರಾಜನ್, ಕೊಡಗು ಎಸ್‌ಪಿ

ಸುಂಟಿಕೊಪ್ಪ, ಅ.8–ಸಮೀಪದ ಪನ್ಯ ತೋಟದ ಮಾರಿಗುಡಿ ಬಳಿಯ ಕಾಫಿ ತೋಟದಲ್ಲಿ ಅಪರಿಚಿತ ವ್ಯಕ್ತಿಯ ಶವ ಸುಟ್ಟು ಕರಕಲಾದ ಸ್ಥಿತಿಯಲ್ಲಿ ಮಂಗಳವಾರ ಪತ್ತೆಯಾಗಿದೆ.

ಪನ್ಯದ ಸಂದೇಶ್ ಅವರಿಗೆ ಸೇರಿದ ಕಾಫಿ ತೋಟದಲ್ಲಿ ಸುಮಾರು 45 ರಿಂದ 50 ವಯಸ್ಸಿನ ಪುರುಷನ ಶವ ಕಳೆದ 5 ದಿನಗಳ ಹಿಂದೆಯೇ ಸುಟ್ಟು ಹಾಕಲಾಗಿದೆ. 1 ಕಾಲು ಹಾಗೂ ಇತರೆ ಅಂಗಾಂಗಗಳು ಮಾತ್ರ ಪತ್ತೆಯಾಗಿದೆ. ತೋಟದ ಮಾಲೀಕರು ಪೊಲೀಸರಿಗೆ ಮಾಹಿತಿ ನೀಡಿದ ಮೇರೆಗೆ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಡಿವೈಎಸ್‌ಪಿ ಗಂಗಾಧರಪ್ಪ, ಕುಶಾಲನಗರ ಗ್ರಾಮಾಂತರ ವೃತ್ತ ನಿರೀಕ್ಷಕ ರಾಜೇಶ್ ಕೋಟ್ಯಾನ್, ಸುಂಟಿಕೊಪ್ಪ ಪೊಲೀಸ್ ಠಾಣಾಧಿಕಾರಿ ಚಂದ್ರಶೇಖರ್ ಹಾಗೂ ಸಿಬ್ಬಂದಿ ತೆರಳಿ ಪರಿಶೀಲನೆ ನಡೆಸಿದರು.

ಜೂ.ಪುನೀತ್ ರಾಜ್‌ಕುಮಾರ್ ಮೋಡಿ

ಮಿಮಿಕ್ರಿ ಗೋಪಿ ಹಾಸ್ಯಕ್ಕೆ ಜನರ ಶಿಳ್ಳೆ, ಕೇಕೆ







ಚಾಮರಾಜನಗರ, ಅ.8–ಚಾಮರಾಜನಗರ ದಸರಾ ಎರಡನೇ ದಿನದ ಕಾರ್ಯಕ್ರಮದ ವೇದಿಕೆಗೆ ಜೂನಿಯರ್ ಪುನೀತ್ ರಾಜ್‌ಕುಮಾರ್ ಚಂದ್ರಮೌಳಿ ಆಗಮಿಸುತ್ತಿದಂತೆ ನೆರೆದಿದ್ದ ಪ್ರೇಕ್ಷಕರೆಲ್ಲಾ ಶಿಳ್ಳೆ ಹಾಕಿ ಜೋರಾಗಿ ಕಿರುಚುವ ಜೊತೆಗೆ ಚಪ್ಪಾಳೆ ಮೂಲಕ ಸ್ವಾಗತಿಸಿದರು.

ನಂತರ ಚಂದ್ರಮೌಳಿ ಪುನೀತ್ ಅಭಿನಯದ ಕೆಲ ಗೀತೆಗಳಿಗೆ ಹೆಜ್ಜೆ ಹಾಕಿ, ಪುನೀತ್ ಶೈಲಿಯಲ್ಲಿ ಚಿತ್ರಗಳ ಡೈಲಾಗ್ ಹೊಡೆದರು. ಇನ್ನೂ ಹಾಸ್ಯ ಕಲಾವಿದ ಮಿಮಿಕ್ರಿ ಗೋಪಿ, ಹಾಸ್ಯ ನಟ ದಿ. ನರಸಿಂಹರಾಜು, ಸಿಎಂ ಸಿದ್ದರಾಮಯ್ಯ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಮಾಜಿ ಶಾಸಕ ವಾಟಾಳ್ ನಾಗರಾಜ್ ಹಾಗೂ ರೆಬಲ್ ಸ್ಟಾರ್ ಅಂಬರೀಶ್ ಅವರ ಧ್ವನಿ ಅನುಕರಿಸಿ ಶುಭ ಹಾರೈಸಿದರು.

ದಿ.ಶಂಕರ್‌ನಾಗ್ ಧ್ವನಿ ಮೂಲಕ ಅವರ ಪ್ರತಿಮೆ ಇಲ್ಲದಿರುವುದಕ್ಕೆ ಬೇಸರ ವ್ಯಕ್ತಪಡಿಸದಂತೆ ತಿಳಿಸಿದರು. ವರನಟ ಡಾ.ರಾಜ್ ಕುಮಾರ್ ಧ್ವನಿಯಲ್ಲಿ ಅನ್ನದ ಮಹತ್ವ, ತವರು ಜಿಲ್ಲೆಯ ಸಂಬಂಧ ಮೆಲುಕು ಹಾಕುವಂತೆ ಮಾಡಿದರು. ಸಚಿವ ಜಮೀರ್ ಅಹಮ್ಮದ್ ಶೈಲಿಯಲ್ಲಿ ಮೊಬೈಲ್ ಬಳಕೆ ಅರಿವು ಮೂಡಿಸಿದರು. ಇದೇ ವೇಳೆ ಸ್ಯಾಂಡ್ ಹಾರ್ಟ್ ಕಲಾವಿದ ರಂಗಾರೇಣು, ರೈತ ಗೀತೆಗೆ ಮರಳಿನ ಮೇಲೆ ರಚಿಸಿದ ರೈತ ಆತ್ಮಹತ್ಯೆ, ರೈತನ ಕಣ್ಣೀರಿನ ಚಿತ್ರಣ, ದೇಶದ ಬೆನ್ನೆಲುಬು ರೈತ ಎಂಬ ಸಂದೇಶ ಸಾರುವ ಚಿತ್ರಣ ಹಾಗೂ ಮಲೆಮಹದೇಶ್ವರ ಸ್ವಾಮಿಯ ಚಿತ್ರಣ ಎಲ್ಲರ ಮನಸೂರೆಗೊಂಡಿತು.

ಗಮನ ಸೆಳೆದ ದಸರಾ ಮ್ಯಾರಥಾನ್

ಹೆಚ್ಚಾಗಿ ಭಾಗವಹಿಸಿದ್ದ ಶಾಲಾ ವಿದ್ಯಾರ್ಥಿಗಳು, ಸಾರ್ವಜನಿಕರು



ದಸರಾ ಮ್ಯಾರಥಾನ್‌ನಲ್ಲಿ ಭಾಗವಹಿಸಿದ್ದ ಶಾಲಾ–ಕಾಲೇಜು ವಿದ್ಯಾರ್ಥಿಗಳು.

ಚಾಮರಾಜನಗರ, ಅ.8–ಚಾಮರಾಜನಗರ ದಸರಾ ಮಹೋತ್ಸವ ಅಂಗವಾಗಿ ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ಮ್ಯಾರಥಾನ್‌ನಲ್ಲಿ ವಿವಿಧ ಶಾಲಾ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಗಮನ ಸೆಳೆದರು.

ಚಾಮರಾಜೇಶ್ವರ ದೇವಾಲಯ ಮುಂಭಾಗ ಮ್ಯಾರಥಾನ್‌ಗೆ ನಗರಸಭೆ ಅಧ್ಯಕ್ಷ ಎಸ್.ಸುರೇಶ್ ಹಾಗೂ ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ ಹಸಿರು ನಿಶಾನೆ ಮೂಲಕ ಚಾಲನೆ ನೀಡಿದರು. ಮ್ಯಾರಥಾನ್ ನಗರದ ಬಿ.ರಾಚಯ್ಯ ಜೋಡಿರಸ್ತೆಯಲ್ಲಿ ಸಾಗಿ ರಾಮಸಮುದ್ರ ತಲುಪಿ, ಅಲ್ಲಿಂದ ಮತ್ತೆ ಚಾಮರಾಜೇಶ್ವರ ದೇವಾಲಯದಲ್ಲಿ ಅಂತ್ಯಗೊಂಡಿತು.

ಇದೇ ವೇಳೆ ಮಾತನಾಡಿದ ಗೀತಾ ಹುಡೇದ, ದಸರಾ ಅಂಗವಾಗಿ ನಗರದಲ್ಲಿ ಮೂರು ದಿನ ಹಲವು ವಿಶೇಷ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ. ನಮ್ಮ ಸಂಸ್ಕೃತಿಯನ್ನು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಮುನ್ನೆಡೆಸುವುದು ಮ್ಯಾರಥಾನ್ ಉದ್ದೇಶವಾಗಿದೆ. ಮಾನಸಿಕ ದೃಢತೆಯಷ್ಟೇ ದೈಹಿಕ ಸದೃಢತೆ ಮುಖ್ಯವಾಗಿದೆ. ದೈಹಿಕ ಸಾಮರ್ಥ್ಯ ಬಲಗೊಳ್ಳಲು ಪ್ರತಿಯೊಬ್ಬರೂ ಆಟೋಟಗಳಲ್ಲಿ ಭಾಗವಹಿಸಬೇಕು. ಇದರಿಂದ ದೈಹಿಕ ಹಾಗೂ ಮಾನಸಿಕ ಸುಸ್ಥಿರತೆ ಕಾಪಾಡಿಕೊಳ್ಳಬಹುದು ಎಂದು ತಿಳಿಸಿದರು.

ನಗರಸಭೆ ಪೌರಾಯುಕ್ತ ಎಸ್.ವಿ. ರಾಮದಾಸ್, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರರಾಜೇ ಅರಸ್, ಜಿಲ್ಲಾ ಪರಿಸರ ಅಧಿಕಾರಿ ಉಮಾ ಶಂಕರ್, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಶಂಕರ್, ನಗರಸಭೆ ಹಿರಿಯ ಆರೋಗ್ಯ ನಿರೀಕ್ಷಕ ಮಂಜುನಾಥ್, ದೈಹಿಕ ಶಿಕ್ಷಣ ಶಿಕ್ಷಕರಾದ ಚಿಕ್ಕಬಸವಯ್ಯ, ಶಿವಮಲ್ಲು ಇತರರು ಇದ್ದರು.

ಚೆಲುವ ಚಾಮರಾಜನಗರ ನಮ್ಮ ಹೆಮ್ಮೆ

ಚಾಮರಾಜನಗರ, ಅ.8–ನಮ್ಮ ಚೆಲುವ ಚಾಮರಾಜನಗರ ನಮ್ಮ ಹೆಮ್ಮೆ. ದೇಶ, ನಾಡಿನ ಸಂಸ್ಕೃತಿ, ಪರಂಪರೆಯನ್ನು ಎತ್ತಿ ಹಿಡಿಯುವ ಕಾರ್ಯಕ್ರಮಗಳಿಗೆ ಕಲಾವಿದರಿಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರರಾಜೇ ಅರಸ್ ತಿಳಿಸಿದರು.

ನಗರದ ಚಾಮರಾಜೇಶ್ವರ ದೇವಾಲಯದ ಪ್ರಧಾನ ವೇದಿಕೆಯಲ್ಲಿ ಮಂಗಳವಾರ ಆಯೋಜಿಸಿದ್ದ ಮಹಿಳಾ ಸಾಂಸ್ಕೃತಿಕ ದಸರಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದಸರಾ ಆಚರಣೆ ಎಲ್ಲರನ್ನು ಒಂದುಗೂಡಿಸುವ ನಾಡಹಬ್ಬವಾಗಬೇಕು. ಈ ಬಾರಿ ಒಂದಕ್ಕೊಂದು ವಿಭಿನ್ನ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಪ್ರೇಕ್ಷಕರು ಹೆಚ್ಚಿನ ಸಂಖ್ಯೆಯಲ್ಲಿ ದಸರಾ ಕಾರ್ಯಕ್ರಮ ವೀಕ್ಷಿಸಬೇಕು. ಜೊತೆಗೆ ಕಲಾವಿದರನ್ನು ಪ್ರೋತ್ಸಾಹಿಸಬೇಕು. ಕಲಾವಿದರು ಸಹ ಜನರನ್ನು ರಂಜಿಸುವಂತಹ ಉತ್ತಮ ಕಾರ್ಯಕ್ರಮ ನೀಡಬೇಕು ಎಂದರು. ಇದೇ ವೇಳೆ ವಿವಿಧ ಮಹಿಳಾ ತಂಡಗಳು ಭರತನಾಟ್ಯ, ದೇವಿ ನೃತ್ಯ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನೀಡಿದವು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಮಂಜುನಾಥ್, ಕ್ಷೇತ್ರ ಶಿಕ್ಷಣಾಧಿಕಾರಿ, ಹನುಮೇಗೌಡ, ಟಿ.ಆರ್.ಸ್ವಾಮಿ ಇತರರು ಇದ್ದರು.



ಚಾಮರಾಜನಗರದ ಚಾಮರಾಜೇಶ್ವರಸ್ವಾಮಿ ದೇವಸ್ಥಾನ ಆವರಣದಲ್ಲಿ ನಡೆದ ಮಹಿಳಾ ದಸರಾದಲ್ಲಿ ಚರಿತಾ.ಎನ್ ಮತ್ತು ತಂಡದ ಭರತನಾಟ್ಯ ಪ್ರದರ್ಶನ ಗಮನ ಸೆಳೆಯಿತು.

ಚಲನಚಿತ್ರೋತ್ಸವ ಯಶಸ್ವಿ ಪ್ರದರ್ಶನ, ಚಿತ್ರ ತಂಡಗಳಿಗೆ ಗೌರವ



ಚಾಮರಾಜನಗರ ದಸರಾ ಚಲನಚಿತ್ರೋತ್ಸವದಲ್ಲಿ ಭಾಗವಹಿಸಿದ್ದ ಜನರು.

ಚಾಮರಾಜನಗರ, ಅ.8–ದಸರಾ ಚಲನಚಿತ್ರೋತ್ಸವ ಅಂಗವಾಗಿ ನಗರದ ವಿವಿಧ ಚಿತ್ರಮಂದಿರಗಳಲ್ಲಿ ಉಚಿತವಾಗಿ ಕನ್ನಡ ಚಲನಚಿತ್ರಗಳ ಪ್ರದರ್ಶನ ನಡೆಯುತ್ತಿವೆ.

ಅ.9ರವರೆಗೆ ಭ್ರಮರಾಂಬ, ಬಸವೇಶ್ವರ, ಗುರುರಾಘವೇಂದ್ರ, ಸಿಂಹ ಮೂವಿ ಪ್ಯಾರಡೈಸ್, ಸಿದ್ದಾರ್ಥ ಚಿತ್ರ ಮಂದಿರಗಳಲ್ಲಿ ಕನ್ನಡ ಚಿತ್ರಗಳನ್ನು ಪ್ರದರ್ಶಿಸಲಾಗುತ್ತಿದೆ. ಸೋಮವಾರ ಬಸವೇಶ್ವರ ಚಿತ್ರಮಂದಿರದಲ್ಲಿ ಪ್ರದರ್ಶನಗೊಂಡ ಚಾಮರಾಜನಗರದ ಭಾಷಾ ಸೊಗಡಿನಲ್ಲಿ ಮೂಡಿಬಂದಿರುವ ಕೋಳಿ ಎಸ್ರು ಚಲನಚಿತ್ರವನ್ನು ಚಿತ್ರದ ನಿರ್ದೇಶಕ ಚಂಪಾಶೆಟ್ಟಿ, ನಟಿ ಅಕ್ಷತಾ ಪಾಂಡವಪುರ, ನಿರ್ಮಾಪಕ ಪ್ರಕಾಶ್ ಬಿ.ಶೆಟ್ಟಿ ವೀಕ್ಷಿಸಿದರು.

ಬಳಿಕ ಚಂಪಾಶೆಟ್ಟಿ, ಅಕ್ಷತಾ ಪಾಂಡವಪುರ, ಪ್ರಕಾಶ್.ಬಿ.ಶೆಟ್ಟಿ ಚಲನಚಿತ್ರದಲ್ಲಿ ನಟಿಸಿರುವ ಚಿತ್ರಾ ವೆಂಕಟರಾಜು, ಶಿವಶಂಕರ್. ಎಸ್ ಚೆಟ್ಟು, ದಾಕ್ಷಾಯಿಣಿ ಸೇರಿದಂತೆ ಚಿತ್ರ ತಂಡವನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಎ.ರಮೇಶ್ ಗೌರವಿಸಿದರು. ರಾಷ್ಟ್ರಪ್ರಶಸ್ತಿ ವಿಜೇತ ಸಂಕಲನಕಾರ ಸ್ವಾಮಿ ಅಮ್ಮನಪುರ, ಹಿರಿಯ ಕಲಾವಿದರಾದ ಅಬ್ರಾಹಂ ಡಿ.ಸಿಲ್ವಾ, ಕೆ.ವೆಂಕಟ ರಾಜು, ಸಿ.ಎಂ.ನರಸಿಂಹ ಮೂರ್ತಿ ಇತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಮಂಗಳವಾರ ಬೆಳಗ್ಗೆ ಗುರುರಾಘವೇಂದ್ರ ಚಿತ್ರಮಂದಿರದಲ್ಲಿ ಚಿರತೆ ಬಂತು ಚಿರತೆ ಸಿನಿಮಾ ಯಶಸ್ವಿಯಾಗಿ ಪ್ರದರ್ಶನಗೊಂಡಿತು. ಚಾಮರಾಜನಗರ ಭಾಗದ ಮತ್ತು ಗ್ರಾಮೀಣ ಕಥಾಹಂದರವನ್ನು ಒಳಗೊಂಡ ಚಿತ್ರವನ್ನು ಜನರು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

ಚಿತ್ರದ ನಿರ್ದೇಶಕ ಸಿ.ಆರ್.ಕೃಷ್ಣಮೂರ್ತಿ (ಬೆನಕ ಕಿಟ್ಟಿ), ನಿರ್ಮಾಪಕ ಜಗದೀಶ್ ಮಲ್ನಾಡ್, ನಟರಾದ ಕಿರಣ್ ಗಿರ್ಗಿ, ಸ್ಫೂರ್ತಿ ಸುಬ್ರಹ್ಮಣ್ಯ, ಚಂದನ ಅವರನ್ನು ಜಿಲ್ಲಾಡಳಿತ ಪರವಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕ ಎ.ರಮೇಶ್ ನೆನಪಿನ ಕಾಣಿಕೆ ನೀಡಿದರು. ಗುರುರಾಘವೇಂದ್ರ ಚಿತ್ರಮಂದಿರದಲ್ಲಿ ಸಂಜೆ 4 ಗಂಟೆಗೆ ಪ್ರದರ್ಶನಗೊಂಡ ಡಿಎನ್‌ಎ ಚಲನಚಿತ್ರದ ನಿರ್ದೇಶಕ ಪ್ರಕಾಶ್ ರಾಜ್ ಮೇಹು ಹಾಗೂ ನಟ ಧ್ರುವ ಅವರನ್ನು ಸನ್ಮಾನಿಸಲಾಯಿತು. ಇನ್ನಿತರ ಚಿತ್ರಮಂದಿರದಲ್ಲಿ ದಸರಾ ಚಲನಚಿತ್ರೋತ್ಸವ ಪ್ರದರ್ಶನಗೊಂಡಿತು.

ಇಂದು ರೈತ ದಸರಾ

ಚಾಮರಾಜನಗರ, ಅ.8–ದಸರಾ ಮಹೋತ್ಸವ ಅಂಗವಾಗಿ ಕೃಷಿ ಇಲಾಖೆ ಸಹಯೋಗದಲ್ಲಿ ರೈತ ದಸರಾವನ್ನು ಅ.9ರಂದು ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಆಯೋಜಿಸಲಾಗಿದೆ. ಬೆಳಗ್ಗೆ 9.30ಕ್ಕೆ ಚಾಮರಾಜೇಶ್ವರಸ್ವಾಮಿ ದೇವಸ್ಥಾನದಿಂದ ಜಿಲ್ಲಾಡಳಿತ ಭವನದ ಮಾರ್ಗವಾಗಿ ಅಂಬೇಡ್ಕರ್ ಭವನದವರೆಗೆ ಕೃಷಿ ಇಲಾಖೆ ಸ್ತಬ್ಧಚಿತ್ರ, ಎತ್ತಿನ ಗಾಡಿ ಹಾಗೂ ಕಲಾ ತಂಡಗಳೊಂದಿಗೆ ಮೆರವಣಿಗೆ ನಡೆಯಲಿದೆ. 11.15ಕ್ಕೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುವುದು. ಬಳಿಕ ಸಿರಿಧಾನ್ಯ ಮತ್ತು ಅದರ ಬೇಸಾಯ ಕ್ರಮ, ಮಳೆ ನೀರು ಕೊಯ್ಲು, ಸಾವಯವ ಕೃಷಿ, ಹೈನುಗಾರಿಕೆ, ಇತರೆ ಕೃಷಿ ಪದ್ಧತಿ ಕುರಿತು ತಾಂತ್ರಿಕ ಗೋಷ್ಠಿ ಹಮ್ಮಿಕೊಳ್ಳಲಾಗಿದೆ. ಇದೇ ವೇಳೆ ಕೃಷಿ ವಸ್ತುಪ್ರದರ್ಶನ ಹಾಗೂ ಕೃಷಿ ಯಂತ್ರೋಪಕರಣಗಳ ಪ್ರದರ್ಶನ ಏರ್ಪಡಿಸಲಾಗಿದೆ.

ದೊಡ್ಡತಾಯಮ್ಮ ಕೆಸ್ತೂರು ಗ್ರಾಪಂ ಅಧ್ಯಕ್ಷೆ



ಕೆಸ್ತೂರು ಗ್ರಾಪಂ ಅಧ್ಯಕ್ಷರಾಗಿ ಆಯ್ಕೆಯಾದ ದೊಡ್ಡತಾಯಮ್ಮ ಅವರನ್ನು ಸದಸ್ಯರು ಹಾಗೂ ಗ್ರಾಮಸ್ಥರು ಅಭಿನಂದಿಸಿದರು.

ಯಳಂದೂರು, ಅ.8–ತಾಲೂಕಿನ ಕೆಸ್ತೂರು ಗ್ರಾಮ ಪಂಚಾಯಿತಿ ಅಧ್ಯಕ್ಷೆಯಾಗಿ ದೊಡ್ಡತಾಯಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಕೋಮಲಾ ರಾಜೀನಾಮೆಯಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ದೊಡ್ಡತಾಯಮ್ಮ ಒಬ್ಬರೆ ಮಾತ್ರ ನಾಮಪತ್ರ ಸಲ್ಲಿಸಿದ್ದರು. ನಂತರ ಚುನಾವಣಾಧಿಕಾರಿಯಾದ ಪಶು ಇಲಾಖೆಯ ಡಾ.ಶಿವರಾಜು ಅವಿರೋಧ ಆಯ್ಕೆ ಘೋಷಿಸಿದರು.

ಉಪಾಧ್ಯಕ್ಷೆ ಶೋಭಾ, ಸದಸ್ಯರಾದ ಕೆ.ಎನ್.ಬಾಲುಪ್ರಸಾದ್, ಪಿ.ಮಹದೇವಸ್ವಾಮಿ, ಎನ್.ರೂಪಾ, ಕೆ.ಎಂ.ರಾಜು, ಎನ್.ಕುಮಾರ್, ಎನ್.ಭಾಗ್ಯ ಆರ್.ಸುನಂದ, ಎಸ್.ಮಹದೇವಸ್ವಾಮಿ, ಗುರುಲಿಂಗಯ್ಯ, ಸಿ.ಸುನೀತಾ, ಎಸ್.ಮಹೇಂದರ್, ಜಿ.ಪ್ರಸಾದ್, ಕೋಮಲಾ, ಕೆ.ಬಿ.ಮಲ್ಲಣ್ಣ, ಮಮತಾ, ಎಸ್.ರಾಚಪ್ಪಾಜಿ, ಎಂ.ಎಂ.ಶೃತಿ, ಪಿಡಿಓ ಮಹದೇವಸ್ವಾಮಿ, ಮುಖಂಡರಾದ ಸಿದ್ದರಾಜು, ಗುರು ಇದ್ದರು.

ಅರಮನೆ ವೇದಿಕೆಯಲ್ಲಿ ಗಾನಸುಧೆಯೊಂದಿಗೆ ಅರಳಿದ ರಾಜರ್ಷಿ ನಾಲ್ವಡಿ ಭಾವಚಿತ್ರ

ಜನಪದ ಗಾಯನದಲ್ಲಿ ಅನಾವರಣಗೊಂಡ ಕರುನಾಡಿನ ಸಂಸ್ಕೃತಿ



ಅರಮನೆ ವೇದಿಕೆಯಲ್ಲಿ ಮಂಗಳವಾರ ನಡೆದ 'ನಾಲ್ವಡಿ ಗೀತೆಗಳ ಗಾಯನ' ಕಾರ್ಯಕ್ರಮದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕೊಡುಗೆಗಳನ್ನು ಹಾಡುಗಳ ಮೂಲಕ ಪ್ರಸ್ತುತಪಡಿಸಲಾಯಿತು.



ಡಾ.ಕೆ.ರಾಮೇಶ್ವರಪ್ಪ ಮತ್ತು ತಂಡವು ಜನಪದ ಗೀತೆ ಗಾಯನ ಕಾರ್ಯಕ್ರಮ ನೀಡಿತು.


ಮೈಸೂರು,ಅ.8(ಪಿಎಂ)– ಗಾನ ಸುಧೆಯೊಂದಿಗೆ ಕುಂಚದಲ್ಲಿ ಮೂಡಿದ ಆಧುನಿಕ ಮೈಸೂರು ನಿರ್ಮಾತೃ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಭಾವಚಿತ್ರ... ಜನಪದ ಗಾಯನದಲ್ಲಿ ಅನಾವರಣ ಗೊಂಡ ಕರುನಾಡಿನ ಸಂಸ್ಕೃತಿ... ಮೈಸೂರು ಅರಮನೆ ವೇದಿಕೆಯಲ್ಲಿ ಕಂಡುಬಂದ ಸಾಂಸ್ಕೃತಿಕ ವೈಭವವಿದು.

ದಸರಾ ಮಹೋತ್ಸವ ಪ್ರಯುಕ್ತ ಸಾಂಸ್ಕೃತಿಕ ಉಪಸಮಿತಿ ವತಿಯಿಂದ ಇಲ್ಲಿ ಹಮ್ಮಿಕೊಂಡಿರುವ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಆರನೇ ದಿನವಾದ ಮಂಗಳವಾರ ಸಂಜೆ ಇಂತಹ ಕಲಾಲೋಕವೊಂದು ತೆರೆದುಕೊಂಡು ಸಭಿಕರ ಮೋಡಿ ಮಾಡಿತು.

'ನಾಲ್ವಡಿ ಗೀತೆಗಳ ಗಾಯನ' ಶೀರ್ಷಿಕೆಯಡಿ ಸೋಸಲೆ ಗಂಗಾಧರ್ ಮತ್ತು ತಂಡ ನಡೆಸಿಕೊಟ್ಟ ಗಾಯನ ಕಾರ್ಯಕ್ರಮದಲ್ಲಿ ನಾಲ್ವಡಿಯವರ ಕೊಡುಗೆ ಮತ್ತು ಮೇರುವ್ಯಕ್ತಿತ್ವ ಮೂಡಿ ಬಂದಿತು. 'ಕರುನಾಡಿನ ಭಾಗ್ಯವಿಧಾತ... ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರೇ ಶರಣು ನಿಮಗೆ ಶರಣು...', 'ಅಸಾಮಾನ್ಯ–ಮಹಾಮಾನ್ಯ ರಾಜರ್ಷಿಯೇ... ಈ ಜಗದ ಜನ ಮರೆಯದಂತಹ ಮಾಣಿಕ್ಯವೇ...' ಸೇರಿದಂತೆ ವಿವಿಧ ಗೀತೆಗಳ ಮೂಲಕ ನಾಲ್ವಡಿಯವರನ್ನು ಸ್ಮರಿಸಲಾಯಿತು. ಒಂದೆಡೆ ಸುಶ್ರಾವ್ಯವಾಗಿ ಗಾಯನ ಸಾದರಪಡಿಸುತ್ತಿದ್ದರೆ, ಮತ್ತೊಂದೆಡೆ ಕುಂಚದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಭಾವಚಿತ್ರ ಮೂಡಿಬಂದಿದ್ದನ್ನು ಕಂಡು ಸಭಿಕರು ಬೆರಗಾಗಿ ಚಪ್ಪಾಳೆಯ ಮಳೆ ಸುರಿಸಿದರು.

ಬಳಿಕ ಡಾ.ಕೆ.ರಾಮೇಶ್ವರಪ್ಪ ಮತ್ತು ಅವರ ತಂಡದ ಕಲಾವಿದರು ನಡೆಸಿಕೊಟ್ಟ ಜನಪದ ಗಾಯನ ಶ್ರೋತೃಗಳ ಮನಸೂರೆಗೊಂಡಿತು. ಕಲಾವಿದರು ಹಾಡಿನೊಂದಿಗೆ ಲಘು ನೃತ್ಯ ಪ್ರದರ್ಶನದ ಮೋಡಿ ಮಾಡಿ ಸಭಿಕರು ಮಂತ್ರಮುಗ್ಧರಾಗಿ ಮೈಮರೆಯುವಂತೆ ಮಾಡಿದರು.

'ಬೆಳಗಾಯಿತು ನೋಡು ಬಸವನ ಹೊಡಕಂಡು ಹೊಲಕ್ಕೆ ಹೋಗುತ್ತೀನಿ...' ಎಂಬ ಹೊತ್ತಿ ಬೆಳೆಯುವ ಒಕ್ಕಲಿಗರ ಹಾಡು ಸೇರಿದಂತೆ 'ಅಪ್ಪ ನಂಜುಂಡ ನೆಲಗೊಂಡು...', 'ಹಿಟ್ಟು ಮಾಡಿ ಸೊಪ್ಪು ಮಾಡಿ ಹಿಟ್ಟಕ್ಕದೇ ಎಲ್ಲಿ ಹೋದೇ ಎಲೆ ನಾರಿ...', 'ತಿಂಗಳು ಮುಳುಗಿದವೋ ರಂಗೋಲೆ ಬೆಳಗಿದವೋ...' ಮೊದಲಾದ ಜನಪದ ಗೀತೆಗಳನ್ನು ಪ್ರಸ್ತುತಪಡಿಸಿ ಕೇಳುಗರು ತಲೆದೂಗುವಂತೆ ಮಾಡಿದರು.



ಕುಂಚದಲ್ಲಿ ನಾಲ್ವಡಿಯವರ ಭಾವಚಿತ್ರವನ್ನು ಕಲಾವಿದರೊಬ್ಬರು ಮೂಡಿಸಿದ್ದನ್ನು ಕಾಣಬಹುದು.


ಉರ್ದು ಕವಿಗೋಷ್ಠಿ



ಮೈಸೂರಿನ ವಸ್ತುಪ್ರದರ್ಶನ ಪ್ರಾಧಿಕಾರದ ಪಿ. ಕಾಳಿಂಗರಾವ್ ಸಭಾಂಗಣದಲ್ಲಿ ದಸರಾ ಉರ್ದು ಕವಿಗೋಷ್ಠಿಯನ್ನು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಶಾಸಕ ತನ್ವೀರ್ ಸೇಠ್ ನೇತೃತ್ವದಲ್ಲಿ ಉದ್ಘಾಟಿಸಲಾಯಿತು. ಈ ವೇಳೆ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಉರ್ದು ಕವಿಗಳು ಸೇರಿದಂತೆ ಮುಸ್ಲಿಂ ಮುಖಂಡರಿದ್ದರು.

ಹೆಬ್ಬಸೂರು ಶೃಂಗೇರಿ ಶಾಖಾ ಪೀಠದಲ್ಲಿ ಮಹಾಲಯ ಅಮಾವಾಸ್ಯೆ, ಶರನ್ನವರಾತ್ರಿ ವಿಶೇಷ ಪೂಜೆ

ಚಾಮರಾಜನಗರ, ಅ.8– ಶೃಂಗೇರಿ ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠಂನ ಹೆಬ್ಬಸೂರು(ಚಾ.ನಗರ ತಾಲೂಕು) ಶಾಖೆಯಲ್ಲಿ ಮಹಾಲಯ ಅಮಾವಾಸ್ಯೆ ಹಾಗೂ ಶರನ್ನವರಾತ್ರಿ ಉತ್ಸವದ ಪ್ರಯುಕ್ತ ವಿಶೇಷ ಪೂಜಾ ಕೈಂಕರ್ಯಗಳು ಜರುಗುತ್ತಿವೆ.



ಬುಧವಾರ ಬೆಳಗ್ಗೆ 7.30ಕ್ಕೆ ಸರಸ್ವತಿ ಹೋಮ, ಮಧ್ಯಾಹ್ನ 12.30ಕ್ಕೆ ಮಹಾ ಮಂಗಳಾರತಿ, ಅ.10ರ ಬೆಳಗ್ಗೆ 8.30ಕ್ಕೆ ದುರ್ಗಾ ಹೋಮ, ಮಧ್ಯಾಹ್ನ 12.30ಕ್ಕೆ ಮಹಾಮಂಗಳಾರತಿ, ಮಧ್ಯಾಹ್ನ 1 ಗಂಟೆಗೆ ಅನ್ನಸಂತರ್ಪಣೆ, ಅ.12ರ ಬೆಳಗ್ಗೆ 7.30ಕ್ಕೆ ನವಚಂಡಿಕಾ ಯಾಗ, ಮಧ್ಯಾಹ್ನ 12ಕ್ಕೆ ಪೂರ್ಣಾಹುತಿ, ಮಹಾಮಂಗಳಾರತಿ, ಅನ್ನಸಂತರ್ಪಣೆ, ರಾತ್ರಿ 7.30ಕ್ಕೆ ಉಯ್ಯಾಲೋತ್ಸವ ನೆರವೇರಲಿದೆ.

ಶುದ್ಧ ಪೂರ್ಣಿಮಾ: ಶುದ್ಧ ಪೂರ್ಣಿಮಾ ಅಂಗವಾಗಿ ಅ.17ರ ಗುರುವಾರ ಬೆಳಗ್ಗೆ 9ಕ್ಕೆ ಶ್ರೀರಾಮ ದೇವರಿಗೆ ವಿಶೇಷ ಪೂಜೆ, ಮಧ್ಯಾಹ್ನ 12.30ಕ್ಕೆ ಮಹಾಮಂಗಳಾರತಿ ನಂತರ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ.

ವರ್ಷದಲ್ಲಿ 10 ಸಾವಿರ ದೂರು; ಓಲಾ ಎಲೆಕ್ಟ್ರಿಕ್ ಕಂಪನಿಗೆ ಪ್ರಾಧಿಕಾರದ ನೋಟಿಸ್

ನವದೆಹಲಿ: ಓಲಾ ಎಲೆಕ್ಟ್ರಿಕ್ ಸ್ಕೂಟರ್ ಸೇವೆಗೆ ಸಂಬಂಧಿಸಿದಂತೆ ಸುಮಾರು 10 ಸಾವಿರ ದೂರುಗಳು ಒಂದೇ ವರ್ಷದಲ್ಲಿ ಸಲ್ಲಿಕೆಯಾಗಿದ್ದು, ಈ ಕುರಿತಂತೆ ವಿವರಣೆ ನೀಡುವಂತೆ ಗ್ರಾಹಕರ ಹಕ್ಕುಗಳ ಪ್ರಾಧಿಕಾರದ ಕೇಂದ್ರೀಯ ಮಂಡಳಿಯು ಸಾಫ್ಟ್‌ಬ್ಯಾಂಕ್ ಬೆಂಬಲಿತ ಇ–ಸ್ಕೂಟರ್ ತಯಾರಿಕಾ ಕಂಪನಿಗೆ ನೋಟಿಸ್ ಜಾರಿ ಮಾಡಿದೆ.

ಕಳೆದ ಆಗಸ್ಟ್‌ನಲ್ಲಿ ಓಲಾ ಎಲೆಕ್ಟ್ರಿಕ್ ಕಂಪನಿಯು ಷೇರು ಮಾರುಕಟ್ಟೆಯನ್ನು ಪ್ರವೇಶಿಸಿತ್ತು. ಗ್ರಾಹಕರ ಸೇವೆಯಲ್ಲಿನ ಲೋಪದಿಂದಾಗಿ ಉಂಟಾದ ಆಕ್ರೋಶದಿಂದ ಶೇ 40ರಷ್ಟು ಕುಸಿತ ಕಂಡಿದೆ. ಕಳೆದ ಕೆಲ ವಾರಗಳಿಂದ ಓಲಾ ಸ್ಕೂಟರ್‌ಗಳ ಮಾರಾಟದಲ್ಲೂ ಇಳಿಮುಖವಾಗಿದೆ. ಕಂಪನಿಯ ಸೇವೆ ಕುರಿತಂತೆ ಹಲವು ಸಾಮಾಜಿಕ ಮಾಧ್ಯಮಗಳಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಗ್ರಾಹಕರ ಹಕ್ಕುಗಳ ಪ್ರಾಧಿಕಾರದ ಕೇಂದ್ರೀಯ ಮಂಡಳಿಯು 2023ರ ಸೆಪ್ಟೆಂಬರ್‌ನಿಂದ 2024ರ ಆಗಸ್ಟ್‌ವರೆಗಿನ ಅವಧಿಯಲ್ಲಿ ಓಲಾ ವಿರುದ್ಧ ಸಲ್ಲಿಕೆಯಾದ ಹತ್ತು ಸಾವಿರ ದೂರುಗಳನ್ನು ಪರಿಗಣಿಸಿ ನೋಟಿಸ್ ಜಾರಿ ಮಾಡಿದೆ' ಎಂದು ಗ್ರಾಹಕರ ವ್ಯವಹಾರಗಳ ಸಚಿವಾಲಯದ ನಿಧಿ ಖರೆ ತಿಳಿಸಿದ್ದಾರೆ.

ತಕ್ಷಣವೇ ಒಳಮೀಸಲಾತಿ ಜಾರಿಗೆ ಕ್ರಮ ಕೈಗೊಳ್ಳುವಂತೆ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಆಗ್ರಹ

ಹಿರಿಯ ವಕೀಲ ಅರುಣ್‌ಕುಮಾರ್ ನೇತೃತ್ವದಲ್ಲಿ ಸಭೆ



ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ವತಿಯಿಂದ ಮೈಸೂರಿನಲ್ಲಿ ಏರ್ಪಡಿಸಿದ್ದ ವಕೀಲರ ಸಭೆಯನ್ನು ಹಿರಿಯ ವಕೀಲ ಎಸ್.ಅರುಣ್ ಕುಮಾರ್ ಉದ್ಘಾಟಿಸಿದರು.

ಮೈಸೂರು, ಅ.8– ಒಳಮೀಸಲಾತಿ ಜಾರಿಗೆ ರಾಜ್ಯ ಸರ್ಕಾರ ತ್ವರಿತ ಕ್ರಮ ಕೈಗೊಳ್ಳಬೇಕು ಎಂದು ಕರ್ನಾಟಕ ಸಾಮಾಜಿಕ ನ್ಯಾಯ ಪರ ವಕೀಲರ ವೇದಿಕೆ ಒತ್ತಾಯಿಸಿದೆ.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಸೋಮವಾರ ನಡೆದ ವೇದಿಕೆಯ ಸಭೆಯಲ್ಲಿ ಈ ನಿರ್ಣಯ ಕೈಗೊಂಡು, ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಶೀಘ್ರವೇ ಮನವಿ ಸಲ್ಲಿಸಿ, ಕ್ರಮಕ್ಕೆ ಒತ್ತಾಯಿಸಲು ತೀರ್ಮಾನಿಸಲಾಗಿದೆ.

ನೆಪ ಹೇಳಬೇಡಿ: ಸಭೆ ಉದ್ಘಾಟಿಸಿ ಮಾತನಾಡಿದ ಹಿರಿಯ ವಕೀಲ ಎಸ್.ಅರುಣ್ ಕುಮಾರ್ ಅವರು, ಪರಿಶಿಷ್ಟ ಜಾತಿ ಹಾಗೂ ಪಂಗಡದ ಒಳ ಮೀಸಲಾತಿ ವಿಚಾರಕ್ಕೆ ಸಂಬಂಧಿಸಿದಂತೆ ಡಿ.ವೈ.ಚಂದ್ರಚೂಡ್ ನೇತೃತ್ವದ ಏಳು ನ್ಯಾಯಾಧೀಶರ ಪೀಠವು ಮಹತ್ವದ ತೀರ್ಪು ನೀಡಿದೆ ಎಂದರು.

ಪರಿಶಿಷ್ಟ ಜಾತಿಗಳಲ್ಲಿ ಬಹುದೊಡ್ಡ ಸಮಾಜವಾದ ಮಾದಿಗ ಸಮುದಾಯವು ಒಳಮೀಸಲಾತಿಗಾಗಿ 30 ವರ್ಷಗಳಿಂದಲೂ ಹೋರಾಟ ನಡೆಸುತ್ತಿದೆ. ರಾಜ್ಯದ ನಿವೃತ್ತ ನ್ಯಾಯಾಧೀಶ ಎ.ಜೆ.ಸದಾಶಿವ ಆಯೋಗವು 20.64 ಲಕ್ಷ ಪರಿಶಿಷ್ಟ ಜಾತಿಗಳ ಕುಟುಂಬ ಗಳನ್ನು ಸಮೀಕ್ಷೆ ಮಾಡಿ, ವರದಿಯನ್ನು ಹಿಂದಿನ ಬಿಜೆಪಿ ಸರ್ಕಾರಕ್ಕೆ ಒಪ್ಪಿಸಿದೆ. ಆ ವರದಿಯ ಶಿಫಾರಸುಗಳನ್ನು ಜಾರಿಗೊಳಿ ಸುವುದಾಗಿ ಎಂದು ಕಾಂಗ್ರೆಸ್ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದೆ. ಪರಿಶಿಷ್ಟ ಜಾತಿ ಒಳಗಿನ ಒಳಮೀಸಲಾತಿ ನೀಡುವುದನ್ನು ರಾಜ್ಯ ಸರ್ಕಾರವೇ ಅನುಷ್ಠಾನಗೊಳಿಸಲು ಪರಮಾಧಿಕಾರ ಹೊಂದಿದೆ ಎಂದು ಸುಪ್ರೀಂಕೋರ್ಟ್ ತೀರ್ಪಿನಲ್ಲಿ ತಿಳಿಸಿರುವುದರಿಂದ ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರು ಹೈಕಮಾಂಡ್ ನೆಪ ಹೇಳದೆ ಈ ಸಂಬಂಧ ಕೂಡಲೇ ಕ್ರಮ ಕೈಗೊಳ್ಳಬೇಕು. ಆಯೋಗದ ದತ್ತಾಂಶವನ್ನು ಪರಿಗಣಿಸಿ, ಒಳ ಮೀಸಲಾತಿ ಅನುಷ್ಠಾನಗೊಳಿಸಬೇಕು ಎಂದು ಒತ್ತಾಯಿಸಿದರು.

ಉಗ್ರ ಹೋರಾಟ ಅನಿವಾರ್ಯ: ವಕೀಲ ಬೂದಿತಿಟ್ಟು ರಾಜೇಂದ್ರ ಮಾತನಾಡಿ, ಸುಪ್ರೀಂ ಕೋರ್ಟ್ ತೀರ್ಪು ಹೊರಬಂದ ಮರುದಿನ ದಿಂದಲೇ ಅನುಷ್ಠಾನಕ್ಕಾಗಿ ಒಳ ಮೀಸಲಾತಿ ಬೆಂಬಲಿಸುವಂತಹ ಮಾದಿಗ ಸಂಬಂಧಿತ ಜಾತಿಗಳು ನಿರಂತರವಾಗಿ ಆಗ್ರಹಿಸುತ್ತಿವೆ. ರಾಯಚೂರು ಬಂದ್ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಹೋರಾಟವೂ ನಡೆಯುತ್ತಿದೆ. ಹಾಗಾಗಿ ಸರ್ಕಾರ ಬೇಗ ಎಚ್ಚೆತ್ತುಕೊಂಡು ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ಜಾರಿಗೊಳಿಸಬೇಕು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಅವಕಾಶವನ್ನು ತಪ್ಪಿಸಿಕೊಂಡರೆ ಬಹುದೊಡ್ಡ ಶೋಷಿತ ಸಮಾಜದಿಂದ ಕಾನೂನಾತ್ಮಕ ಹೋರಾಟ ಎದುರಿ ಸಬೇಕಾಗುತ್ತದೆ. ಹಾಗಾಗಿ ಮುಂದಿನ ಸಚಿವ ಸಂಪುಟ ಸಭೆಯಲ್ಲೇ ಮಂಡಿಸಿ, ಅಂಗೀಕರಿಸಿ ಒಳಮೀಸಲಾತಿ ಜಾರಿಗೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಸಭೆಯಲ್ಲಿ ವಕೀಲರಾದ ದಾಸಯ್ಯ, ಶಿವಕುಮಾರ್, ಮಾಳಪ್ಪ, ವಿನಾಯಕ, ಸುರೇಂದ್ರ, ಪುಟ್ಟರಾಜ್, ಪಿಳ್ಳಳ್ಳಿ ಶಿವಣ್ಣ, ಲಕ್ಷ್ಮಣ ಸೇರಿದಂತೆ ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು, ಹಾಸನ, ತುಮಕೂರು ಜಿಲ್ಲೆಗಳ ವಕೀಲರು ಭಾಗವಹಿಸಿದ್ದರು.


ಮಾವುತರಿಗೆ ಜಮಖಾನ, ಬೆಡ್‌ಶೀಟ್ ವಿತರಣೆ




ಮೈಸೂರು ಅರಮನೆ ಆವರಣದಲ್ಲಿ ದಸರಾ ಆನೆ ಅರ್ಜುನನ ನೆನಪಿನ ಅಂಗವಾಗಿ ಶ್ರೀಮತಿ ಕಲಾ ಸತೀಶ್, 65 ಮಂದಿ ಮಾವುತರ ಕುಟುಂಬಸ್ಥರಿಗೆ ಜಮಖಾನ ಹಾಗೂ ಬೆಡ್‌ಶೀಟ್‌ಗಳನ್ನು ವಿತರಿಸಿದರು. ಡಿಎಫ್‌ಓ ಡಾ.ಪ್ರಭುಗೌಡ, ಆರ್‌ಎಫ್‌ಓ ಸಂತೋಷ್ ಕುಮಾರ್, ಆದಿತ್ಯ ಸುಬ್ರಹ್ಮಣ್ಯ, ಪ್ರಶಾಂತ್, ಸಂತೋಷ್, ನವೀನ್, ಪ್ರಜ್ವಲ್, ಮಾನ್ಯ, ಹರ್ಷ ಉಪಸ್ಥಿತರಿದ್ದರು.

ಜಾನ್ ಹಾಪ್‌ಫೀಲ್ಡ್, ಜೆಫ್ರಿ ಹಿಂಟನ್‌ಗೆ ಭೌತಶಾಸ್ತ್ರದ ಜಂಟಿ ನೊಬೆಲ್ ಪ್ರಶಸ್ತಿ ಘೋಷಣೆ

ನವದೆಹಲಿ, ಅ.8– ಮಷಿನ್ ಲರ್ನಿಂಗ್ ನಲ್ಲಿನ ಸಂಶೋಧನೆಗಾಗಿ ಪ್ರೊಫೆಸರ್ ಜಾನ್ ಹಾಪ್‌ಫೀಲ್ಡ್ ಅವರೊಂದಿಗೆ ಜಂಟಿಯಾಗಿ 2024 ರ ಭೌತಶಾಸ್ತ್ರದ ನೊಬೆಲ್ ಪ್ರಶಸ್ತಿಯನ್ನು ಪಡೆದ ಪ್ರೊಫೆಸರ್ ಜೆಫ್ರಿ ಹಿಂಟನ್ ಅವರು ಕೃತಕ ಬುದ್ಧಿಮತ್ತೆಯ ಸಂಭಾವ್ಯ ಅಪಾಯಗಳ ಬಗ್ಗೆ ದೊಡ್ಡ ಮಟ್ಟದ ಎಚ್ಚರಿಕೆಯನ್ನು ಜಗತ್ತಿಗೆ ನೀಡಿದ್ದಾರೆ.



ಜಾನ್ ಹಾಪ್‌ಫೀಲ್ಡ್



ಜೆಫ್ರಿ ಹಿಂಟನ್

ಪ್ರಶಸ್ತಿ ಘೋಷಣೆ ಬಳಿಕ ಕಾನ್ಫರೆನ್ಸ್ ಕಾಲ್‌ನಲ್ಲಿ ಮಾತನಾಡಿದ ಜೆಫ್ರಿ ಹಿಂಟನ್, ಎಐ ತಂತ್ರಜ್ಞಾನದಲ್ಲಿ ಆಗುತ್ತಿರುವ ತ್ವರಿತ ಬೆಳವಣಿಗೆಗಳ ಬಗ್ಗೆ ಗಂಭೀರ ಕಳವಳ ವ್ಯಕ್ತಪಡಿಸಿದ್ದಾರೆ. ಕೆಟ್ಟ ಪರಿಣಾಮಗಳ ಬಗ್ಗೆ ನಾವು ಚಿಂತಿಸಬೇಕಾಗಿದೆ ಎಂದು ಹಿಂಟನ್ ಎಚ್ಚರಿಸಿದ್ದಾರೆ. AI ಅಭಿವೃದ್ಧಿಗೆ ಸಂಬಂಧಿಸಿದ ಸಂಭಾವ್ಯ ಅಪಾಯಗಳನ್ನು ಪರಿಹರಿಸುವ ಪ್ರಾಮುಖ್ಯತೆಯನ್ನು ಒತ್ತಿಹೇಳಿದರು. ಪ್ರಖ್ಯಾತ ಕಂಪ್ಯೂಟರ್ ವಿಜ್ಞಾನಿ, 2024 ರ ಭೌತಶಾಸ್ತ್ರದ ನೊಬೆಲ್ ಪ್ರಶಸ್ತಿಯನ್ನು ಜಾನ್ ಹಾಪ್‌ಫೀಲ್ಡ್ ಅವರೊಂದಿಗೆ ಹಂಚಿಕೊಂಡರು.

ಇಂದು ಕುಸ್ತಿ ಫೈನಲ್; ದಸರಾ ನಾನಾ ಬಿರುದುಗಳಿಗೆ ಸೆಣಸಾಟ



ಮೈಸೂರು, ಅ.8(ಎಸ್‌ಬಿಡಿ)– ದಸರಾ ಕುಸ್ತಿ ಪಂದ್ಯಾವಳಿಯ ದಸರಾ ಕಂಠೀರವ, ದಸರಾ ಕೇಸರಿ, ದಸರಾ ಕಿಶೋರ, ದಸರಾ ಕಿಶೋರಿ ಹಾಗೂ ಮೈಸೂರು ದಸರಾ ಕುಮಾರ ಪ್ರಶಸ್ತಿಗೆ ಪೈಲ್ವಾನರು ಬುಧವಾರ ಸೆಣಸಾಡಲಿದ್ದಾರೆ.

'ದಸರಾ ಕೇಸರಿ'ಗೆ ದಾವಣಗೆರೆಯ ಪೈ.ಬಸವರಾಜ್ ಪಾಟೀಲ್ ಮತ್ತು ಮುದೋಳ್‌ನ ಪೈ.ಸದಾಶಿವ, 'ದಸರಾ ಕಂಠೀರವ' ಪ್ರಶಸ್ತಿಗೆ ಮುದೋಳ ಪೈ.ಬಾಪುಸಾಬ್ ಸಿಂಧೆ ಮತ್ತು ಬಾಗಲಕೋಟೆಯ ಪೈ.ಶಿವಯ್ಯ, 'ದಸರಾ ಕಿಶೋರ' ಪ್ರಶಸ್ತಿಗೆ ದಾವಣಗೆರೆಯ ಪೈ.ಮಹೇಶ್ ಪಿ.ಗೌಡ ಮತ್ತು ಪೈ.ಕೊರವರ ಸಂಜೀವ್, 'ದಸರಾ ಕಿಶೋರಿ' ಪ್ರಶಸ್ತಿಗೆ ಹಳಿಯಾಳದ ಪೈ.ಶಾಲಿನಾ ಸಿದ್ದಿ ಮತ್ತು ಪೈ.ಆರ್.ಎಸ್. ಗಾಯತ್ರಿ ಸುತಾರ್ ಮತ್ತು 'ಮೈಸೂರು ದಸರಾ ಕುಮಾರ' ಟೈಟಲ್‌ಗೆ ಮೈಸೂರಿನ ಪೈ.ಆರ್.ನಿತಿನ್ ಮತ್ತು ಮಂಡ್ಯದ ಪೈ.ಗಿರೀಶ್ ಹೋರಾಟ ನಡೆಸಲಿದ್ದಾರೆ.

ಮಂಗಳವಾರದ ಫಲಿತಾಂಶ: ಡಿ.ದೇವ ರಾಜ ಅರಸು ವಿವಿಧೋದ್ದೇಶ ಕ್ರೀಡಾಂ ಗಣದಲ್ಲಿ ನಡೆಯುತ್ತಿರುವ ದಸರಾ ನಾಡಕುಸ್ತಿಯ ಆರನೇ ದಿನವಾದ ಮಂಗಳವಾರ ಎದುರಾಳಿ ಬೆನ್ನನ್ನು ಮಟ್ಟಿಗೆ ಮುಟ್ಟಿಸಲು ಎಲ್ಲಾ ಪೈಲ್ವಾನರೂ ಹೋರಾಡಿದರು. ಎಲ್ಲಾ ವಿಭಾಗದಲ್ಲೂ ಕೆಲ ಪೈಲ್ವಾನರು ಬಿಗಿಪಟ್ಟು ಹಾಕಿ ನಿಮಿಷದೊಳಗೆ ಎದುರಾಳಿಯನ್ನು ಮಣಿಸುವಲ್ಲಿ ಯಶಸ್ವಿಯಾದರು.

ಪೈ.ಆರ್.ವಿ.ಭೈರ ಅವರನ್ನು ಕೇವಲ 23 ಸೆಕೆಂಡ್‌ಗಳಲ್ಲಿ ಮಣಿಸುವ ಮೂಲಕ ಪೈಲ್ವಾನ್ ಕೆ.ಪವನ್ ವಿಜಯಶಾಲಿಯಾದರು. ಪೈಲ್ವಾನ್ ತನಯ್ ಅಜಯ್ ಶಾಸ್ತ್ರಿ ಅವರನ್ನು ಪೈ.ಬಿ.ಎಂ.ಪುಷ್ಪಕ್‌ಗೌಡ 30 ಸೆಕೆಂಡ್‌ಗಳಲ್ಲಿ ಮಣಿಸಿದರು. ಪೈ.ಕೆ. ರವೀಂದ್ರ ಎದುರಾಳಿ ಪೈ.ಎಲ್.ಜಯಂತ್ ಅವರಿಗೆ 42 ಸೆಕೆಂಡ್‌ಗಳಲ್ಲಿ ಮತ್ತು ಪೈ.ಪುಷ್ಪ ವಿರುದ್ಧ ಪೈ.ಯಶಸ್ವಿನಿ 49 ಸೆಕೆಂಡ್‌ಗಳಲ್ಲಿ, ಪೈ.ಶ್ರೀನಿವಾಸ್ ವಿರುದ್ಧ ಪೈ.ವಿಶ್ವಾಸ್ ನಾಯಕ್ ಮತ್ತು ಪೈ.ಶ್ರೀನಿವಾಸ್ ವಿರುದ್ಧ ಪೈ.ವಿಶ್ವಾಸ್ ನಾಯಕ್ ಕೇವಲ 47 ಸೆಕೆಂಡ್‌ನಲ್ಲಿ ಗೆಲುವು ಸಾಧಿಸಿದರು.

ಪೈ.ಚಿನ್ಮಯ್ ಎದುರಾಳಿ ಪೈ.ಎಸ್.ಚಿನ್ನು ವಿರುದ್ಧ 1 ನಿಮಿಷ 40 ಸೆಕೆಂಡ್‌ಗಳಲ್ಲಿ, ಪೈ.ಎಂ.ಹೇಮಂತ್ ವಿರುದ್ಧ ಪೈ.ಎಲ್. ಪವನ್ 2 ನಿಮಿಷ 10 ಸೆಕೆಂಡ್‌ಗಳಲ್ಲಿ ಗೆಲುವು ಪಡೆದರೆ ಪೈ.ಸಂತೋಷ್ ಅವರು ಎದುರಾಳಿ ಪೈ.ಪ್ರಸಾದ್ ಜೊತೆ 3 ನಿಮಿಷ 40 ಸೆಕೆಂಡ್, ಪೈ.ಸೂರ್ಯ ಕಾಂತ್ ಎದುರಾಳಿ ಪೈ.ರವಿ ವಿರುದ್ಧ 6 ನಿಮಿಷ ಸೆಣಸಾಡಿ ಗೆಲುವು ಸಾಧಿಸಿದರು.

ಸಮಬಲ: ಪೈಲ್ವಾನರಾದ ಪಿ.ಆಜಾಮ್ –ವೈ.ತರುಣ್‌ಗೌಡ, ಎಂ.ಸುಬ್ರಹ್ಮಣ್ಯ– ಋಷಿಕೇಶ್, ರಕ್ಷಿತ್– ಚೇತನ್, ಕೆ.ಚರಣ್– ರಾಕೇಶ್ ನಾಯಕ, ಮೊಹಮ್ಮದ್ ಸಾದಿಕ್ –ಜಿ.ಶ್ರೀನಿವಾಸ್‌ಪ್ರಸಾದ್, ಎಂ.ಲವ– ಕೆ.ಕಿರಣ್, ಬಿ.ಎಂ.ಯುಕ್ತ–ವಿಷ್ಣು, ಬಿ.ಹರ್ಷ–ಸುದಿ, ಅಜಯ್–ನಿಶ್ಚಿತ್, ಹರೀಶ್–ಅಬಿ, ಭೈರಪ್ಪನಾಯಕ– ಯಾಸಿನ್, ವಿ.ಕಾರ್ತಿಕ್–ಎಂ.ಪ್ರೇಮ್ ಕುಮಾರ್ (ಪ್ರೇಮ್) ಮತ್ತು ಎಂ. ಪ್ರೀತಮ್–ಎಸ್.ಜೆ.ಸಂಪತ್‌ಕುಮಾರ್, ಚೇತನ್‌ಗೌಡ–ಸುಫಿಯನ್, ಚಂದ್ರು– ಸಚಿನ್, ವಿಕಾಸ್ ಚಟ್‌ಪಟ್–ಎಂ.ಪ್ರದೀಪ್, ವಿನಾಯಕ–ಮುರಳಿ, ಮನು–ಮೊಹ ಮ್ಮದ್ ವಾಸಿಕ್‌ಖಾನ್, ರವಿಕುಮಾರ್– ಆರ್.ಕುಶಾಲ್‌ಗೌಡ, ಎನ್.ರಮೇಶ್– ಕೆ.ಪಿ.ಚೇತನ್‌ಕುಮಾರ್, ಚೇತನ್– ಎಸ್.ಸಂತೋಷ್‌ನಾಯಕ್ ಪಟ್ಟಿಗೆ ಪ್ರತಿಪಟ್ಟು ಹಾಕಿ, ಸಮಬಲ ಸಾಧಿಸಿದ್ದ ರಿಂದ ಪಂದ್ಯಗಳು ಡ್ರಾ ಆದವು.

ಗೈರು–ಗೆಲುವು: ಪೈ.ಸಿ.ಎ.ಹೇಮಂತ್ ಗೈರಾಗಿದ್ದರಿಂದ ಪೈ.ಚಂದ್ರ, ಪೈ.ಮೊಹ ಮ್ಮದ್ ಮೊಯ್ನುದ್ದೀನ್ ಗೈರಾಗಿದ್ದರಿದ ಪೈ.ಎನ್.ಮಹದೇವನಾಯಕ, ಡಿ.ಮನೋಜ್ ಗೈರಾಗಿದ್ದರಿಂದ ಫ್ರಫುಲ್‌ಗೌಡ, ಮೊಹಮ್ಮದ್ ಝುನಕ್ ಖುರೇಶಿ ಗೈರಾಗಿದ್ದರಿಂದ ಜಿ.ಸಾಗರ್, ಪೈ.ಅನುಶ್ರೀ ಗೈರಾಗಿದ್ದರಿಂದ ಎದುರಾಳಿ ಪೈ.ಶ್ರೀರಕ್ಷ ಅವರನ್ನು ಜಯಶಾಲಿ ಎಂದು ಘೋಷಿಸಲಾಯಿತು.

ಸಾಹಸ ಪ್ರದರ್ಶನ: ವಿಜಯಪುರದ ರಮೇಶ್ ದಾನಪ್ಪ ಪಾಟೀಲ ಸಿಂದಗಿ ಮತ್ತು ಗಂಗಪ್ಪ ಶಿರೂರ ಅವರ ಸಾಹಸ ಪ್ರದರ್ಶನ, ಕುಸ್ತಿಪಟುಗಳು ಹಾಗೂ ಕ್ರೀಡಾಭಿಮಾನಿಗಳನ್ನು ನಿಬ್ಬೆರಗಾಗಿಸಿತು. ಗಂಗಪ್ಪ ಶಿರೂರ ಅವರು ಮರಳು ತುಂಬಿದ 250 ಕೆ.ಜಿ. ತೂಕದ ಗೋಣಿ ಚೀಲವನ್ನು ಯಾರ ಸಹಾಯವೂ ಇಲ್ಲದೆ ಎತ್ತಿದರೆ, ರಮೇಶ್ ದಾನಪ್ಪ ಪಾಟೀಲ ಅವರು 102 ಕೆ.ಜಿ.ತೂಕದ ಕಬ್ಬಿಣದ ರಾಡುಗಳನ್ನು ಮೇಲೆತ್ತಿ ಸಾಹಸ ಮೆರೆದರು.

ಕುಸ್ತಿ ವೀಕ್ಷಿಸಿದ ಸಚಿವ ಜಾರಕಿಹೊಳಿ: ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಮಂಗಳವಾರ ಗಂಟೆಗೂ ಹೆಚ್ಚು ಕಾಲ ದಸರಾ ಕುಸ್ತಿ ಪಂದ್ಯಗಳನ್ನು ವೀಕ್ಷಿಸಿ, ಪೈಲ್ವಾನರ ಬಣ್ಣಿಸಿದರು. ಮುಡಾ ಅಧ್ಯಕ್ಷ ಕೆ.ಮರೀಗೌಡ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ದಸರಾ ಕುಸ್ತಿ ಉಪ ಸಮಿತಿ ಉಪ ವಿಶೇಷಾಧಿಕಾರಿಯಾದ ಎಎಸ್‌ಪಿ ಎಲ್.ನಾಗೇಶ್ ಮತ್ತಿತರರಿದ್ದರು.

ಗೆದ್ದವರಿಗೆ ಬೆಳ್ಳಿ ಗದೆ–ನಗದು ಬಹುಮಾನ

ದಸರಾ ಕಂಠೀರವ ಪ್ರಶಸ್ತಿ ವಿಜೇತ ಪೈಲ್ವಾನ್‌ಗೆ ಒಂದೂಕಾಲು ಕೆಜಿ ಬೆಳ್ಳಿ ಗದೆ ಹಾಗೂ 15 ಸಾವಿರ ನಗದು ಬಹುಮಾನ, ದಸರಾ ಕೇಸರಿಗೆ ಒಂದು ಕೆಜಿ ಬೆಳ್ಳಿ ಗದೆ ಹಾಗೂ 12,500 ರೂ., ದಸರಾ ಕಿಶೋರ ಮತ್ತು ಕಿಶೋರಿಗೆ ಅರ್ಧ ಕೆಜಿ ಬೆಳ್ಳಿ ಗದೆ ಹಾಗೂ 10 ಸಾವಿರ ರೂ. ಹಾಗೂ ಮೈಸೂರು ದಸರಾ ಕುಮಾರ ವಿಜೇತರಿಗೆ ಮುಕ್ಕಾಲು ಕೆಜಿ ಬೆಳ್ಳಿ ಗದೆ ಹಾಗೂ 10 ಸಾವಿರ ರೂ. ನಗದು ಬಹುಮಾನ ದೊರಕಲಿದೆ. ಈ ಎಲ್ಲಾ ವಿಭಾಗದಲ್ಲೂ ದ್ವಿತೀಯ, ತೃತೀಯ ಹಾಗೂ ನಾಲ್ಕನೇ ಬಹುಮಾನವನ್ನೂ ನೀಡಲಾಗುತ್ತದೆ. ತೂಕದ ಅನುಗುಣವಾಗಿ ವಿವಿಧ ವಿಭಾಗಗಳಲ್ಲಿ 17 ವರ್ಷ ವಯೋಮಿತಿ ಯೊಳಗಿನ ಬಾಲಕರ ಹಾಗೂ ಬಾಲಕಿಯರ ಕುಸ್ತಿ ಪಂದ್ಯಾವಳಿಯೂ ನಡೆಯಲಿದೆ.

24 ಗಂಟೆಗಳ ಕಾಲ ವೈದ್ಯಕೀಯ ಸೇವೆ ನೀಡುತ್ತಿರುವ

ಕಾವೇರಿ ಆಸ್ಪತ್ರೆ ಕಾರ್ಯ ನಿಜಕ್ಕೂ ಶ್ಲಾಘನೀಯ

ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್



ಕಾರ್ಯಕ್ರಮವನ್ನು ಮೇಘಾಲಯ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್ ಉದ್ಘಾಟಿಸಿದರು.

ನಾನು ರಾಜಕಾರಣಿಯಾಗುತ್ತೇನೆ ಎಂದು ಕನಸಿನಲ್ಲೂ ಅಂದು ಕೊಂಡಿರಲಿಲ್ಲ. ರಾಜ್ಯದಲ್ಲಿ ನಾನು ಅನೇಕ ಹುದ್ದೆಗಳನ್ನು ಅಲಂಕರಿಸಿದ್ದೇನೆ. ಆದರೆ ರಾಜ್ಯದ ಋಣ ತೀರಿಸಲು ಆಗಲಿಲ್ಲ. ಪ್ರಸ್ತುತ ಮೇಘಾಲಯ ರಾಜ್ಯಪಾಲನಾಗಿದ್ದು, ಅವಧಿ ಮುಗಿದ ನಂತರ ನನ್ನ ತವರು ಕ್ಷೇತ್ರಕ್ಕೆ ಹಿಂತಿರುಗಿ ರಾಜ್ಯದ ಋಣ ತೀರಿಸುತ್ತೇನೆ. ಶ್ರದ್ಧೆ, ಛಲವಿದ್ದರೇ ಏನು ಬೇಕಾದರೂ ಸಾಧಿಸ ಬಹುದು. ನನಗೆ ಸಿಕ್ಕಿರುವ ಅಧಿಕಾರ ದುರುಪಯೋಗ ಮಾಡಿಕೊಳ್ಳದೇ ಅಲ್ಲಿನ ಗಿರಿಜನರಿಗೆ ಏನಾದರೂ ಒಳಿತು ಮಾಡಬೇಕು ಎನ್ನುವ ಆಶಯ ನನ್ನದಾಗಿದೆ.
- ಸಿ.ಹೆಚ್.ವಿಜಯಶಂಕರ್, ಮೇಘಾಲಯ ರಾಜ್ಯಪಾಲ.

ಹುಣಸೂರು, ಅ.8– ಮಾಜಿ ಸಿಎಂ ದಿ.ಡಿ.ದೇವರಾಜ ಅರಸರ ಕರ್ಮಭೂಮಿಯಲ್ಲಿ ಸಾಮಾನ್ಯ ಜನರಿಗೆ ಆರೋಗ್ಯ ಸೇವೆ ಒದಗಿಸಲು ಆರಂಭವಾಗಿದ್ದ ಆಸ್ಪತ್ರೆಯೇ ಬೇಡ ಎನ್ನುವ ನಾಯಕರಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ವಿಷಾದ ವ್ಯಕ್ತಪಡಿಸಿದರು.

ನಗರದ ಕಾವೇರಿ ಆಸ್ಪತ್ರೆಯಲ್ಲಿ ಆಯೋಜಿಸಿದ್ದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಮೇಘಾಲಯ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್ ಅವರಿಗೆ ನಾಗರಿಕ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರಸ್ತುತ ವೈದ್ಯಕೀಯ ಸೇವೆ ಪ್ರತಿಯೊಬ್ಬರಿಗೂ ಅನಿವಾರ್ಯ. ಹೀಗಾಗಿ ನಗರದಲ್ಲಿ ಹೈಟೆಕ್ ಆಸ್ಪತ್ರೆ ಪ್ರಾರಂಭಿಸಿ ಸಾರ್ವಜನಿಕರಿಗೆ ಗುಣಮಟ್ಟದ ಆರೋಗ್ಯ ಸೇವೆ ಒದಗಿಸಲು ಮುಂದಾದಾಗ ಕೆಲವರು ತಮ್ಮ ವೈಯಕ್ತಿಕ ಲಾಭಕ್ಕಾಗಿ ಆಸ್ಪತ್ರೆ ಉದ್ಘಾಟನೆಗೆ ತಡೆಯೊಡ್ಡಿದರು. ಇದರಿಂದ ಏನೂ ಪ್ರಯೋಜನವಾಗಲಿಲ್ಲ. ಬದಲಿಗೆ ಹುಣಸೂರು, ಪಿರಿಯಾಪಟ್ಟಣ, ಹೆಚ್.ಡಿ.ಕೋಟೆ, ಕೊಡಗು ಸೇರಿದಂತೆ ಸುತ್ತಮುತ್ತಲ ಸಾವಿರಾರು ಜನರಿಗೆ 24 ಗಂಟೆಗಳ ಕಾಲ ವೈದ್ಯಕೀಯ ಸೇವೆ ನೀಡುತ್ತಿರುವ ಕಾವೇರಿ ಆಸ್ಪತ್ರೆ ಕಾರ್ಯ ನಿಜಕ್ಕೂ ಶ್ಲಾಘನೀಯ ಎಂದರು.

ರಾಜ್ಯ ಸರ್ಕಾರ 5 ಉಚಿತ ಭಾಗ್ಯಗಳ ಬದಲಿಗೆ ಉಚಿತ ಶಿಕ್ಷಣ, ಆರೋಗ್ಯ, ಅನ್ನ ನೀಡಿದ್ದರೇ ರಾಜ್ಯ ಸುಭೀಕ್ಷವಾಗುತ್ತಿತ್ತು. ಅದನ್ನು ಬಿಟ್ಟು ಉಚಿತ ಭಾಗ್ಯಗಳನ್ನು ನೀಡಿ ಏನು ಸಾಧಿಸಿದಂತಾಯಿತು ಎಂದರು.

ಶಾಸಕ ಜಿ.ಡಿ.ಹರೀಶ್‌ಗೌಡ ಮಾತನಾಡಿ, ನಮ್ಮ ರಾಜ್ಯದ ರಾಜ್ಯಪಾಲರನ್ನು ಭೇಟಿ ಮಾಡಲು ಬಹಳ ನಿಯಮಗಳಿವೆ. ಆದರೆ ನಮ್ಮ ತಾಲೂಕಿನಿಂದ ಮೇಘಾಲಯದ ರಾಜ್ಯಪಾಲರಾಗಿ ನೇಮಕಗೊಂಡ ಸಿ.ಹೆಚ್.ವಿಜಯಶಂಕರ್ ಅವರು 2 ಬಾರಿ ಕ್ಷೇತ್ರಕ್ಕೆ ಭೇಟಿ ನೀಡಿ ಸನ್ಮಾನ ಸ್ವೀಕರಿಸಿರುವುದು ಸಂತಸದ ವಿಷಯ ಎಂದರು.

ಹುಣಸೂರಿನ ನೂತನ ಆಸ್ಪತ್ರೆ ಕಾಮಗಾರಿ ಕಳೆದ 5 ವರ್ಷಗಳಿಂದ ಪೂರ್ಣವಾಗದೇ ಅರ್ಧಕ್ಕೆ ನಿಂತಿತ್ತು. ಈ ಸಂಬಂಧ ನಾನು ವಿಧಾನಸಭೆಯಲ್ಲಿ ಚರ್ಚಿಸಿ ಕಾಮಗಾರಿಗೆ ಅಗತ್ಯವಿದ್ದ 9.7 ಕೋಟಿ ಮಂಜೂರು ಮಾಡಿಸಿದೆ. ಇದೀಗ ಉಳಿದ ಕಾಮಗಾರಿ ನಡೆಯುತ್ತಿದೆ. ಆಸ್ಪತ್ರೆ ಬಗ್ಗೆ ಕಾಳಜಿ ಇದ್ದಿದ್ದರೆ ಯಾವತ್ತೋ ಉದ್ಘಾಟನೆಯಾಗಬೇಕಿತ್ತು ಎಂದರು.

ಡಾ.ಲೋಹಿತ್ ಅವರು ವೈದ್ಯಕೀಯ ಸೇವೆ ಜೊತೆಗೆ ಸಾಮಾಜಿಕ ಕಳಕಳಿಯುಳ್ಳ ಕಾರ್ಯಕ್ರಮಗಳನ್ನು ಮಾಡುತ್ತಿದ್ದು, ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುತ್ತಿರುವುದು ಶ್ಲಾಘನೀಯ ಎಂದರು.

ಮೈಸೂರು ಮುಕ್ತ ವಿವಿ ಮನಃಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಮಂಜುನಾಥ್ ಮಾತನಾಡಿ, ಒಂದಾನೊಂದು ಕಾಲದಲ್ಲಿ ಹಳ್ಳಿ ಹಳ್ಳಿಗೆ ತೆರಳಿ ಜನರ ನಡುವೆ ರಾಜಿ ಪಂಚಾಯಿತಿ ಮಾಡಿ ಪಂಚಾಯ್ತಿ ಶಂಕರಪ್ಪ ಉರುಫ್ ಸಿಮೆಂಟ್ ಶಂಕರಪ್ಪ ಎಂದೇ ಹೆಸರಾಗಿದ್ದ ವಿಜಯಶಂಕರ್ ಅವರು ಮುಂದಿನ ದಿನಗಳಲ್ಲಿ ರಾಜಕೀಯವಾಗಿ ಬೆಳೆದು ಶಾಸಕ, ಸಚಿವ, ಸಂಸದರಾಗಿ ಹಲವು ಹುದ್ದೆಗಳನ್ನು ನಿರ್ವಹಿಸಿ ಇದೀಗ ಮೇಘಾಲಯ ರಾಜ್ಯಪಾಲರಾಗಿರುವುದು ಹೆಮ್ಮೆಯ ವಿಷಯವಾಗಿದೆ ಎಂದರು.

ಕಾವೇರಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಸಂಸ್ಥಾಪಕ ಡಾ.ಲೋಹಿತ್ ಮಾತನಾಡಿ, ನನ್ನ ತಾಲೂಕಿನ ಜನತೆಗೆ ಅತ್ಯಂತ ಗುಣಮಟ್ಟ ಚಿಕಿತ್ಸೆ ನೀಡುವುದು ನಮ್ಮ ಕರ್ತವ್ಯವಾಗಿದೆ ಎಂದರು. ಇದೇ ವೇಳೆ ಪಿಯುಸಿಯಲ್ಲಿ ಶೇ.90 ರಷ್ಟು ಅಂಕ ಪಡೆದಿರುವ 114 ವಿದ್ಯಾರ್ಥಿಗಳು, 58 ಎಸ್‌ಎಸ್‌ಎಲ್‌ಸಿ, 17 ಇಂಜಿನಿಯ ರಿಂಗ್, ವೈದ್ಯಕೀಯ ವಿಭಾಗದ 10 ಮಂದಿ ವಿದ್ಯಾರ್ಥಿಗಳು ಹಾಗೂ ಮೂವರು ಕ್ರೀಡಾಪಟುಗಳನ್ನು ಮೇಘಾಲಯ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್, ಶಾಸಕ ಜಿ.ಡಿ.ಹರೀಶ್‌ಗೌಡ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಿದರು.

ಕಾರ್ಯಕ್ರಮಕ್ಕೂ ಮುನ್ನಾ ನಗರದ ಡಿ.ದೇವರಾಜ ಅರಸು ಪುತ್ಥಳಿಗೆ ಮಾಲಾರ್ಪಣೆ ಮಾಡಿ ಅಲ್ಲಿಂದ ಮೆರವಣಿಗೆಯಲ್ಲಿ ರಾಜ್ಯಪಾಲರನ್ನು ಕರೆತರಲಾಯಿತು. ಈ ವೇಳೆ ಮಹರ್ಷಿ ವಾಲ್ಮೀಕಿ ಮಠದ ಪ್ರಸನ್ನಾನಂದಪುರಿ ಸ್ವಾಮೀಜಿ, ಗಾವಡಗೆರೆ ಮಠದ ನಟರಾಜ ಸ್ವಾಮೀಜಿ, ಬಿಇಓ ರೇವಣ್ಣ, ನಗರಸಭೆ ಅಧ್ಯಕ್ಷ ಶರವಣ, ಉಪಾಧ್ಯಕ್ಷೆ ಆಶಾ, ಸದಸ್ಯರಾದ ಗಣೇಶ್ ಕುಮಾರಸ್ವಾಮಿ, ಸತೀಶ, ಕೃಷ್ಣರಾಜಗುಪ್ತ, ರಾಧ, ಗೀತಾ, ಪ್ರಿಯಾಂಕಾ ಥಾಮಸ್, ನಿವೃತ್ತ ಪ್ರಾಧ್ಯಾಪಕ ನಬೀಜಾನ್, ಗಣೇಶ್ ಗೌಡ, ರಂಜಿತಾ, ಪರ್ವೀನ್ ತಾಜ್, ಮುಖಂಡರಾದ ಬಸವಲಿಂಗಯ್ಯ, ಹೆಚ್.ಎಂ.ಫಜ಼ಲುಲ್ಲಾ, ಸರ್ದಾರ್, ಗಣೇಶ್ ಇನ್ನಿತರರಿದ್ದರು.

ಉತ್ತಮ ಸೇವೆಯೊಂದಿಗೆ ಸಾರ್ವಜನಿಕ ಆಸ್ಪತ್ರೆ ಮಾದರಿಯಾಗಲಿ

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಎಸ್‌ಎಂಆರ್ ಪ್ರಕಾಶ್



ಸಾರ್ವಜನಿಕ ಆಸ್ಪತ್ರೆ ನೂತನ ಆಡಳಿತಾಧಿಕಾರಿ ಡಾ.ಅಭಿಲಾಶ್ ಅವರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಅ.8– ಸಾರ್ವಜನಿಕರಿಗೆ ಉತ್ತಮ ಆರೋಗ್ಯ ಸೇವೆ ನೀಡುವ ಮೂಲಕ ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಮಾದರಿಯಾಗಬೇಕು ಎಂದು ತಾಲೂಕು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಎಸ್‌ಎಂಆರ್ ಪ್ರಕಾಶ್ ತಿಳಿಸಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆ ನೂತನ ಆಡಳಿತಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಿದ ಶಸ್ತ್ರ ತಜ್ಞ ವೈದ್ಯ ಡಾ.ಅಭಿಲಾಶ್ ಅವರನ್ನು ಸನ್ಮಾನಿಸಿ ಮಾತನಾಡಿದ ಅವರು, ಬಹುತೇಕ ಆರ್ಥಿಕವಾಗಿ ಹಿಂದುಳಿದ ಜನರೇ ಹೆಚ್ಚಾಗಿ ಸಾರ್ವಜನಿಕ ಆಸ್ಪತ್ರೆಗೆ ಬರುತ್ತಾರೆ. ನೊಂದ ಜನರ ನೋವುಗಳಿಗೆ ಸ್ಪಂದಿಸಿ ವೈದ್ಯರು ಉತ್ತಮ ಚಿಕಿತ್ಸೆ ಒದಗಿಸಿದರೆ ಅವರು ಹರಸಿ ಹಾರೈಸುತ್ತಾರೆ. ಅವರನ್ನು ಗುಣಪಡಿಸಿದಾಗ ಆಸ್ಪತ್ರೆ, ವೈದ್ಯರ ಮೇಲೆ ಪ್ರೀತಿ, ವಿಶ್ವಾಸ ಹೆಚ್ಚಾಗುತ್ತದೆ. ಇದು ಉತ್ತಮ ಸೇವೆಯ ಫಲ. ಈ ಹಿನ್ನೆಲೆಯಲ್ಲಿ ಜನರ ಆರೋಗ್ಯ ರಕ್ಷಣೆಗೆ ಅಗತ್ಯ ಸಹಕಾರ ನೀಡುವಂತೆ ಮನವಿ ಮಾಡಿದರು. ಸನ್ಮಾನ ಸ್ವೀಕರಿಸಿ ಮಾತನಾಡಿದ ಆಸ್ಪತ್ರೆ ನೂತನ ಆಡಳಿತ ವೈದ್ಯಾಧಿಕಾರಿ ಡಾ.ಅಭಿಲಾಶ್, ಸಾರ್ವಜನಿಕರು ಹಾಗೂ ಸಂಘ ಸಂಸ್ಥೆಗಳು ನಮಗೆ ಸಂಪೂರ್ಣ ಸಹಕಾರ ನೀಡಿ ಸಲಹೆ ಸೂಚನೆಗಳನ್ನು ನೀಡಿದರೆ ಅದನ್ನು ಅಳವಡಿಸಿಕೊಂಡು ಬರುವ ರೋಗಿಗಳಿಗೆ ಶಕ್ತಿಮೀರಿ ಸೇವೆ ಸಲ್ಲಿಸಲಾಗುವುದು ಎಂದು ಭರವಸೆ ನೀಡಿದರು.

ಸರ್ಕಾರಿ ಆಸ್ಪತ್ರೆ ಎಂದರೆ ಸಾರ್ವಜನಿಕರ ಆಸ್ಪತ್ರೆ. ನಮಗೆ ಎಷ್ಟು ಜವಾಬ್ದಾರಿ ಇದೆಯೋ ಅಷ್ಟೇ ಜವಾಬ್ದಾರಿ ಸಾರ್ವಜನಿಕರಿಗೆ ಇದೆ ಎಂದು ಅರಿತು ನಮ್ಮಗಳ ಜೊತೆ ಸಹಕರಿಸಿದರೆ ಜಿಲ್ಲೆಯಲ್ಲಿ ಮಾದರಿ ಆಸ್ಪತ್ರೆಯಾಗಿ ಪರಿವರ್ತಿಸಬಹುದು. ಸಿಎಂ ಸಿದ್ದರಾಮಯ್ಯ, ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಂಸದ ಸುನೀಲ್ ಬೋಸ್ ಹಾಗೂ ಎಂಎಲ್‌ಸಿ ಡಾ.ಯತೀಂದ್ರ ಅವರುಗಳ ಕ್ಷೇತ್ರವಾಗಿರುವುದರಿಂದ ಅವರ ಸಹಕಾರ ಪಡೆದು ಹೆಚ್ಚಿನ ಅನುದಾನ ತಂದು ಆಸ್ಪತ್ರೆಯಲ್ಲಿರುವ ಸಮಸ್ಯೆಗಳನ್ನು ಬಗೆಹರಿಸಿ ಹೆಚ್ಚಿನ ಅಭಿವೃದ್ಧಿಪಡಿಸಲಾಗುವುದು ಎಂದರು.

ಈ ವೇಳೆ ವೈದ್ಯರಾದ ಡಾ.ಮಲ್ಲಿಕಾರ್ಜುನಸ್ವಾಮಿ, ನಿರ್ದೇಶಕರಾದ ಶಂಭುದೇವನಪುರ ಸುಗಂಧ, ರಾಜ್, ಹೊಸೂರುಹುಂಡಿ ತೋಂಟೇಶ್, ಕುಮಾರ್, ಕೋಣಹಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ಜಗದೀಶ್, ಉಪನ್ಯಾಸಕ ಕುಮಾರಸ್ವಾಮಿ, ಕೆಇಬಿ ಸಿದ್ದಲಿಂಗಸ್ವಾಮಿ, ಹಿರಿಯೂರು ಪ್ರಕಾಶ್, ಅಂಗಡಿ ನಾಗೇಶ್, ವಕೀಲ ಜ್ಞಾನೇಂದ್ರಮೂರ್ತಿ, ಅಕ್ಕಿ ನಾಗಪ್ಪ ಇತರರಿದ್ದರು.

ಪಾನಮುಕ್ತ ರಾಷ್ಟ್ರ ನಿರ್ಮಾಣದಲ್ಲಿ

ಶ್ರೀಕ್ಷೇತ್ರ ಧರ್ಮಸ್ಥಳ ಯೋಜನೆ ಅವಿರತ ಪ್ರಯತ್ನ

ಗಾಂಧಿ ಸ್ಮರಣೆ, ನವಜೀವನೋತ್ಸವದಲ್ಲಿ ಮಾಜಿ ಶಾಸಕ ಕೆ.ಮಹದೇವ್



ಕಾರ್ಯಕ್ರಮವನ್ನು ಮಾಜಿ ಶಾಸಕ ಕೆ.ಮಹದೇವ್ ಉದ್ಘಾಟಿಸಿದರು.

ಬೆಟ್ಟದಪುರ, ಅ.8– ಮಹಾತ್ಮ ಗಾಂಧೀಜಿ ಅವರ ಪಾನಮುಕ್ತ ರಾಷ್ಟ್ರ ನಿರ್ಮಾಣಕ್ಕೆ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಅವಿರತ ಪ್ರಯತ್ನಿಸುತ್ತಿದೆ ಎಂದು ಮಾಜಿ ಶಾಸಕ ಕೆ.ಮಹದೇವ್ ತಿಳಿಸಿದರು.

ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ನಡೆದ ಗಾಂಧಿ ಸ್ಮರಣೆ ಮತ್ತು ನವಜೀವನೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮದ್ಯಪಾನ ಬಿಡಿಸುವುದು ಒಂದು ದೊಡ್ಡ ಸಾಹಸ. ಆ ಪ್ರಯತ್ನವನ್ನು ಮಹಾತ್ಮ ಗಾಂಧೀಜಿಯವರು ಮಾಡಿದರು. ಇದೀಗ ಶ್ರೀಕ್ಷೇತ್ರ ಧರ್ಮಸ್ಥಳ ಸಂಘದವರು ಈ ಸಾಹಸಕ್ಕೆ ಕೈಹಾಕಿ ದುಶ್ಚಟವಿರುವ ವ್ಯಕ್ತಿಗಳನ್ನು ಬದಲಿಸುವ ಕಾರ್ಯ ಮಾಡುತ್ತಿದ್ದಾರೆ. ಅಲ್ಲದೇ ಮಹಿಳೆಯರು ಉಪಕಸುಬು ಕೈಗೊಳ್ಳಲು ಅವರಿಗೆ ತರಬೇತಿ ನೀಡಿ ಮಹಿಳೆಯರ ಆರ್ಥಿಕಾಭಿವೃದ್ಧಿಗೆ ಹೆಚ್ಚಿನ ಒತ್ತು ನೀಡುತ್ತಿದೆ ಎಂದರು. ಪಿರಿಯಾಪಟ್ಟಣ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕಿ ಮಮತಾ ಮಾತನಾಡಿ, ಧರ್ಮ ಸ್ಥಳ ಸಂಸ್ಥೆ ಕೇವಲ ಹಣಕಾಸು ವ್ಯವಹಾರ ನಡೆಸುತ್ತಿಲ್ಲ. ಜೊತೆಗೆ ಮಹಿಳೆಯರಿಗೆ ಸಂಸ್ಕಾರ ಮತ್ತು ಅಭಿವೃದ್ಧಿಯ ಶಿಕ್ಷಣ ಸಂಸ್ಥೆಯಾಗಿದೆ ಎಂದರು.

ಈ ಸಂಸ್ಥೆ ಮಹಿಳೆಯರ ಸಮಸ್ಯೆಗಳಿಗೆ ಪರಿಹಾರ, ಆರ್ಥಿಕ ಸಹಕಾರ ಸೇರಿದಂತೆ ಸಮಾಜದ ಪರಿವರ್ತನೆ ಬಗ್ಗೆ ಹೆಚ್ಚಿನ ಕಾಳಜಿ ವಹಿಸುತ್ತಿದೆ ಎಂದ ಅವರು ಅತಿಯಾದ ಮದ್ಯ ಸೇವಿಸುತ್ತಿದ್ದವರು ಇಂದು ಮದ್ಯ ಸೇವನೆ ಬಿಟ್ಟಿದ್ದಾರೆ. ಅಂತಹವರನ್ನು ಅಭಿನಂದಿಸುತ್ತೇವೆ. ಜನಪ್ರತಿನಿಧಿಗಳು ಮಾಡುವ ಕೆಲಸವನ್ನು ಈ ಸಂಸ್ಥೆ ಮಾಡುತ್ತಿದೆ. ಆದ್ದರಿಂದ ಈ ಸಂಘದ ಜೊತೆ ನಾವಿದ್ದರೆ ಸಮಾಜ ಪರಿವರ್ತನೆಯಾಗುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದರು.

ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಮಾಜಿ ರಾಜ್ಯಾಧ್ಯಕ್ಷ ಕೆ.ಸತೀಶ್ ಹೊನ್ನಾವಳ್ಳಿ ಮಾತನಾಡಿದರು. ಕೊಡಗು ಜನಜಾಗೃತಿ ವೇದಿಕೆ ಉಪಾಧ್ಯಕ್ಷ ರಂಗಸ್ವಾಮಿ, ದೇವರಾಜ್, ಬೆಟ್ಟದಪುರ ಗ್ರಾಪಂ ಅಧ್ಯಕ್ಷ ರಾಜಶೇಖರ್, ಉಪಾಧ್ಯಕ್ಷೆ ಲಕ್ಷ್ಮಿ, ಕೊಡಗು ಜಿಲ್ಲಾ ನಿರ್ದೇಶಕಿ ಲೀಲಾವತಿ, ಯೋಜನಾಧಿಕಾರಿಗಳಾದ ಸಂತೋಷ್, ರವಿ, ಜಿನ್ನಪ್ಪ, ಅತ್ತಿಗೋಡು ಶಾಲೆ ಮುಖ್ಯಶಿಕ್ಷಕ ನಾಗಶೆಟ್ಟಿ, ಮುಖಂಡರಾದ ರಾಜೇಂದ್ರ, ಪರಶಿವಮೂರ್ತಿ, ಗಿರಿಗೌಡ, ಮಹದೇವ್, ರಾಮಚಂದ್ರ, ಜ್ಞಾನವಿಕಾಸ ಕೇಂದ್ರದ ಸಮನ್ವಯಾಧಿಕಾರಿ ಮಮತಾ ಸೇರಿದಂತೆ ಸಂಘದ ಸೇವಾ ಪ್ರತಿನಿಧಿಗಳು ಹಾಗೂ ಸದಸ್ಯರು ಹಾಜರಿದ್ದರು.

ಅ.17ಕ್ಕೆ ವಿಜೃಂಭಣೆಯ ವಾಲ್ಮೀಕಿ ಜಯಂತಿ



ಪೂರ್ವಭಾವಿ ಸಭೆಯಲ್ಲಿ ಶಾಸಕ ಡಿ.ರವಿಶಂಕರ್ ಮಾತನಾಡಿದರು.

ಕೆ.ಆರ್.ನಗರ, ಅ.8– ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಅ.17 ರಂದು ವಿಜೃಂಭಣೆ, ಅರ್ಥಪೂರ್ಣವಾಗಿ ಆಚರಿಸಲು ಪಟ್ಟಣದ ಮಿನಿ ವಿಧಾನಸೌಧದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ತೀರ್ಮಾನಿಸಲಾಯಿತು.

ಶಾಸಕ ಡಿ.ರವಿಶಂಕರ್ ಮಾತನಾಡಿ, ಅಂದು ಬೆಳಗ್ಗೆ 9.30ಕ್ಕೆ ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿಯಿಂದ ವಾಲ್ಮೀಕಿಯವರ ಭಾವಚಿತ್ರವನ್ನು ಅಲಂಕೃತಗೊಂಡ ಬೆಳ್ಳಿರಥದಲ್ಲಿಟ್ಟು ಮಂಗಳವಾದ್ಯ, ಪೂರ್ಣಕುಂಭ ಕಳಸ, ವಿವಿಧ ಕಲಾತಂಡಗಳೊಂದಿಗೆ ಮೆರವಣಿಗೆ ಮಾಡಲಾಗುವುದು. ಸಮಾಜದ ಬಂಧುಗಳು ಸಕಾಲಕ್ಕೆ ಆಗಮಿಸಬೇಕು ಎಂದರು. ನಂತರ ಪುರಸಭೆ ಬಯಲು ರಂಗಮಂದಿರದಲ್ಲಿ ನಡೆಯುವ ವೇದಿಕೆ ಕಾರ್ಯಕ್ರಮವನ್ನು ಮಧ್ಯಾಹ್ನ 2 ಗಂಟೆಯೊಳಗೆ ಮುಗಿಸಲು ಎಲ್ಲರೂ ಸಹಕರಿಸಬೇಕು. ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳು ಮತ್ತು ಸಾಧಕರಿಗೆ ಸನ್ಮಾನ ಮಾಡಲಾಗುತ್ತದೆ ಎಂದರು.

ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲು ಸಮಾಜದ ಬಂಧುಗಳು ಸಾಲಿಗ್ರಾಮ ಮತ್ತು ಕೆ.ಆರ್.ನಗರ ತಾಲೂಕುಗಳ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಸೇರಿದಂತೆ 8 ಮಂದಿಯನ್ನು ಜಯಂತಿ ಆಚರಣಾ ಸಮಿತಿ ಸದಸ್ಯರನ್ನಾಗಿ ಮಾಡಿಕೊಂಡು ವಾಲ್ಮೀಕಿ ಸಮುದಾಯ ಭವನದಲ್ಲಿ ಸಭೆ ನಡೆಸಿ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡು ನನ್ನ ಗಮನಕ್ಕೆ ತರಬೇಕೆಂದರು.

ಸಾಲಿಗ್ರಾಮ ತಾಲೂಕು ಅಧ್ಯಕ್ಷ ಸಿ.ಸಿ.ಮಹದೇವ್, ಕೆ.ಆರ್.ನಗರ ತಾಲೂಕು ಅಧ್ಯಕ್ಷ ನರಸಿಂಹನಾಯಕ, ಶಿಕ್ಷಕರ ಸಂಘದ ನಿರ್ದೇಶಕ ಕೃಷ್ಣನಾಯಕ, ಶಿಕ್ಷಕ ಪ್ರಕಾಶ್, ಶಿಕ್ಷಣ ಸಂಯೋಜಕ ದಾಸಪ್ಪ ಹಂಪಾಪುರ ವಿಎಸ್‌ಎಸ್‌ಎನ್ ನಿರ್ದೇಶಕ ದೇವರಾಜು, ತಹಸೀಲ್ದಾರ್ ಜಿ.ಸುರೇಂದ್ರಮೂರ್ತಿ ಜಯಂತಿ ಆಚರಣೆಗೆ ಸಲಹೆ ಸೂಚನೆ ನೀಡಿದರು.

ಸಭೆಯಲ್ಲಿ ಸಾಲಿಗ್ರಾಮ ತಾಲೂಕು ತಹಸೀಲ್ದಾರ್ ನರಗುಂದ್, ಕಸಾಪ ಅಧ್ಯಕ್ಷ ಜಿ.ಡಿಂಡಿಮಶಂಕರ್, ಉಪಾಧ್ಯಕ್ಷ ಕೃಷ್ಣಯ್ಯ, ರೈತ ಮುಖಂಡರಾದ ಎಂ.ಜೆ.ಕುಮಾರ್, ತಿಮ್ಮಪ್ಪ, ಆದಿಜಾಂಬವ ಸಂಘದ ಅಧ್ಯಕ್ಷ ಎಂ.ಲೋಕೇಶ್, ಎ.ಟಿ.ಶಿವಣ್ಣ, ದಿನೇಶ್, ಬೆಟ್ಟನಾಯಕ, ಕೃಷ್ಣನಾಯಕ, ನಾಗರಾಜ ನಾಯಕ, ರಾಜನಾಯಕ, ಬಿ.ಹೆಚ್.ಕುಮಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಎಸ್.ಮಹದೇವ್, ಉದಯ ಶಂಕರ್, ವಕ್ತಾರ ಸೈಯದ್ ಜಾಬೀರ್ ಸೇರಿದಂತೆ ಅಧಿಕಾರಿಗಳು ಹಾಜರಿದ್ದರು.

ನಾಳೆ ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಜಯಂತಿ ಆಚರಣೆ



ತಿ.ನರಸೀಪುರ, ಅ.8– ಜಗದ್ಗುರು ಡಾ.ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಜಯಂತಿ ಆಚರಣಾ ಸಮಿತಿಯಿಂದ ಅ.10 ರಂದು ಪಟ್ಟಣದಲ್ಲಿ ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಮಹಾ ಸ್ವಾಮಿಗಳ 109ನೇ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಗುವುದು ಎಂದು ವೀರಶೈವ ಯುವ ಮುಖಂಡ ಬೆನಕನಹಳ್ಳಿ ಶಿವಮಲ್ಲಪ್ಪ ತಿಳಿಸಿದರು.

ಪಟ್ಟಣದ ವಿದ್ಯೋದಯ ಕಾಲೇಜಿನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮವನ್ನು ಪಟ್ಟಣದ ವಿದ್ಯೋದಯ ಕಾಲೇಜು ಸಭಾಂಗಣದಲ್ಲಿ ಆಯೋಜಿಸಲಾಗಿದ್ದು, ಅಂದು ಬೆಳಗ್ಗೆ 10 ಗಂಟೆಗೆ ಖಾಸಗಿ ಬಸ್ ನಿಲ್ದಾಣದ ಬಳಿ ಕಾರ್ಯಕ್ರಮದ ಸಾನಿಧ್ಯ ವಹಿಸಲಿರುವ ಸುತ್ತೂರು ಮಠಾಧ್ಯಕ್ಷ ಶಿವರಾತ್ರಿ ದೇಶೀಕೇಂದ್ರ ಸ್ವಾಮಿಗಳನ್ನು ಸ್ವಾಗತಿಸಿ, ಮೆರವಣಿಗೆ ಮೂಲಕ ವಿದ್ಯೋದಯ ಕಾಲೇಜು ವೃತ್ತಕ್ಕೆ ಕರೆ ತರಲಾಗುವುದು. ಬಳಿಕ ಕಾಲೇಜು ವೃತ್ತದಲ್ಲಿ ತಾತ್ಕಾಲಿಕವಾಗಿ ನಿರ್ಮಿಸಲಾಗುವ ರಾಜೇಂದ್ರ ಶ್ರೀಗಳ ಪುತ್ಥಳಿಗೆ ಪುಷ್ಪನಮನ ಸಲ್ಲಿಸಿ ಸಭಾ ಕಾರ್ಯಕ್ರಮಕ್ಕೆ ಕರೆತರಲಾಗುತ್ತದೆ ಎಂದರು. ಕಾರ್ಯಕ್ರಮವನ್ನು ವಾಟಾಳು ಮಠದ ಡಾ.ಸಿದ್ದಲಿಂಗಶಿವಾಚಾರ್ಯಸ್ವಾಮಿ ಉದ್ಘಾಟಿಸಲಿದ್ದು, ಗ್ರಾಮ ವಿದ್ಯೋದಯ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಕೆ.ಪಿ.ಮಹದೇವಸ್ವಾಮಿ ಅಧ್ಯಕ್ಷತೆ ವಹಿಸಲಿದ್ದಾರೆ. ಮದ್ಗಾರ ಲಿಂಗಯ್ಯನಹುಂಡಿ ವಿರಕ್ತ ಮಠದ ಶ್ರೀಗೌರಿ ಶಂಕರಸ್ವಾಮಿ ಸೇರಿದಂತೆ ತಾಲೂಕಿನ ಹರಗುರು ಚರ ಮೂರ್ತಿಗಳ ದಿವ್ಯ ಸಮ್ಮುಖದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಮುಖ್ಯ ಅತಿಥಿಗಳಾಗಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಹಿನಕಲ್ ಬಸವರಾಜು, ವಕೀಲ ಸಿ.ಎಂ.ಜಗದೀಶ್ ಆಗಮಿಸಲಿದ್ದಾರೆ ಎಂದರು.

ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷರು, ಜಾಗತಿಕ ಲಿಂಗಾಯತ ಮಹಾಸಭಾ ಅಧ್ಯಕ್ಷರು–ಪದಾಧಿಕಾರಿಗಳು, ಸ್ಪಟಿಕ ಸಹಕಾರ ಸಂಘ, ಅಕ್ಕಮಹಾದೇವಿ ಸಹಕಾರ ಸಂಘ, ಕಸಾಪರಿ ಸದಸ್ಯರು, ಪದಾಧಿಕಾರಿಗಳು ಸೇರಿದಂತೆ ತಾಲೂಕಿನ ಎಲ್ಲಾ ಸಮುದಾಯ ಹಾಗೂ ಜನಾಂಗದ ನಾಯಕರು ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಅವರು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಹಲವಾರ ಪರಮೇಶ್ ಪಟೇಲ್, ತೊಟ್ಟವಾಡಿ ಚಂದ್ರಧರ, ಕುಮಾರಸ್ವಾಮಿ ಹಾಜರಿದ್ದರು.

ನಾಡು, ನುಡಿ ವಿಚಾರದಲ್ಲಿ ಒಟ್ಟಾಗಿ ಕೆಲಸ ಮಾಡಿ

ನಮ್ಮ ಕರ್ನಾಟಕ ಸೇನೆ ರಾಜ್ಯಾಧ್ಯಕ್ಷ ಬಸವರಾಜ ಪಡುಕೋಟೆ ಕರೆ



ಕಾರ್ಯಕ್ರಮವನ್ನು ಬಸವರಾಜ ಪಡುಕೋಟೆ ಉದ್ಘಾಟಿಸಿದರು.

ತಿ.ನರಸೀಪುರ, ಅ.8– ನಾಡು, ನುಡಿ ಮತ್ತು ಭಾಷೆ ವಿಚಾರದಲ್ಲಿ ಪ್ರತಿಯೊಬ್ಬರೂ ಒಂದಾಗಿ ಕೆಲಸ ಮಾಡಬೇಕು ಎಂದು ನಮ್ಮ ಕರ್ನಾಟಕ ಸೇನೆ ರಾಜ್ಯಾಧ್ಯಕ್ಷ ಬಸವರಾಜ ಪಡುಕೋಟೆ ಕರೆ ನೀಡಿದರು.

ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಬಳಿಯ ಶ್ರೀಬಳ್ಳೇಶ್ವರ ದೇವಸ್ಥಾನದ ಆವರಣದಲ್ಲಿ ನಡೆದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಆಟೋ ಚಾಲಕರಿಗೆ ಏನೇ ಸಮಸ್ಯೆಗಳಿದ್ದರೂ ನಮ್ಮ ಕರ್ನಾಟಕ ಸೇನೆ ನಿಮ್ಮ ಜೊತೆ ಇರುತ್ತದೆ. ಇಂದು ಕನ್ನಡ ಉಳಿದಿದೆ ಎಂದರೆ ಅದು ಆಟೋ ಚಾಲಕರಿಂದ ಮಾತ್ರ. ಚಾಲಕರು ಮದ್ಯಪಾನ ಮಾಡಿ ಆಟೋ ಚಾಲನೆ ಮಾಡಬಾರದು. ಆಟೋ ಚಾಲಕರು ಮಕ್ಕಳಿಗೆ ಗುಣಮಟ್ಟದ ವಿದ್ಯಾಭ್ಯಾಸ ಕೊಡಿಸಬೇಕು. ಆ ಮೂಲಕ ಅವರನ್ನು ಸಮಾಜದಲ್ಲಿ ಉತ್ತಮ ಪ್ರಜೆಯನ್ನಾಗಿ ಮಾಡಿ. ಮನೆಯಲ್ಲಿ ನಿಮ್ಮ ಮಕ್ಕಳಿಗೆ ಕನ್ನಡ ಅಭಿಮಾನ ಬೆಳೆಸಿ. ಕುವೆಂಪು, ಮೈಸೂರು ಮಹಾರಾಜರು, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ, ಇಮ್ಮಡಿ ಪುಲಕೇಶಿ, ಮಹರ್ಷಿ ವಾಲ್ಮೀಕಿ ಅವರಂತಹ ಮಹನೀಯರ ಬಗ್ಗೆ ಮನವರಿಕೆ ಮಾಡಿಕೊಟ್ಟು ಎಲ್ಲರಂತೆ ನೀವು ಬದುಕಬೇಕು ಎಂದು ಸಲಹೆ ನೀಡಿದರು.

ಅನಾಥ ಶವಗಳ ಮುಕ್ತಿದಾತ ಡಾ.ಎಂ.ಮಾದೇಶ್ ಮಾತನಾಡಿ, ತಿ.ನರಸೀಪುರಕ್ಕೆ 35 ವರ್ಷಗಳ ಹಿಂದೆ ಕೇವಲ ಒಂದೇ ಒಂದು ಆಟೋ ಬಂತು. ಇಂದು 500ಕ್ಕೂ ಹೆಚ್ಚು ಆಟೋಗಳಿವೆ. ಪ್ರತಿಯೊಬ್ಬ ಆಟೋ ಚಾಲಕರು ಶಿಸ್ತಿನ ಸಿಪಾಯಿಯಂತೆ ಸಮವಸ್ತ್ರ ಧರಿಸಬೇಕು. ಪ್ರಯಾಣಿಕರೊಂದಿಗೆ ಸೌಜನ್ಯದಿಂದ ವರ್ತಿಸಬೇಕು. ಅಲ್ಲದೆ ಡಿಎಲ್ ಮತ್ತು ಎಫ್‌ಸಿ, ಇನ್‌ಶೂರೆನ್ಸ್, ಪರ್ಮಿಟ್ ಅನ್ನು ಸಕಾಲಕ್ಕೆ ನವೀಕರಿಸಿಕೊಳ್ಳಬೇಕು. ಅನಗತ್ಯ ವಾಗಿ ಹೆಚ್ಚಿನ ಪ್ರಯಾಣಿಕರನ್ನು ಹತ್ತಿಸಿಕೊಳ್ಳಬಾರದು. ಸಂಚಾರಿ ನಿಯಮ ಪಾಲಿಸಿ, ಎಲ್ಲೆಂದರಲ್ಲಿ ಆಟೋ ಪಾರ್ಕಿಂಗ್ ಮಾಡಬೇಡಿ, ಮದ್ಯಪಾನ ಮಾಡಿ ವಾಹನ ಚಲಾಯಿಸಬೇಡಿ, ಪೊಲೀಸರು ಕಾರಣ ವಿಲ್ಲದೆ ನಿಮ್ಮನ್ನು ಪ್ರಶ್ನಿಸುವುದಿಲ್ಲ ನಿಮ್ಮಲ್ಲಿ ಎಲ್ಲಾ ದಾಖಲೆಗಳು ಸರಿಯಾಗಿರಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾ ಅಧ್ಯಕ್ಷ ಮುರುಗನ್, ತಾಲೂಕು ಉಪಾಧ್ಯಕ್ಷರು ಎಂ.ಗಣೇಶ್, ಪ್ರಚಾರ ಸಮಿತಿ ಅಧ್ಯಕ್ಷ ಬಿ.ಬಸವರಾಜು, ಪ್ರಧಾನ ಕಾರ್ಯದರ್ಶಿ ಎಸ್.ರಮೇಶ್, ಗೌರವಾಧ್ಯಕ್ಷ ಅಂಬರೀಶ್, ಸಂಘಟನಾ ಕಾರ್ಯದರ್ಶಿ ಮಹದೇವ ನಾಯಕ, ರಾಮು, ಸುಭಾಷ್, ರವಿ, ನಾಗೇಂದ್ರ ಕೃಷ್ಣ, ಲೋಕಿ, ಮಹಿಳಾ ಘಟಕದ ಅಧ್ಯಕ್ಷೆ ಮಂಜುಳ, ಲಕ್ಷ್ಮಿ ಇನ್ನಿತರರಿದ್ದರು.

ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ನಂಜನಗೂಡು, ಅ.8– ಸಮಾಜ ಕಲ್ಯಾಣ ಇಲಾಖೆಯಿಂದ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕ್ಕಾಗಿ ಅರ್ಹ ಪ.ಜಾತಿ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಹರು https//sw.kar.nic.in ಮೂಲಕ ಅರ್ಜಿ ಸಲ್ಲಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಭೀಮರಾವ್ ವಡ್ಡಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಡವರ ಸ್ವಾಭಿಮಾನದ ಬದುಕಿಗಾಗಿ ಗ್ಯಾರಂಟಿ ಜಾರಿ

ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ



ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಸರಗೂರು, ಅ.8– ಬಡವರ, ಶೋಷಿತರ ಪರ ಕೆಲಸ ಮಾಡುವುದೇ ನಮ್ಮ ಸರ್ಕಾರದ ಧ್ಯೇಯವಾಗಿದ್ದು, ಈ ವರ್ಗಗಳ ಸ್ವಾಭಿಮಾನದ ಬದುಕಿಗಾಗಿಯೇ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರಲಾಯಿತು ಎಂದು ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ಸರಗೂರು, ಹೆಚ್.ಡಿ.ಕೋಟೆ ತಾಲೂಕು ಆದಿ ಕರ್ನಾಟಕ ಮಹಾಸಭಾ ಆಶ್ರಯದಲ್ಲಿ ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆದ ಪ್ರತಿಭಾ ಪುರಸ್ಕಾರ ಹಾಗೂ ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಅವರು, ಜಾತಿ ಧರ್ಮವೆಂಬ ಭೇದವಿಲ್ಲದೆ ಎಲ್ಲಾ ಜನಾಂಗದವರ ಒಳಿತು ಬಯಸಿಯೇ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರಲಾಯಿತು. ಹಿಂದುಳಿದ ಹಾಗೂ ಶೋಷಿತರ ಬದುಕು ಹಸನುಗೊಳಿಸುವುದೇ ನಮ್ಮ ಮುಖ್ಯ ಗುರಿ ಎಂದರು.

ಶಿಕ್ಷಣದಿಂದ ಮಾತ್ರ ಅಭಿವೃದ್ಧಿ ಸಾಧ್ಯ. ಶೋಷಣೆ ವಿರುದ್ಧ ಹೋರಾಟ ಮಾಡಬೇಕಾದರೆ ಶಿಕ್ಷಣ ಅತಿ ಮುಖ್ಯ. ಆದ್ದರಿಂದ ಯಾವ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು. ಪೋಷಕರು ತಮ್ಮ ಮಕ್ಕಳಿಗೆ ಕಡ್ಡಾಯ ಶಿಕ್ಷಣ ದೊರಕುವಂತೆ ಮಾಡಬೇಕು ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಆಶಯಗಳು ಈಡೇರುವಂತಾಗಬೇಕು. ಆಗ ಮಾತ್ರ ಸರ್ವಾಂಗೀಣ ಅಭಿವೃದ್ಧಿ ಸಾಧ್ಯ ಎಂದರಲ್ಲದೆ ತಾಲೂಕುಗಳ ಏನೇ ಸಮಸ್ಯೆಯಿದ್ದರೂ ಪರಿಹರಿಸಲಾಗುವುದು ಎಂದರು.

ಜಾತಿಗಣತಿ ಕುರಿತು ಅಪಸ್ವರ ಎತ್ತಿರುವುದು ಸರಿಯಲ್ಲ. ಜಾತಿ ಗಣತಿಯಿಂದ ಬಡವರು ಹಾಗೂ ಹಿಂದುಳಿದವರನ್ನು ಗುರುತಿಸಲು ಸಾಧ್ಯ. ಅಂತಹವರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಸಾಧ್ಯವಾಗುತ್ತದೆ. ಆರ್ಥಿಕ ಹಾಗೂ ಸಾಮಾಜಿಕ ಸಮಾನತೆ ಸಾಕಾರಗೊಳ್ಳಲೂ ಅನುವಾಗುತ್ತದೆ ಎಂದರಲ್ಲದೇ ಸರಗೂರಲ್ಲಿ 5 ಕೋಟಿ ವೆಚ್ಚದಲ್ಲಿ ಅಂಬೇಡ್ಕರ್ ಭವನ ನಿರ್ಮಿಸುವ ಭರವಸೆ ನೀಡಿ ನಿವೇಶನ ಗುರುತಿಸಲು ತಿಳಿಸಿದರು.

ಸಂಸದ ಸುನೀಲ್ ಬೋಸ್ ಮಾತನಾಡಿ, ಮಕ್ಕಳ ಪ್ರತಿಭೆ ಗುರುತಿಸಿ ಪುರಸ್ಕರಿಸುವ ಕಾರ್ಯವಾಗಬೇಕು. ಅದು ಮತ್ತಷ್ಟು ಸಾಧನೆಗೆ ಪ್ರೇರಕ ಶಕ್ತಿಯಾಗುತ್ತದೆ. ಹೆಣ್ಣು ಮಕ್ಕಳ ಶಿಕ್ಷಣಕ್ಕೂ ಹೆಚ್ಚು ಆದ್ಯತೆ ನೀಡಬೇಕು. ಮೂಢನಂಬಿಕೆಗಳಿಂದ ಮುಕ್ತರಾಗಿ ಉತ್ತಮ ಜೀವನ ರೂಪಿಸಿಕೊಳ್ಳುವುದು ಪ್ರತಿಯೊಬ್ಬರ ಧ್ಯೇಯವಾಗಬೇಕು ಎಂದರು.

ಶಾಸಕ ಅನಿಲ್ ಮಾತನಾಡಿ, ಶಿಕ್ಷಣ, ಸಂಘಟನೆ, ಹೋರಾಟದಿಂದ ಮಾತ್ರ ಹಿಂದುಳಿದ ವರ್ಗಗಳ ಏಳ್ಗೆ ಸಾಧ್ಯ. ಎಲ್ಲಾ ಸಮುದಾಯಗಳ ಹಿತಚಿಂತನೆಯೊಂದಿಗೆ ತಾಲೂಕಿನ ಅಭಿವೃದ್ಧಿಗೆ ಅನುದಾನ ದೊರಕಿಸಿಕೊಡಲಾಗುವುದು. ನಮ್ಮದೇ ಸರ್ಕಾರವಿರುವುದರಿಂದ ಯಾವುದೇ ತೊಡಕುಗಳಿಲ್ಲದೆ ಕಾರ್ಯ ನಿರ್ವಹಿಸಲಾಗುವುದು ಎಂದರು.

ಸಮಾರಂಭದಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಮೈಸೂರಿನ ಉರಿಲಿಂಗಿ ಪೆದ್ದಿಮಠದ ಜ್ಞಾನ ಪ್ರಕಾಶ ಸ್ವಾಮೀಜಿ, ಸಾರನಾಥ ಬುದ್ಧ ವಿಹಾರ ಮಾತೆ ಭಿಕ್ಕುಣಿ ಗೌತಮಿ ಬಂತೇಜಿ ಮಾತನಾಡಿದರು. ತಹಸೀಲ್ದಾರ್ ರುಕಿಯಾ ಬೇಗಂ, ಆದಿಕರ್ನಾಟಕ ಮಹಾಸಭಾ ತಾಲೂಕು ಅಧ್ಯಕ್ಷ ಶಿವಣ್ಣ, ಕೋಟೆ ಅಧ್ಯಕ್ಷ ಹೆಚ್.ಸಿ.ನರಸಿಂಹಮೂರ್ತಿ, ಗೌರವಾಧ್ಯಕ್ಷ ಬಸವರಾಜು, ಚಂದ್ರಶೇಖರಮೂರ್ತಿ, ಕಾರ್ಯದರ್ಶಿ ಮಲ್ಲೇಶ್, ರಮೇಶ್, ಉಪಾಧ್ಯಕ್ಷ ರಂಗಸ್ವಾಮಿ, ಮಲ್ಲಿಕಾರ್ಜುನ, ಖಜಾಂಚಿ ನಾಗರಾಜು, ಜಿಪಂ ಮಾಜಿ ಸದಸ್ಯರಾದ ಹೆಚ್.ಸಿ.ಮಂಜುನಾಥ್, ವೆಂಕಟಸ್ವಾಮಿ, ಭಾಗ್ಯಲಕ್ಷ್ಮೀ, ಅಕ್ರಮ ಸಕ್ರಮ ಸದಸ್ಯ ಶಿವಶಂಕರನ್, ಎಪಿಎಂಸಿ ಮಾಜಿ ಅಧ್ಯಕ್ಷ ಸಿದ್ದರಾಜು, ಪಪಂ ಸದಸ್ಯ ಚಲುವಕೃಷ್ಣ, ಯಜಮಾನರಾದ ಭೋಗಯ್ಯ, ಸಣ್ಣಪ್ಪ, ರಂಗಯ್ಯ, ಮಾಜಿ ಯಜಮಾನರಾದ ಇದೀಯಪ್ಪ, ಭೀಮಯ್ಯ, ಹನುಮಂತಯ್ಯ, ದೇವಯ್ಯ, ಮುಖಂಡರಾದ ಪುಟ್ಟಯ್ಯ, ಎಂ.ಡಿ.ಮಂಚಯ್ಯ, ಶಿವರಾಜು, ಮುದ್ದುಮಲ್ಲಯ್ಯ, ಶಿವಣ್ಣ, ಸೋಮೇಶ್, ರಾಜಣ್ಣ, ಬಿಲ್ಲೇಶ್, ಸಣ್ಣಸ್ವಾಮಿ, ವಕೀಲ ಜವರಯ್ಯ, ಉಮೇಶ್, ಶಿವಣ್ಣ, ತಿಮ್ಮಯ್ಯ ಸೇರಿದಂತೆ ಇನ್ನಿತರರಿದ್ದರು.

ರೈತರು ಜಯ ಸಿಗುವವರೆಗೂ ಹಿಂಜರಿಯಬಾರದು

ರೈತ ಸಂಘ, ಹಸಿರು ಸೇನೆ ಉದ್ಘಾಟಿಸಿದ ಶಾಸಕ ಅನಿಲ್



ನೂತನ ಸಂಘವನ್ನು ಶಾಸಕ ಅನಿಲ್ ಉದ್ಘಾಟಿಸಿದರು.

ಹೆಚ್.ಡಿ.ಕೋಟೆ, ಅ.8– ಯಾವುದೇ ಸರ್ಕಾರ ಅಧಿಕಾರದಲ್ಲಿದ್ದರೂ ರೈತರು ಹೋರಾಟದಲ್ಲಿ ಜಯ ಸಿಗುವವರೆಗೂ ಹಿಂಜರಿಯಬಾರದು. ರಾಜ್ಯದಲ್ಲಿ ರೈತರ ಸೇನೆ ಇದೆ ಎಂದರೆ ಅದಕ್ಕೆ ಪ್ರೊ.ನಂಜುಂಡಸ್ವಾಮಿ ಅವರೇ ಕಾರಣ ಎಂದು ಶಾಸಕ ಅನಿಲ್ ತಿಳಿಸಿದರು. ಪಟ್ಟಣದ ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಕರ್ನಾಟಕ ರೈತ ಸಂಘ ಹಾಗೂ ಹಸಿರು ಸೇನೆ ತಾಲೂಕು ಘಟಕದ ನೂತನ ಸಂಘ ಉದ್ಘಾಟಿಸಿ ಮಾತನಾಡಿದ ಅವರು, ಈ ಹಿಂದೆ ರೈತರು ಮರದ ಕಳಗೆ ಕುಳಿತು ಸಭೆಗಳನ್ನು ಮಾಡು ತ್ತಿದ್ದರು. ಆದರೆ ಈಗ ಒಂದು ಭವನದಲ್ಲಿ ಸಭೆ ಕರೆದು ಸಂಘಟನೆ ಮಾಡುವಷ್ಟರ ಮಟ್ಟಿಗೆ ನಮ್ಮ ರೈತರು ಬೆಳೆದಿದ್ದಾರೆ. ಅದಕ್ಕೆ ಪ್ರೊ.ನಂಜುಂಡಸ್ವಾಮಿ ಅವರ ಶ್ರಮವೇ ಕಾರಣ ಎಂದರು.

ಇದೇ ವೇಳೆ ನೂತನ ಪದಾಧಿಕಾರಿಗಳಿಗೆ ಹಸಿರು ಶಾಲು ಹೊದಿಸಿ ಅಭಿನಂದಿಸಲಾಯಿತು. ಸಂಘದಿಂದ ಶಾಸಕ ಅನಿಲ್ ಅವರನ್ನು ಸನ್ಮಾನಿಸಲಾಯಿತು. ತಹಸೀಲ್ದಾರ್ ಶ್ರೀನಿವಾಸ್, ರಾಜ್ಯ ಅಧ್ಯಕ್ಷ ಶರಣಪ್ಪ ದೊಡ್ಡಮನಿ, ಗೌರವಾಧ್ಯಕ್ಷ ಸುಬ್ರಹ್ಮಣ್ಯಗೌಡ, ತಾಲೂಕು ಘಟಕ ಅಧ್ಯಕ್ಷ ಗಂಗಾಧರ್, ಉಪಾಧ್ಯಕ್ಷ ಮಹದೇವ್, ಕಾರ್ಯದರ್ಶಿ ತಸ್ಲೀಮ್, ಸಹ ಕಾರ್ಯದರ್ಶಿ ತಸೀಮ್, ಮಹೇಶ ರೈತ ಮುಖಂಡರು ಪಾಲ್ಗೊಂಡಿದ್ದರು.

ಜನರ ಅತೀವ ಮೆಚ್ಚುಗೆಗೆ ಪಾತ್ರವಾದ ವಿವಿಧ ದಸರಾ ವೇದಿಕೆಗಳಲ್ಲಿನ ನೃತ್ಯ, ಗಾಯನ, ಸಂಗೀತ, ಪೌರಾಣಿಕ ನಾಟಕ ಕಾರ್ಯಕ್ರಮಗಳು


ನಾದಬ್ರಹ್ಮ ಸಭಾಂಗಣದಲ್ಲಿ ಬೆಂಗಳೂರಿನ ವಿದುಷಿ ಮೇಘನಾ ಅಯ್ಯಂಗಾರ್ ನೇತೃತ್ವ ತಂಡದ ಭರತನಾಟ್ಯ ಪ್ರದರ್ಶಿಸಿತು.


ಬಳ್ಳಾರಿಯ ಶ್ರೀಮಾರುತಿ ತೊಗಲುಗೊಂಬೆ ಟ್ರಸ್ಟ್ ಕಲಾವಿದರಿಂದ ತೊಗಲು ಗೊಂಬೆಯಾಟ

ಮೈಸೂರು,ಅ.8(ಎಸ್‌ಪಿಎನ್)– ಬಳ್ಳಾರಿ ಶ್ರೀ ಮಾರುತಿ ತೊಗಲುಗೊಂಬೆ ಟ್ರಸ್ಟ್‌ನ ಕಲಾವಿದರು ನಡೆಸಿಕೊಟ್ಟ ತೊಗಲು ಗೊಂಬೆಯಾಟ.., ಸುಪ್ರಿಯ ಟಿ.ಭಟ್ ಅವರಿಂದ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ..., ಮೈಸೂರಿನ ಮನೋಜ್ ಮತ್ತು ತಂಡ ಪ್ರಸ್ತುತಪಡಿಸಿದ 'ಶ್ರೀರಾಮ ಪಟ್ಟಾಭಿಷೇಕ' ಪೌರಾಣಿಕ ನಾಟಕ..., ಬೆಂಗಳೂರಿನ ವಿದುಷಿ ಮೇಘನಾ ಅಯ್ಯಂಗಾರ್ ಪ್ರದರ್ಶಿಸಿದ 'ನವದುರ್ಗಿ' ಅವತಾರ ನೃತ್ಯರೂಪಕ ಪ್ರೇಕ್ಷಕರ ಮನಗೆದ್ದವು.

ಮೈಸೂರಿನ ವಿವಿಧ ವೇದಿಕೆಯಲ್ಲಿ ಮಂಗಳವಾರ ದಸರಾ ಮಹೋತ್ಸವದಲ್ಲಿ ದೇಶದ ನಾನಾ ಭಾಗಗಳಿಂದ ಬಂದಿದ್ದ ಕಲಾವಿದರು ವೈವಿಧ್ಯಮಯ ಕಲೆ, ನಾಟಕ, ಸಂಗೀತ, ನೃತ್ಯ ಸೇರಿದಂತೆ ವಿವಿಧ ಕಲೆಗಳನ್ನು ಪ್ರದರ್ಶಿಸಿ, ಮೈಸೂರು ದಸರಾಗೆ ಮೆರುಗು ತಂದಿದ್ದಾರೆ.

ಮಹಿಷಾಸುರ ಮರ್ಧಿನಿ ನೃತ್ಯರೂಪಕ: ನಾದಬ್ರಹ್ಮ ಸಭಾಂಗಣದಲ್ಲಿ ಬೆಂಗಳೂರು ಲಾಸ್ಯ ನೃತ್ಯ ಕ್ಷೇತ್ರದ ವಿದುಷಿ ಮೇಘನಾ ಅಯ್ಯಂಗಾರ್ ಮತ್ತು ತಂಡದ ಕಲಾವಿದರು, ಪ್ರಸ್ತುತಪಡಿಸಿದ 'ನವದುರ್ಗಿ' ಅವತಾರದ 'ಮಹಾಶಕ್ತಿ ಮಹೇಶ್ವರಿ.. ಮಹಿಷಾಸುರ ಮರ್ಧಿನಿ' ನೃತ್ಯರೂಪಕವನ್ನು ಪ್ರೇಕ್ಷಕರು ಕಣ್ತುಂಬಿಕೊಂಡರು. ನಂತರ ರಾಮನಗರದ ಸಿದ್ದಪ್ಪಾಜಿ ಮತ್ತು ತಂಡದ ಕಲಾವಿದರು ಪ್ರಸ್ತುತ ಪಡಿಸಿದ ಡೊಳ್ಳುಕುಣಿತ, ಮೈಸೂರಿನ ಆನಂದ ಮತ್ತು ತಂಡ ಪ್ರದರ್ಶಿಸಿದ ಕಂಸಾಳೆ, ಮೈಸೂರಿನ ಎಚ್.ಕೆ.ರವೀಂದ್ರ ತಂಡದ ಕಲಾವಿದರು ಸುಗಮ ಸಂಗೀತ, ಬೆಂಗಳೂರಿನ ಕೆ.ಎಚ್.ಮೋನಿಷಾ ತಂಡದ ಕಲಾವಿದರು ಭರತನಾಟ್ಯ, ಮೈಸೂರಿನ ಪದ್ಮಪಾಣಿ ಲಲಿತಾ ಕಲಾ ಅಕಾಡೆಮಿ ನಾರಾಯಣ ಸ್ವಾಮಿ ತಂಡದವರು ಭಕ್ತಿಗೀತೆಗಳನ್ನು ಹಾಡಿದರು.

ಶ್ರೀರಾಮನ ಪಟ್ಟಾಭಿಷೇಕ: ಪುರಭವನದಲ್ಲಿ ಮೈಸೂರಿನ ಮನೋಜ್ ತಂಡ ಪ್ರದರ್ಶಿಸಿದ 'ಶ್ರೀರಾಮ ಪಟ್ಟಾಭಿಷೇಕ' ಪೌರಾಣಿಕ ನಾಟಕ, ರಾಮನಗರದ ಶಿವಪಾರ್ವತಿ ಕಲಾಭಿವೃದ್ಧಿ ಟ್ರಸ್ಟ್ ತಂಡ 'ಕುರುಕ್ಷೇತ್ರ' ನಾಟಕ, ಬೆಂಗಳೂರು ಭುವನೇಶ್ವರಿ ಕಲಾಸಂಘ ಪ್ರದರ್ಶಿಸಿದ 'ಮೀನಿನ ಹೆಜ್ಜೆ' ನಾಟಕ ಪ್ರೇಕ್ಷಕರ ಮನಗೆದ್ದವು.

ವಿಶೇಷ ಗಮನ ಸೆಳೆದ ತೊಗಲು ಗೊಂಬೆಯಾಟ: ರಾಮಕೃಷ್ಣನಗರದ ರಮಾ ಗೋವಿಂದ ರಂಗಮಂದಿರದಲ್ಲಿ ಬಳ್ಳಾರಿಯ ಶ್ರೀಮಾರುತಿ ತೊಗಲುಗೊಂಬೆ ಟ್ರಸ್ಟ್ ಕಲಾವಿದರು ಪ್ರದರ್ಶಿಸಿದ ತೊಗಲುಗೊಂಬೆಯಾಟದಲ್ಲಿ 'ಶ್ರೀರಾಮನ ಪಟ್ಟಾಭಿಷೇಕ' ಎಲ್ಲರ ಗಮನಸೆಳೆಯಿತು. ನಂತರ ಸಾಗರದ ವಿದುಷಿ ಪಿ.ಜಿ.ಸಹನಾ ನಡೆಸಿಕೊಟ್ಟ ಕುವೆಂಪು ರಚಿತ 'ಬೃಂದಾವನಕ್ಕೆ ಹೋಗುವ ಬಾರ ಸಖಿ', ಗೋಪಾಲಕೃಷ್ಣ ಅಡಿಗರು ಕವಿತೆ 'ಹೊಸ ಹಾದಿಯನು ಹಿಡಿದು ನಡೆಯಣ್ಣ ಮುಂದೆ'... ಕವಿತೆ ಗಾಯನ ಎಲ್ಲರ ಮೆಚ್ಚುಗೆ ಗಳಿಸಿತು.


ಧಾರವಾಡದ ವಿದುಷಿ ಸುಪ್ರಿಯ ಟಿ.ಭಟ್ಟ ತಂಡ ನಡೆಸಿಕೊಟ್ಟ ಸಂಗೀತ ಗಾಯನ

ನಂತರ ಮಂಡ್ಯದ ಸ್ಪಂದನ ಸಾಂಸ್ಕೃತಿಕ ಪರಿಷತ್ತು ಕಲಾವಿದರು ಪ್ರಸ್ತುತ ಪಡಿಸಿದ, ವಸುದೇಂದ್ರ ರಚನೆಯ, ಯುವ ಸಾಹಿತಿ ಸತೀಶ್ ಜವರೇಗೌಡ ಸಾರಥ್ಯದಲ್ಲಿ ಮೂಡಿ ಬಂದ 'ನಮ್ಮಮ್ಮ ಅಂದ್ರೆ ನಂಗಿಷ್ಟ' ನಾಟಕ ಎಲ್ಲರ ಗಮನ ಸೆಳೆಯಿತು. ಈ ನಾಟಕಕ್ಕೆ ಸುಪ್ರೀತ್ ಮತ್ತು ಭ್ರಮರ ಸಂಗೀತ ಸಂಯೋಜಿಸಿ, ಮಂಡ್ಯ ಚಂದ್ರು ಬೆಳಕು ವ್ಯವಸ್ಥೆ ಮಾಡಿದ್ದಾರೆ. ನಂತರ ಕಲಾವಿದ ಶಿವರಾಮಯ್ಯ ತಂಡ ನಡೆಸಿಕೊಟ್ಟ 'ಚಂಡೇವಾದನ' ಎಲ್ಲರ ಗಮನ ಸೆಳೆಯಿತು.

ರಾಮಕೃಷ್ಣನಗರದ ನಟನ ಕಲಾ ಮಂದಿರದಲ್ಲಿ ಪ್ರದರ್ಶನಗೊಂಡ 'ಗೊರೂರು' ನಾಟಕ ಎಲ್ಲರ ಗಮನ ಸೆಳೆಯಿತು. ಅಲ್ಲದೆ, ಧಾರವಾಡದ ವಿದುಷಿ ಸುಪ್ರಿಯ ಟಿ.ಭಟ್ಟ ನಡೆಸಿಕೊಟ್ಟ 'ಗುರುವೇ' ಶಾಸ್ತ್ರೀಯ ಗಾಯನ ಎಲ್ಲರ ಗಮನ ಸೆಳೆಯಿತು.

ಜತೆಗಿರುವನ ಚಂದಿರ ನಾಟಕ: ಹಿರಿಯ ಕಲಾವಿದ ಹುಲುಗಪ್ಪ ಕಟ್ಟೀಮನಿ ನಿರ್ದೇಶನದ 'ಜತೆಗಿರುವನು ಚಂದಿರ' ನಾಟಕ, ಮೈಸೂರು ರಂಗವಲ್ಲಿ ಸಂಸ್ಥೆಯ ಕಲಾವಿದರು ಪ್ರದರ್ಶಿಸಿದ ಪ್ರತಿಜ್ಞಾ ಸ್ವಪ್ನ ನಾಟಕ, ಚನ್ನಸಂಗಮೇಶ್ವರ ಕಲಾ ಮತ್ತು ಸಾಂಸ್ಕೃತಿಕ ಸಂಘದ ಕಲಾವಿದರು ವಿವಿಧ ಜನಪದ ಗೀತೆಗಳನ್ನು ಹಾಡಿದರು.

ಅತ್ಯುತ್ತಮ ಕಿರುಚಿತ್ರಗಳಿಗೆ ಪ್ರಶಸ್ತಿ ಪ್ರದಾನ


ದಿಲೀಪ್ ಕುಮಾರ್ ನಿರ್ದೇಶನದ 'ಪೋಲಾರ್' ಕಿರುಚಿತ್ರಕ್ಕೆ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಪ್ರಶಸ್ತಿ ವಿತರಿಸಿದರು.

ಮೈಸೂರು, ಅ.8(ಎಸ್‌ಪಿಎನ್)– ದಸರಾ ಚಲನ ಚಿತ್ರೋತ್ಸವ ಉಪ ಸಮಿತಿ ವತಿಯಿಂದ ಏರ್ಪಡಿಸಿದ್ದ ಕಿರುಚಿತ್ರ ಪ್ರದರ್ಶನದ ಬಹುಮಾನ ವಿತರಣೆಯನ್ನು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ ಮಹದೇವಪ್ಪ ಮಾಡಿದರು.


ಮಾಲ್ ಆಫ್ ಮೈಸೂರಿನ ಐನಾಕ್ಸ್ ಚಿತ್ರಮಂದಿರದಲ್ಲಿ ಹಮ್ಮಿಕೊಂಡಿದ್ದ ದಸರಾ ಚಲನ ಚಿತ್ರೋತ್ಸವ ಸಮಿತಿಯ ವತಿಯಿಂದ ಹಮ್ಮಿಕೊಂಡಿದ್ದ ಅತ್ಯುತ್ತಮ ಕಿರುಚಿತ್ರಗಳಿಗೆ ಬಹುಮಾನವನ್ನು ವಿತರಿಸಿ, ನಂತರ ಮಾತನಾಡಿ, ದಸರಾ ಮಹೋತ್ಸವದ ಕಿರುಚಿತ್ರ ಸ್ಪರ್ಧೆಗೆ ಹಲವು ಸಿನಿಮಾ ಪ್ರದರ್ಶನ ಕಂಡಿವೆ. ಇದು ದಸರಾ ಮಹೋತ್ಸವ ಯಶಸ್ವಿಗೆ ಕಾರಣವಾಗಿದೆ. ಪ್ರಶಸ್ತಿ ಸಿಗುವುದು ಬಿಡುವುದು ಮುಂದಿನ ಲೆಕ್ಕಾಚಾರ. ಆದರೆ, ಮೊದಲು ಭಾಗವಹಿಸುವುದು ಮುಖ್ಯ ಎಂದರು.

ದಸರಾ ಚಲನಚಿತ್ರೋತ್ಸವ ಸಮಿತಿಯ ಉಪ ವಿಶೇಷಾಧಿಕಾರಿ ಡಾ.ಕೆ.ಎನ್. ಬಸವರಾಜ್ ಮಾಹಿತಿ ನೀಡುತ್ತಾ, ಕಿರುಚಿತ್ರ ಸ್ಪರ್ಧೆಗೆ 73 ಚಿತ್ರಗಳು ಭಾಗವಹಿಸಿದ್ದವು. 4 ಜನರ ತೀರ್ಪುಗಾರರ ತಂಡ ಕಿರುಚಿತ್ರಗಳನ್ನು ವೀಕ್ಷಿಸಿ ಆಯ್ಕೆ ಮಾಡಿದ್ದಾರೆ ಎಂದರು.

ದಿಲೀಪ್ ಕುಮಾರ್ ನಿರ್ದೇಶನದ ಪೋಲಾರ್(ಪ್ರ), ಅಭಿಜಿತ್ ಪುರೋಹಿತ್ ನಿರ್ದೇಶನದ ಲಕ್ಷ್ಮಿ (ದ್ವಿ), ಎಸ್.ಪಿ. ಪವನ್ ನಿರ್ದೇಶನದ 'ಅನ್ವಾನ್ಟೆಡ್ ಕಿಡ್'(ತೃ) ಬಹುಮಾನ ಪಡೆದರೆ. ಸ್ಟ್ಯಾನಿ ಜಾಯ್‌ಸನ್ ನಿರ್ದೇಶನದ 'ತ್ರಿಕಾಲಂ' ಚಿತ್ರಕ್ಕೆ ಉತ್ತಮ ಸಂಕಲನಕಾರ ಹಾಗೂ ಕೃತಾರ್ಥ್ ಮಂಡೆಕುಟ್ಟಂಡ ನಿರ್ದೇಶನದ 'ವರ್ತಕಾಲಿ' ಚಿತ್ರಕ್ಕೆ ಉತ್ತಮ ಛಾಯಾಗ್ರಾಹಕ ಪ್ರಶಸ್ತಿ ಲಭಿಸಿದೆ.

ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಅವರು ಇಂದು ಸಂಜೆ ಮಾಲ್ ಆಫ್ ಮೈಸೂರಿನ ಐನಾಕ್ಸ್‌ನಲ್ಲಿ 'ಕನ್ನಡ ಸಿನಿಮಾ ಬೆಳೆದು ಬಂದ ಹಾದಿ' ಕುರಿತು ಫೋಟೋ ಪ್ರದರ್ಶನ ವೀಕ್ಷಿಸಿದರು.

ಕಾರ್ಯಕ್ರಮದಲ್ಲಿ ಲೋಕೋಪಯೋಗಿ ಇಲಾಖೆಯ ಸಚಿವರಾದ ಸತೀಶ್ ಜಾರಕಿಹೊಳಿ, ಚಲನಚಿತ್ರ ನಟರಾದ ಮಂಡ್ಯ ರಮೇಶ್, ವಿಧಾನ ಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ, ದಸರಾ ಚಲನ ಚಿತ್ರೋತ್ಸವ ಸಮಿತಿ ಉಪಾಧ್ಯಕ್ಷರಾದ ಕಾಶಿನಾಥ್, ಬೃಂದ ಕೃಷ್ಣೇಗೌಡ, ರಮೇಶ್, ಸಯ್ಯದ್ ಅಬ್ರಹಾಂ, ತೀರ್ಪುಗಾರರಾದ ಪ್ರೊ ಸ್ವಪ್ನಾ, ಸಮಿತಿಯ ಕಾರ್ಯಾಧ್ಯಕ್ಷ ರಂಗೇಗೌಡ, ಸಮಿತಿ ಕಾರ್ಯದರ್ಶಿ ಟಿ.ಕೆ.ಹರೀಶ್ ಹಾಗೂ ಸಮಿತಿಯ ಸದಸ್ಯರುಗಳು ಉಪಸ್ಥಿತರಿದ್ದರು.


ಛಾಯಾಚಿತ್ರ ಪ್ರದರ್ಶನವನ್ನು ಜಿಲ್ಲಾಧಿಕಾರಿ ಜೆ.ಲಕ್ಷ್ಮೀಕಾಂತ ರೆಡ್ಡಿ ವೀಕ್ಷಿಸಿದರು.

ತುಮಕೂರು ನಿಲ್ದಾಣಕ್ಕೆ ಸಿದ್ಧಗಂಗಾ ಶ್ರೀ ಹೆಸರು: ಪ್ರಧಾನಿಗೆ ಸಚಿವ ಸೋಮಣ್ಣ ಮನವಿ

ನವದೆಹಲಿ: ತುಮಕೂರು ರೈಲು ನಿಲ್ದಾಣದ ಅಭಿವೃದ್ಧಿಗೆ 82 ಕೋಟಿ ಮಂಜೂರಾಗಿದೆ. ಈ ನಿಲ್ದಾಣಕ್ಕೆ ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮೀಜಿ ಹೆಸರನ್ನು ಇರಿಸಬೇಕು ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮನವಿ ಮಾಡಿದರು.

ನವದೆಹಲಿಯಲ್ಲಿ ಪ್ರಧಾನಿ ಅವರನ್ನು ಮಂಗಳವಾರ ಭೇಟಿ ಮಾಡಿದ ಸೋಮಣ್ಣ ಸುಮಾರು 30 ನಿಮಿಷ ಚರ್ಚಿಸಿದರು. ಕಳೆದ ಮೂರು ತಿಂಗಳಲ್ಲಿ ಕರ್ನಾಟಕದ ರೈಲ್ವೆ ಅಭಿವೃದ್ಧಿ ಕುರಿತು ತೆಗೆದುಕೊಂಡ ಕ್ರಮಗಳ ಕುರಿತು ಮಾಹಿತಿ ನೀಡಿದರು.

ತುಮಕೂರು–ರಾಯದುರ್ಗ ರೈಲ್ವೆ ಮಾರ್ಗದ ಭೂಸ್ವಾಧೀನ ಪ್ರಕ್ರಿಯೆಯು ಮೂರು ತಿಂಗಳಲ್ಲಿ ಶೇ. 90ರಷ್ಟು ಪೂರ್ಣಗೊಂಡಿದೆ. ಮೂರು ತಿಂಗಳಲ್ಲಿ ಎಲ್ಲ ಜಿಲ್ಲೆಗಳಿಗೆ ಪ್ರವಾಸ ಮಾಡಿ ರೈಲ್ವೆಯ ಪ್ರಗತಿ ಪರಿಶೀಲನೆ ಮಾಡಲಾಗಿದೆ ಎಂದು ಸಚಿವರು ತಿಳಿಸಿದರು. ತುಮಕೂರು ಜಿಲ್ಲೆಯ ಅಭಿವೃದ್ಧಿಯ ಕುರಿತು ಕೆಲವು ವಿಶೇಷ ಪ್ರಸ್ತಾವನೆಗಳನ್ನು ನೀಡಿದ ಅವರು ಕ್ಷೇತ್ರಕ್ಕೆ ವಿಶೇಷ ಅನುದಾನ ನೀಡುವಂತೆ ಪ್ರಧಾನಿ ಅವರಿಗೆ ಕೋರಿದರು.

ತುಮಕೂರು–ರಾಯದುರ್ಗ ಮತ್ತು ತುಮಕೂರು–ಚಿತ್ರದುರ್ಗ–ದಾವಣಗೆರೆ ರೈಲು ಮಾರ್ಗವನ್ನು 2027ರ ಜೂನ್‌ನಲ್ಲಿ ಲೋಕಾರ್ಪಣೆ ಮಾಡಲು ತುಮಕೂರಿಗೆ ಆಗಮಿಸುವಂತೆ ಪ್ರಧಾನಮಂತ್ರಿಗಳಿಗೆ ಮನವಿ ಮಾಡಿದರು.

ಪ್ರಧಾನಿ ಮೋದಿಗೆ ಮೋಡಿ ಮಾಡಿದ್ದ ಸ್ಯಾಕ್ಸೊಫೋನ್ ಮಾಂತ್ರಿಕ

ಮೈಸೂರು,ಅ.8(ಎಸ್‌ಪಿಎನ್)– ಕಳೆದ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಪ್ರಚಾರಕ್ಕೆ ಆಗಮಿಸಿ, ವಿಮಾನ ಹತ್ತಲು ಹೊರಡುವ ಸಮಯದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು 'ಐಗಿರಿ ನಂದಿನಿ' ಸ್ಯಾಕ್ಸೊಫೋನ್ ವಾದನವನ್ನು ಕೇಳಿ ಆನಂದಿಸಿದ್ದರು ಎಂದು ಸ್ಯಾಕ್ಸೊಫೋನ್ ಕಲಾವಿದ ಯದುಕುಮಾರ್ ತಮ್ಮ ನೆನಪಿನ ಬುತ್ತಿಯನ್ನು ಬಿಚ್ಚಿದರು.

ಮೈಸೂರು ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನದಲ್ಲಿ ದಸರಾ ಪುಸ್ತಕ ಮೇಳ ಉಪಸಮಿತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದ ಸಹಯೋಗದೊಂದಿಗೆ ಆಯೋಜಿಸಿದ್ದ 'ಸೆಲ್ಫಿ ವಿತ್ ಸಾಹಿತಿ' ದಸರಾ ಪುಸ್ತಕ ಮೇಳದ ರಿಯಾಯಿತಿ ಮಾರಾಟ ಮೇಳದಲ್ಲಿ ಸ್ಯಾಕ್ಸೊಫೋನ್ ವಾದನದ ನಂತರ ಸಭೆಯನ್ನುದ್ದೇಶಿಸಿ ಮಾತನಾಡಿದರು.

ನಮ್ಮ ರಾಷ್ಟ್ರದ ಹೆಮ್ಮೆಯ ಪ್ರಧಾನಿಗಳು ನಂಜನಗೂಡಿಗೆ ಪ್ರಚಾರಕ್ಕೆ ಆಗಮಿಸಿದ್ದ ವೇಳೆ ನಮ್ಮ ಸ್ಯಾಕ್ಸೊಫೋನ್ ಕಛೇರಿ ಆಯೋಜಿಸಲಾಗಿತ್ತು. ಪ್ರಚಾರ ಸಭೆ ಮುಗಿಸಿ, ಕಾರಿನಲ್ಲಿ ವಿಮಾನನಿಲ್ದಾಣಕ್ಕೆ ತೆರಳುವ ಸಂದರ್ಭದಲ್ಲಿ ನಮ್ಮ ತಂಡದ ಸ್ಯಾಕ್ಸೊಫೋನ್ ವಾದನವನ್ನ ಗಮನಿಸಿ, ಸ್ವತಃ ಮೋದಿಯವರೇ ಕಾರಿನಿಂದ ಇಳಿದು ಬಂದು 'ಐಗಿರಿ ನಂದಿನಿ' ವಾದನವನ್ನು ಕೇಳಿ ನಂತರ ಆ ಕಛೇರಿಯ ವೀಡಿಯೋವನ್ನು ತಮ್ಮ 'ಎಕ್ಸ್' ಖಾತೆಯಲ್ಲಿ ಪೋಸ್ಟ್ ಮಾಡಿದ್ದನ್ನು ಸ್ಮರಿಸಿದರು. ಇದಕ್ಕೂ ಮೊದಲು ನುಡಿಸಿದ 'ರಘುಪತಿ ರಾಜಾರಾಮ್' ಭಜನ್ ಸೇರಿದಂತೆ ಇತರೆ ಗೀತೆಗಳ ಸ್ಯಾಕ್ಸೊಫೋನ್ ವಾದನಕ್ಕೆ ಪುಸ್ತಕ ಪ್ರಿಯರು ತಲೆದೂಗಿದರು.


'ಸೆಲ್ಫಿ ವಿತ್ ಸಾಹಿತಿ' ದಸರಾ ಪುಸ್ತಕ ಮೇಳದ ರಿಯಾಯಿತಿ ಮಾರಾಟ ಮೇಳದಲ್ಲಿ ವಿದ್ವಾನ್ ಯದುಕುಮಾರ್ ಅವರು ಸ್ಯಾಕ್ಸೊಫೋನ್ ವಾದನ ನಡೆಸಿಕೊಟ್ಟರು.

ಸ್ಯಾಕ್ಸೊಫೋನ್ ವಾದನದಲ್ಲಿ ಸಹ ಕಲಾವಿದರಾದ ಕಾಲೇಜು ವಿದ್ಯಾರ್ಥಿನಿ ಪೂರ್ವಿಕ, ಎನ್.ಚಂದನ್ (ಪಿಟೀಲು), ರವಿಶಂಕರ್ (ಕೀ ಬೋರ್ಡ್), ಬಾಬಣ್ಣ (ತಬಲ), ಕಿರಣ್ (ರಿದಂ ಪ್ಯಾಡ್), ಎಚ್.ದೀಪಕ್ ತಾಳ ನುಡಿಸಿ ಸಹಕರಿಸಿದರು. ಈ ವೇಳೆ ಮಹಾರಾಣಿ ಕಾಲೇಜಿನ ಹಿಂದಿ ಪ್ರಾಧ್ಯಾಪಕಿಯೊಬ್ಬರು ವೇದಿಕೆ ಆಗಮಿಸಿ, ಸ್ಯಾಕ್ಸೊಫೋನ್ ಕಲಾವಿದ ಯದುಕುಮಾರನ್ನು ಅಭಿನಂದಿಸಿದರು. ಇತರರು ಇದಕ್ಕೆ ಸಾಥ್ ನೀಡಿದರು. ಅಲ್ಲದೆ, ದಸರಾ ಪುಸ್ತಕ ಮೇಳದ ವಿವಿಧ ಮಳಿಗೆಗಳಿಗೆ ಪುಸ್ತಕ ಪ್ರಿಯರು ಭೇಟಿ ನೀಡಿ, ತಮಗಿಷ್ಟವಾದ ಪುಸ್ತಕಗಳನ್ನು ಕೆಲವರು ವೀಕ್ಷಣೆ ಮಾಡಿದರೆ, ಇನ್ನು ಕೆಲವರು ಖರೀದಿಗೆ ಮುಂದಾದರು.



ಇಂದು, ಸೆಲ್ಫಿ ವಿತ್ ಸಾಹಿತಿ' ದಸರಾ ಪುಸ್ತಕ ಮೇಳದಲ್ಲಿ ಹಿರಿಯ ಸಾಹಿತಿ ಡಾ.ಎನ್.ಎಸ್.ಶಿವಪ್ರಕಾಶ್ ಆಗಮಿಸಿ ವಿವಿಧ ಮಳಿಗೆಗೆ ಭೇಟಿ ನೀಡಿ, ಹಾರೈಸಿದರು. ಇವರೊಂದಿಗೆ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ, ಸದಸ್ಯರಾದ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಎಂ.ಚಂದ್ರಶೇಖರ್, ಯು.ಎಸ್. ಮಹೇಶ್, ಡಾ.ಸಿ.ಡಿ.ಪರಶುರಾಮ್, ಸಾತನೂರು ದೇವರಾಜ್, ಅಭಿರುಚಿ ಗಣೇಶ್, ಸುಚಿತ್ರ ಹೆಗಡೆ, ಬೆಟ್ಟಸ್ವಾಮಿ, ಪ್ರಕಾಶಕ ನಿಂಗರಾಜು ಚಿತ್ತಣ್ಣವರ್ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಕೃಷ್ಣಂ ಪ್ರಣಯ ಸಖಿ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕೃಷ್ಣಂ ಪ್ರಣಯ ಸಖಿ (ಕ) ದೇವರ (ಕ)	1+3 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ದೇವರ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಭೈರಾದೇವಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ದೇವರ (ತೆ)	4 ಪ್ರದರ್ಶನಗಳು
ರಾಜಕಮಲ್	
ಜೋಕರ್ ಪೋಲಿಕಾ ಡ್ಯೂಕ್ಸ್ (ಇಂ)	4 ಪ್ರದರ್ಶನಗಳು
ಸಂಗಂ	
ಭೈರಾದೇವಿ (ಕ)	4 ಪ್ರದರ್ಶನಗಳು
ಲಿಡೋ	
ಉಪೇಂದ್ರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಕೃಷ್ಣಂ ಪ್ರಣಯ ಸಖಿ (ಕ)	4 ಪ್ರದರ್ಶನಗಳು
ಪ್ರಭಾ	
ಭೀಮ (ಕ)	2 ಪ್ರದರ್ಶನಗಳು
ರಾಜಯೋಗ (ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಜೋಕರ್ ಫೋಲಿಕಾ ಡ್ಯೂಕ್ಸ್ (ಇಂ): ಬೆ.10.05ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ರಾ.9.55ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.1ಕ್ಕೆ.
ಸ್ಕ್ರೀನ್ 2	ದೇವರ 1 (ತೆ): ರಾ.10ಕ್ಕೆ.
ಸ್ಕ್ರೀನ್ 3	ಸ್ತ್ರೀ 2 (ಹಿಂ): ಬೆ.10.05ಕ್ಕೆ, ದೇವರ 1 (ತೆ): ಮ.1ಕ್ಕೆ, ಅನ್ನ (ಕ): ಸಂ.4.30ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ರಾ.7ಕ್ಕೆ, ಕಳಿಂಗ (ತೆ): ರಾ.10.10ಕ್ಕೆ
ಸ್ಕ್ರೀನ್ 4	ಪುಷ್ಪಕ ವಿಮಾನಂ (ಮ): ಬೆ.10.20ಕ್ಕೆ, ಭೈರಾದೇವಿ (ಕ): ಮ.1.05ಕ್ಕೆ, ದೇವರ 1 (ತೆ): ಮ.3.45ಕ್ಕೆ, ರಾ.7.05ಕ್ಕೆ, ತೆಕ್ಕು ವಡಕ್ಕು (ಮ): ರಾ.10.30ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.1.10ಕ್ಕೆ, ಸ್ವಾಗ್ (ತೆ): ಸಂ.4.10ಕ್ಕೆ, ತೆಕ್ಕು ವಡಕ್ಕು (ಮ): ರಾ.7.10ಕ್ಕೆ, ಗುಮಾಸ್ತಾನ್ (ಮ): ರಾ.9.40ಕ್ಕೆ.
ಸ್ಕ್ರೀನ್ 2	ಜೋಕರ್ ಫೋಲಿಕಾ ಡ್ಯೂಕ್ಸ್ (ಇಂ): ಮ.1.45ಕ್ಕೆ, ದೇವರ 1 (ತೆ): ಸಂ.4.40ಕ್ಕೆ, ರಾ.8ಕ್ಕೆ.
ಸ್ಕ್ರೀನ್ 3	ಭೈರಾದೇವಿ (ಕ): ಮ.1.40ಕ್ಕೆ, ಸಂ.4.15ಕ್ಕೆ, ಜೋಕರ್ ಫೋಲಿಕಾ ಡ್ಯೂಕ್ಸ್ (ಇಂ): ಸಂ.6.50ಕ್ಕೆ, ರಾ.9.40ಕ್ಕೆ.
ಸ್ಕ್ರೀನ್ 4	ದೇವರ 1 (ಕ): ಮ.1.30ಕ್ಕೆ, ದೇವರ 1 (ತೆ): ಸಂ.6.05ಕ್ಕೆ, ರಾ.9.20ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ರೇಸ್

11ನೇ ದಿನ, ಬುಧವಾರ, 9–10–2024

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 2.30 ಗಂಟೆಗೆ

I. ಹೊಗೇನಕಲ್ ಪ್ಲೇಟ್ –1600 ಮೀ. ರೇಟೆಡ್ 00 ರಿಂದ 25. ಮಧ್ಯಾಹ್ನ 2.30ಕ್ಕೆ
1. ಪೆಟ್ಟೀಸ್ ಲವ್ 2. ಕ್ವೆ ವೇಗಾ 3. ವಂದನ್

II. ಭರಚುಕ್ಕಿ ಪ್ಲೇಟ್ –1400 ಮೀ. ರೇಟೆಡ್ 00 ರಿಂದ 25. (ಮೈಸೂರು ಬೇಸ್ಡ್ ಹಾರ್ಸ್). ಮ.3.00ಕ್ಕೆ
1. ವರದಾನ್ 2. ಸ್ಕ್ವೈರ್ ಕಟ್ 3. ಬ್ರೇಕ್ ಅವೇ

III. ಗೂಲ್ ಅಂಡ್ ಸೋಲಿ ಪೂನಾವಾಲಸ್ ಮೆಮೋರಿಯಲ್ ಟ್ರೋಫಿ –1600 ಮೀ. ರೇಟೆಡ್ 40 ರಿಂದ 60. ಮಧ್ಯಾಹ್ನ 3.30ಕ್ಕೆ
1. ಬ್ರೂಸ್ ಆಲ್‌ಮೈಟಿ 2. ಕಾನ್ಫಡೆಂಟ್ ಗೇವ್ 3. ನ್ಯಾಚುರಲ್ ಸ್ಪೀಡ್

IV. ಚೀಫ್ ಮಿನಿಸ್ಟರ್ಸ್ ಟ್ರೋಫಿ–1400 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಸಂ.4.00ಕ್ಕೆ
1. ಗ್ರಿಜ್ಲಿ 2. ರೈಸ್ ಎ ಬಕ್ 3. ಮಿಸ್ಟಿಕ್ ಬಾಂಡ್

V. ಬೇಲೂರ್ ಪ್ಲೇಟ್–1100 ಮೀ. ರೇಟೆಡ್ 20 ರಿಂದ 45. ಸಂ.4.30ಕ್ಕೆ
1. ಲ್ಯಾಟರ್ ಬ್ರುನ್ನೆನ್ 2. ಸೂಪರ್ ಕೈಂಡ್ 3. ಕ್ಯಾಪ್ರಿ ಗರ್ಲ್

VI. ಮಂಡ್ಯ ಪ್ಲೇಟ್ –1200 ಮೀ. ರೇಟೆಡ್ 20 ರಿಂದ 45. (ಮೈಸೂರು ಬೇಸ್ಡ್ ಹಾರ್ಸ್). ಸಂ.5.00ಕ್ಕೆ
1. ವಾಯು 2. ಪೇಸೆಟ್ಸ್ ಆಫ್ ಲೈಫ್ 3. ಡಾನ್ ಹೌಸಿ

ದಿನದ ಅತ್ಯುತ್ತಮ	ಲ್ಯಾಟರ್ ಬ್ರುನ್ನೆನ್
ಡಬ್ಬಲ್	ಗ್ರಿಜ್ಲಿ, ವಾಯು
ಜಾಕ್‌ಪಾಟ್	2, 3, 4, 5 ಮತ್ತು 6
ಮಿನಿ ಜಾಕ್‌ಪಾಟ್	3, 4, 5, ಮತ್ತು 6
I ಟ್ರಿಬಲ್	1, 2 ಮತ್ತು 3
II ಟ್ರಿಬಲ್	4, 5 ಮತ್ತು 6
ಎಕ್ಸ್‌ಆಕ್ಟ್	1 ರಿಂದ 6

ಟಿಪ್‌ಸ್ಟರ್ ಪಿಜೆಸಿ

ಹರಿಯಾಣದಲ್ಲಿ ಕಾಂಗ್ರೆಸ್‌ಗೆ ಹಿನ್ನಡೆ; ಜನರ ತೀರ್ಪನ್ನು ಒಪ್ಪಿಕೊಳ್ತೀವಿ: ಡಿ.ಕೆ.ಶಿವಕುಮಾರ್

ರಾಯಚೂರು, ಅ.8– ಹರಿಯಾಣದಲ್ಲಿ ಕಾಂಗ್ರೆಸ್‌ಗೆ ಹಿನ್ನಡೆಯಾಗಿದೆ, ಜನರ ತೀರ್ಪನ್ನು ಒಪ್ಪಿಕೊಳ್ಳುತ್ತೇವೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಜಿಲ್ಲೆಯ ಸಿಂಧನೂರಿನಲ್ಲಿ ರೈತ ದಸರಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಹರಿಯಾಣದಲ್ಲಿ ನಮ್ಮ ಸರ್ಕಾರ ಬಂದೇ ಬರುತ್ತದೆ ಎಂದು ನನಗೆ ಬಹಳ ಆತ್ಮವಿಶ್ವಾಸವಿತ್ತು ಪ್ರಜಾಪ್ರಭುತ್ವದಲ್ಲಿ ಜನರ ತೀರ್ಪನ್ನು ಒಪ್ಪಿಕೊಳ್ಳುತ್ತೇವೆ. ಹಿನ್ನಡೆ ಬಗ್ಗೆ ಪರಿಶೀಲನೆ ಮಾಡುತ್ತೇವೆ. ನಾವು ಎಲ್ಲಿ ಎಡವಿದ್ದೀವಿ ಎಂಬುದರ ಕುರಿತು ಪರಿಶೀಲನೆ ಮಾಡುತ್ತೇವೆ ಎಂದರು.

ಜಾತಿಗಣತಿ ವರದಿ ಅನುಷ್ಠಾನ ಮಾಡ್ತೀವಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಪುನರುಚ್ಚಾರ

ಬೆಂಗಳೂರು, ಅ.8– ಜಾತಿಗಣತಿ ವರದಿ ಅನುಷ್ಠಾನ ಮಾಡೋದಾಗಿ ಸಿಎಂ ಸಿದ್ದರಾಮಯ್ಯ ಪುನರುಚ್ಚಾರ ಮಾಡಿದ್ದಾರೆ. ಜಾತಿಗಣತಿ ಸಂಬಂಧ ವಿಪಕ್ಷ ನಾಯಕ ಅಶೋಕ್ ಹೇಳಿಕೆಗೆ ತಮ್ಮ ಎಕ್ಸ್ ಖಾತೆಯಲ್ಲಿ ಸಿಎಂ ತಿರುಗೇಟು ನೀಡಿದ್ದಾರೆ.

ಸಿಎಂ ಟ್ವೀಟ್: ಜಾತಿ ಜನಗಣತಿ ಬಗ್ಗೆ ಬಿಜೆಪಿಗೆ ಯಾವ ತಕರಾರು–ವಿರೋಧ ಇಲ್ಲ. ಅದರ ಅನುಷ್ಠಾನಕ್ಕೆ ನಮ್ಮ ಬೆಂಬಲ ಸದಾ ಇದ್ದೇ ಇರುತ್ತದೆ ಎಂಬ ವಿರೋಧ ಪಕ್ಷದ ನಾಯಕರಾದ ಅಶೋಕ್ ಅವರ ಹೇಳಿಕೆಯನ್ನು ಓದಿ ಮನಸ್ಸು ನಿರಾಳವಾಯಿತು. ಅಶೋಕ್ ಅವರೇ, ನಮ್ಮ ಪಕ್ಷದೊಳಗಿನ ತಕರಾರುಗಳ ಬಗ್ಗೆ ತಲೆಕೆಡಿಸಿಕೊಳ್ಳಲು ಹೋಗಬೇಡಿ. ಅವುಗಳನ್ನು ನಾವು ಬಗೆಹರಿಸಿಕೊಳ್ಳುತ್ತೇವೆ.

ನೀವು ನುಡಿದಂತೆ ನಡೆದರೆ ಜಾತಿ ಜನಗಣತಿ ಜಾರಿಯಾಗಿ ನೀವೇ ಹೇಳಿಕೊಂಡಿರುವ ನಿಮ್ಮ ಪಕ್ಷದ ಕನಸಿನ 'ಅಂತ್ಯೋದಯ' ಸಾಕಾರಗೊಳ್ಳುತ್ತದೆ ಎಂಬ ವಿಶ್ವಾಸ ನನಗಿದೆ.



ನೀವು ಮಾತ್ರ ಕೊಟ್ಟ ಮಾತಿಗೆ ತಪ್ಪಿ ನಡೆಯಬಾರದು ಅಷ್ಟೆ. 2018ರಲ್ಲಿ ಸಮೀಕ್ಷೆ ಪೂರ್ಣಗೊಂಡಿದ್ದರೂ ಅಂಕಿ ಅಂಶಗಳ ಪರಿಶೀಲನಾ ಕಾರ್ಯ ಪೂರ್ಣಗೊಳ್ಳದೆ ಇದ್ದ ಕಾರಣ ಆ ಅವಧಿಯಲ್ಲಿ ಕಾಂತರಾಜ್ ಆಯೋಗದ ವರದಿಯನ್ನು ಸ್ವೀಕರಿಸಲು ಸಾಧ್ಯವಾಗಿರಲಿಲ್ಲ. ಇದಕ್ಕೆ ಬೇರೆ ಯಾವ ಕಾರಣಗಳು ಇರಲಿಲ್ಲ.

ಈಗ ವರದಿ ಬಿಡುಗಡೆಗೆ ಸಿದ್ಧವಾಗಿದೆ. ಅದನ್ನು ಅಂಗೀಕರಿಸಲು ನಮ್ಮ ಪಕ್ಷ ಮತ್ತು ಸರ್ಕಾರ ಕೂಡಾ ಬದ್ಧವಾಗಿದೆ. ಅಶೋಕ್ ಅವರೇ, ನಮ್ಮ ಪಕ್ಷದ ಎಲ್ಲ ನಾಯಕರು ತಾತ್ವಿಕವಾಗಿ ಜಾತಿಗಣತಿಯನ್ನು ಒಪ್ಪಿಕೊಂಡಿದ್ದಾರೆ. ಯಾರ ವಿರೋಧವೂ ಇಲ್ಲ. ವಿರೋಧ ಪಕ್ಷಗಳ ಸುಳ್ಳು ಪ್ರಚಾರದಿಂದಾಗಿ ಕೆಲವರಲ್ಲಿ ನಿರಾಧಾರವಾದ ಸಂಶಯಗಳು ಹುಟ್ಟಿಕೊಂಡಿವೆ. ಇನ್ನು ಕೆಲವರಲ್ಲಿ ತಪ್ಪು ಅಭಿಪ್ರಾಯಗಳಿಂದಾಗಿ ಗೊಂದಲಗಳಿವೆ. ಮಠಾಧೀಶರು ಸೇರಿದಂತೆ ಎಲ್ಲರ ಅನುಮಾನ, ಸಂಶಯಗಳನ್ನು ಮಾತುಕತೆಯ ಮೂಲಕ ಬಗೆಹರಿಸಿಕೊಂಡು ಜಾತಿಗಣತಿ ವರದಿಯನ್ನು ಜಾರಿಗೆ ತರುವ ನಿರ್ಧಾರವನ್ನು ಶೀಘ್ರವಾಗಿ ಕೈಗೊಳ್ಳಲಾಗುವುದು.

ಕಾಂತರಾಜ್ ಆಯೋಗ ನಡೆಸಿದ್ದ ಜಾತಿಗಣತಿಯ ವರದಿ ಇಲ್ಲಿಯವರೆಗೆ ಬಿಡುಗಡೆಯಾಗಿಲ್ಲ. ನಾನು ಕೂಡಾ ಅದನ್ನು ಓದಿಲ್ಲ. ಹೀಗಿರುವಾಗ ಅಶೋಕ್ ಅವರು ವರದಿ ಬಿಡುಗಡೆಯಾಗುವ ಮೊದಲೇ ಅದು ವೈಜ್ಞಾನಿಕವಾಗಿ ನಡೆದಿಲ್ಲ. ಅದರಲ್ಲಿ ತಪ್ಪುಗಳಿವೆ ಎಂದು ಆರೋಪಿಸುತ್ತಿದ್ದಾರೆ. ವರದಿ ಅವರಲ್ಲಿದೆಯೇ ಯಾವ ಆಧಾರದಲ್ಲಿ ಅವರು ಈ ರೀತಿಯ ಆರೋಪ ಮಾಡುತ್ತಿದ್ದಾರೆ ಎನ್ನುವುದನ್ನು ಅವರೇ ಸ್ಪಷ್ಟಪಡಿಸಬೇಕು.

ಮುಡಾ–ವಾಲ್ಮೀಕಿ ಹಗರಣಗಳಿಂದ ಪಕ್ಷದ ವರ್ಚಸ್ಸಿಗೆ ಕುತ್ತು
ಬಿಜೆಪಿ ಹಣಿಯಲು ಹಳೇ ಕೇಸ್‌ಗಳು ರೀ ಓಪನ್!

ಬೆಂಗಳೂರು, ಅ.8– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧದ ಮುಡಾ ನಿವೇಶನ ಹಗರಣದ ತಾರ್ಕಿಕ ಅಂತ್ಯ ಕುರಿತಾದ ಕುತೂಹಲ ಹೆಚ್ಚುತ್ತಿರುವ ಬೆನ್ನಲ್ಲೇ, ರಾಜಕೀಯ ಸಂಘರ್ಷದ ವಾತಾವರಣವೂ ತೀವ್ರ ಸ್ವರೂಪ ಪಡೆದುಕೊಳ್ಳುತ್ತಿದೆ. ಸೇರಿಗೆ ಸವ್ವಾಸೇರು ಎಂಬಂತೆ ಸಿದ್ದರಾಮಯ್ಯ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಿರುವ ಬಿಜೆಪಿ ನಾಯಕರ ಬಗ್ಗು ಬಡಿಯಲು ಕಾಂಗ್ರೆಸ್ ಮುಂದಾಗಿದೆ.

ಇದರಂತೆ ಬಿಜೆಪಿ ನಾಯಕರ ವಿರುದ್ಧದ ಹಳೇ ಪ್ರಕರಣಗಳ ಕೆದಕಲು ಆಡಳಿತಾರೂಢ ಕಾಂಗ್ರೆಸ್ ಪಕ್ಷ ರಣತಂತ್ರ ರೂಪಿಸುತ್ತಿದ್ದು, ಈಗಾಗಲೇ ಕಾಂಗ್ರೆಸ್ ಪಕ್ಷದ ಕಾನೂನು ವಿಭಾಗ ಮೂರು ಸುತ್ತಿನ ಸಭೆ ನಡೆಸಿದೆ ಎಂದು ತಿಳಿದುಬಂದಿದೆ.

ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ ನೇತೃತ್ವದಲ್ಲಿ ಈ ಸಭೆ ನಡೆದಿದ್ದು, ಸಭೆಯಲ್ಲಿ ಬಿ.ಎಸ್. ಯಡಿಯೂರಪ್ಪ ವಿರುದ್ಧದ ಪೋಕ್ಸೋ ಕೇಸ್, ಪ್ರತಿಪಕ್ಷದ ನಾಯಕ ಆರ್.ಅಶೋಕ್ ಹಾಗೂ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ವಿರುದ್ಧದ ಡಿನೋಟಿಫಿಕೇಶನ್ ಪ್ರಕರಣ ಕುರಿತು ಚರ್ಚೆ ನಡೆಸಿದ್ದಾರೆಂದು ಮೂಲಗಳು ತಿಳಿಸಿವೆ.

ಬಿಜೆಪಿ ಹಿರಿಯ ಮುಖಂಡ, ಎಂಎಲ್‌ಸಿ ಸಿಟಿ ರವಿ ಸೇರಿದಂತೆ ಬಿಜೆಪಿಯ 22 ಪ್ರಮುಖ ನಾಯಕರ ವಿರುದ್ಧದ ಭೂ ವಿವಾದ ಪ್ರಕರಣಗಳನ್ನು ಬೆಳಕಿಗೆ ತರಲಾಗುವುದು ಎಂದು ಕಾನೂನು ಘಟಕದ ಸದಸ್ಯರೊಬ್ಬರು ಮಾಹಿತಿ ನೀಡಿದ್ದಾರೆ.

ಸೋಮವಾರ ಕೂಡ ಕಾಂಗ್ರೆಸ್ ನಾಯಕರು ಪೊನ್ನಣ್ಣ ಅವರ ಅನುಪಸ್ಥಿತಿಯಲ್ಲಿ ಸಭೆ ನಡೆಸಿದ್ದು, ಬಿಜೆಪಿ ನಾಯಕರ ವಿರುದ್ಧದ ಪ್ರಕರಣಗಳನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಲು ಏಕೆ ವಿಫಲವಾಗಿದೆ ಎಂಬುದೂ ಸೇರಿದಂತೆ ಹಲವು ವಿಷಯಗಳ ಕುರಿತು ಚರ್ಚೆ ನಡೆಸಲಾಗಿದೆ ಎಂದು ತಿಳಿಸಿದ್ದಾರೆ.

ಜಾತಿಗಣತಿ ರಾಜಕೀಯ ದಾಳವಾಗಿ ಬಳಕೆ; ದಲಿತರು, ಹಿಂದುಳಿದ ವರ್ಗಗಳಿಗೆ ಅಪಮಾನ

ಬೆಂಗಳೂರು, ಅ.8– ಜಾತಿ ಜನಗಣತಿ ಬಗ್ಗೆ ಬಿಜೆಪಿಗೆ ಯಾವ ತಕರಾರು ಇಲ್ಲ ಅಥವಾ ವಿರೋಧವೂ ಇಲ್ಲ. ಬಿಜೆಪಿಯ ಮೂಲಸಿದ್ಧಾಂತವಾದ 'ಅಂತ್ಯೋದಯ'ದ ಪರಿಕಲ್ಪನೆಯಲ್ಲೇ ತಳ ಸಮುದಾಯಗಳನ್ನು ರಾಜಕೀಯವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಸಮಾಜದ ಮುಖ್ಯವಾಹಿನಿಗೆ ತರಬೇಕು ಎಂಬ ಸಾಮಾಜಿಕ ನ್ಯಾಯದ ಬದ್ಧತೆ ಅಡಗಿದೆ. ಅದನ್ನು ಸಾಕಾರಗೊಳಿಸುವ ಯಾವ ಕ್ರಮಕ್ಕಾದರೂ ನಮ್ಮ ಬೆಂಬಲ ಸದಾ ಇದ್ದೇ ಇರುತ್ತದೆ ಎಂದು ವಿಪಕ್ಷ ನಾಯಕ ಆರ್.ಅಶೋಕ್ ಹೇಳಿದ್ದಾರೆ.

ಈ ಸಂಬಂಧ ಟ್ವೀಟ್ ಮಾಡಿರುವ ಅವರು, ರಾಜಕೀಯ ಚದುರಂಗದಾಟದಲ್ಲಿ ಜಾತಿ ಜನಗಣತಿಯನ್ನು ದಾಳವಾಗಿ ಬಳಸಿಕೊಳ್ಳುವುದಕ್ಕೆ ನಮ್ಮ ವಿರೋಧವಿದೆ. ರಾಜಕೀಯ ಹಾವು–ಏಣಿ ಆಟದಲ್ಲಿ ಕೆಳಗೆ ಬಿದ್ದಾಗ ಮೇಲೇಳಲು, ಕುರ್ಚಿ ಉಳಿಸಿಕೊಳ್ಳಲು ಜಾತಿ ಗಣತಿಯನ್ನು ಏಣಿಯಾಗಿ ಬಳಸಿಕೊಳ್ಳುವುದಕ್ಕೆ ನಮ್ಮ ತಕರಾರಿದೆ ಎಂದಿದ್ದಾರೆ.



ತಮಗೆ ನಿಜವಾಗಿಯೂ ಜಾತಿ ಗಣತಿಯ ಬಗ್ಗೆ ಬದ್ಧತೆ ಇದ್ದಿದ್ದರೆ, 2018ರಲ್ಲೇ ಕಾಂತರಾಜು ವರದಿಯನ್ನ ಏಕೆ ಸ್ವೀಕರಿಸಿ ಜಾರಿ ಮಾಡಲಿಲ್ಲ? ಹತ್ತು ವರ್ಷಗಳ ಹಿಂದೆ ಕೈಗೊಂಡ ಜಾತಿ ಜನಗಣತಿ ವೈಜ್ಞಾನಿಕವಾಗಿ ನಡೆದಿಲ್ಲ, ಅನೇಕ ಜನರ ಮನೆಗಳಿಗೆ ಭೇಟಿಯೇ ನೀಡಿಲ್ಲ ಎಂಬ ದೂರುಗಳಿವೆ. ಹೀಗಿರುವಾಗ ಈ ವರದಿಯನ್ನ ಈಗ ಮುನ್ನೆಲೆಗೆ ತರುವ ತರಾತುರಿ ಏಕೆ?

ಈ ಅವೈಜ್ಞಾನಿಕ ಜಾತಿ ಜನಗಣತಿ ವರದಿ ಸ್ವೀಕರಿಸದಂತೆ ಒಕ್ಕಲಿಗರ ಸಂಘ ಮನವಿ ಸಲ್ಲಿಸಿದೆ. ಇದನ್ನ ಬೆಂಬಲಿಸಿ ಸ್ವತಃ ಉಪಮುಖ್ಯಮಂತ್ರಿಗಳು ಹಾಗೂ ಕೆಪಿಸಿಸಿ ಅಧ್ಯಕ್ಷರಾದ ಡಿ.ಕೆ ಶಿವಕುಮಾರ್ ಸಹಿ ಮಾಡಿದ್ದಾರೆ. ತಮ್ಮದೇ ಪಕ್ಷದ ಹಿರಿಯ ನಾಯಕರು, ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷರಾದ ಶಾಮನೂರು ಶಿವಶಂಕರಪ್ಪನವರೂ ಇದಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆ.

ಅನೇಕ ಮಠಾಧೀಶರು, ಧಾರ್ಮಿಕ ಮುಖಂಡರು ಇದಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆ. ಹೀಗಿರುವಾಗ ಕಳೆದ 17 ತಿಂಗಳಿನಿಂದ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಒಂದು ಸರ್ವ ಸಮ್ಮತವಾದ ನಿಲುವಿಗೆ ಬರುವ ಬದಲು ಈಗ ದಿಢೀರನೆ ಏಕಾಏಕಿ ವರದಿ ಸ್ವೀಕರಿಸಲು ಮುಂದಾಗಿರುವುದು ಯಾವ ಕಾರಣಕ್ಕೆ. ಹಗರಣಗಳ ಸುಳಿಯಲ್ಲಿ ಸಿಲುಕಿ ಮುಜುಗರ ಅನುಭವಿಸುತ್ತಿರುವ ಪರಿಸ್ಥಿತಿಯಿಂದ ಜನರ ಗಮನ ಬೇರೆಡೆ ಸೆಳೆಯಲು ಜಾತಿಗಣತಿ ವರದಿಯನ್ನು ಒಂದು ದಾಳವಾಗಿ ಬಳಸಲಾಗುತ್ತಿದೆಯೇ.

ಜಾತಿಗಣತಿಯನ್ನು ರಾಜಕೀಯ ದಾಳವಾಗಿ ಬಳಸುವುದು ದಲಿತರಿಗೆ, ಹಿಂದುಳಿದ ವರ್ಗಗಳಿಗೆ, ತಳ ಸಮುದಾಯಗಳಿಗೆ ಮಾಡುವ ಅಪಮಾನವಲ್ಲವೇ. ಸಾಮಾಜಿಕ ನ್ಯಾಯವೆಂಬ ಪವಿತ್ರ ಪರಿಕಲ್ಪನೆಯನ್ನು ರಾಜಕೀಯ ಲಾಭಕ್ಕೆ ಬಳಸಿಕೊಳ್ಳುವುದು ಆತ್ಮವಂಚನೆಯಲ್ಲವೇ ಎಂದು ಪ್ರಶ್ನಿಸಿದ್ದಾರೆ. ಅಕ್ಟೋಬರ್ 18ರಂದು ನಡೆಯುವ ಸಂಪುಟ ಸಭೆಗೂ ಮುನ್ನ ಮುಖ್ಯಮಂತ್ರಿ ಗಳ 'ಆತ್ಮಸಾಕ್ಷಿ' ಈ ಪ್ರಶ್ನೆಗಳನ್ನ ಆತ್ಮಾವಲೋಕನ ಮಾಡಿ ಉತ್ತರ ನೀಡುತ್ತದೆ ಎಂದು ನಿರೀಕ್ಷಿಸುತ್ತೇನೆ ಎಂದು ಬರೆದುಕೊಂಡಿದ್ದಾರೆ.

ಶಿಕ್ಷಣ ಇಲಾಖೆ ಅಧೀನದಲ್ಲಿ ಮಹಿಳಾ ದೌರ್ಜನ್ಯ ತಡೆಗೆ ಸಮಿತಿ ರಚನೆ

ಬೆಂಗಳೂರು, ಅ. 8– ಶಿಕ್ಷಣ ಇಲಾಖೆ ಅಧೀನದಲ್ಲಿ ಮಹಿಳಾ ದೌರ್ಜನ್ಯ ತಡೆಗೆ ಆಂತರಿಕ ದೂರು ಸಮಿತಿಯೊಂದನ್ನು ರಾಜ್ಯ ಸರ್ಕಾರ ರಚನೆ ಮಾಡಿದೆ. ಮಹಿಳಾ ಅಧಿಕಾರಿ, ಶಿಕ್ಷಕಿಯರು, ಸಿಬ್ಬಂದಿಗೆ ಕಿರುಕುಳ, ಮಾನಸಿಕ ಹಿಂಸೆ, ದುರುದ್ದೇಶ ಪೂರ್ವಕವಾಗಿ ಕರ್ತವ್ಯಕ್ಕೆ ಅಡ್ಡಿಪಡಿಸುವುದು ಹಾಗೂ ಲೈಂಗಿಕ ದೌರ್ಜನ್ಯ ಮುಂತಾದ ಘಟನೆಗಳ ಪರಿಹಾರಕ್ಕೆ 9 ಮಹಿಳಾ ಅಧಿಕಾರಿಗಳ ಸಮಿತಿಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರು ರಚನೆ ಮಾಡಿದ್ದಾರೆ. ಇತ್ತೀಚೆಗೆ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳು ಹೆಚ್ಚುತ್ತಿದ್ದು, ಹೀಗಾಗಿ ಈ ಆಂತರಿಕ ದೂರು ಸಮಿತಿಯನ್ನು ರಚನೆ ಮಾಡಲಾಗಿದೆ. ಅವರು ಕೆಲಸ ಮಾಡುವ ಸ್ಥಳಗಳಲ್ಲಿ ಯಾವುದೇ ರೀತಿಯ ಅಭದ್ರತೆ ಅನಿಸಿದರೆ, ಕೂಡಲೇ ಈ ಸಮಿತಿಗೆ ದೂರು ನೀಡಬಹುದು. ಇನ್ನು ಕಾಲಕಾಲಕ್ಕೆ ಶಿಕ್ಷಣ ಇಲಾಖೆ ಅಧೀನದ ಮಹಿಳಾ ಅಧಿಕಾರಿ, ಸಿಬ್ಬಂದಿ, ಶಿಕ್ಷಕಿಯರ ದೂರನ್ನು ಈ ಸಮಿತಿ ಪರಿಶೀಲನೆ ನಡೆಸಲಿದೆ.

ಮಠಕ್ಕೆ 3 ಸಾವಿರ ಎಕರೆ ಭೂಮಿ ದಾನ ಮಾಡಿ ಸನ್ಯಾಸತ್ವ ಸ್ವೀಕರಿಸಿದ ಗಣಿ ಉದ್ಯಮಿ!



ರಾಮನಗರ, ಅ.8– ರಾಜಸ್ಥಾನದ ಪ್ರಖ್ಯಾತ ಗಣಿ ಉದ್ಯಮಿ ಓಸ್ವಾಲ್ ಜೈನ್. ರಾಜಸ್ಥಾನ ಮಾತ್ರವಲ್ಲದೆ, ಮುಂಬೈ, ಗುಜರಾತ್, ಕರ್ನಾಟಕ, ತಮಿಳುನಾಡು ಹಾಗೂ ಆಂಧ್ರಪ್ರದೇಶದಲ್ಲಿ ಅವರ ಹೆಸರಲ್ಲಿ ಇದ್ದಿದ್ದು ಬರೋಬ್ಬರಿ 3 ಸಾವಿರ ಎಕರೆ ಭೂಮಿ. ಇದರಲ್ಲಿ ಕಲ್ಲಿದ್ದಲು, ಚಿನ್ನ ಹಾಗೂ ಅದಿರಿನ ಗಣಿಗಾರಿಕೆ ಮಾಡುತ್ತಿದ್ದರು. ಅದರೊಂದಿಗೆ ಜರ್ಮನಿ, ಜಪಾನ್ ಹಾಗೂ ಆಸ್ಟ್ರೇಲಿಯಾದಲ್ಲಿ ನಡೆಸುತ್ತಿದ್ದ ವಿದೇಶಿ ವಹಿವಾಟುಗಳಿದ್ದವು. ಈ ಎಲ್ಲವನ್ನೂ ಓಸ್ವಾಲ್ ಜೈನ್, ರಾಮನಗರ ಜಿಲ್ಲೆಯ ಮಾಗಡಿಯಲ್ಲಿರುವ ಪಾಲನಹಳ್ಳಿ ಮಠಕ್ಕೆ ದಾನ ಮಾಡಿದ್ದಾರೆ. 78 ವರ್ಷದ ಓಸ್ವಾಲ್ ಜೈನ್ ಇಷ್ಟು ದೊಡ್ಡ ಪ್ರಮಾಣದ ಜಮೀನನ್ನು ದಾನ ಮಾಡಿ ಸನ್ಯಾಸತ್ವ ಸ್ವೀಕಾರ ಮಾಡಿದ್ದಾರೆ. ಅವರು ನೀಡಿರುವ ಭೂಮಿಯಲ್ಲಿ ಈಗಾಗಲೇ ಗಣಿಗಾರಿಕೆ ನಡೆಯುತ್ತಿದ್ದು, ಇದರಲ್ಲಿ ಬರುವ ಆದಾಯದಿಂದ ಆಸ್ಪತ್ರೆ, ಗೋಶಾಲೆ, ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಲೋಕ ಕಲ್ಯಾಣಕ್ಕೆ ಮತ್ತು ಸಮಾಜ ಸೇವೆಗೆ ಬಳಸುವುದು ಮಠದ ಉದ್ದೇಶವಾಗಿದೆ ಎಂದು ಪಾಲನಹಳ್ಳಿ ಮಠದ ಪೀಠಾಧ್ಯಕ್ಷರಾದ ಡಾ.ಸಿದ್ದರಾಜ ಸ್ವಾಮೀಜಿ ಹೇಳಿದ್ದಾರೆ.

ರಾಜಸ್ಥಾನದ ಗಣಿ ಉದ್ಯಮಿಯಾಗಿರುವ ಓಸ್ವಾಲ್ ಜೈನ್‌ಗೆ ಇಬ್ಬರು ಮಕ್ಕಳಿದ್ದಾರೆ. ಒಬ್ಬ ವಿದೇಶದಲ್ಲಿದ್ದರೆ, ಮಗಳು ರಾಜಸ್ಥಾನದಲ್ಲಿ ಸಿಎ ವೃತ್ತಿಯಲ್ಲಿದ್ದಾಳೆ. ಇಬ್ಬರೂ ಪಿತ್ರಾರ್ಜಿತವಾಗಿ ಬಂದಿರುವ ಆಸ್ತಿ ನೀಡಿರುವ ಓಸ್ವಾಲ್ ಜೈನ್, ತಾವು ಬದುಕಿನಲ್ಲಿ ದುಡಿದು ಗಳಿಸಿದ ಸ್ವಯಾರ್ಜಿತ ಆಸ್ತಿಯಾಗಿರುವ 3 ಸಾವಿರ ಎಕರೆ ಆಸ್ತಿಯನ್ನು ಮಾತ್ರವೇ ದಾನ ಮಾಡಿದ್ದಾರೆ. ಪಾಲನಹಳ್ಳಿ ಮಠದ ಪೀಠಾಧ್ಯಕ್ಷರಾದ ಡಾ.ಸಿದ್ದರಾಜ ಸ್ವಾಮೀಜಿಗೆ ಕಾನೂನು ಪ್ರಕಾರ ಆಸ್ತಿ ಪತ್ರ ಹಸ್ತಾಂತರ ಮಾಡಿದ್ದಾರೆ. ಎಲ್ಲಾ ಪ್ರಕ್ರಿಯೆಗಳನ್ನು ಕಾನೂನಾತ್ಮಕವಾಗಿ ಮಾಡಿರುವುದಾಗಿ ಪಿ.ಬಿ. ಓಸ್ವಾಲ್ ಜೈನ್ ತಿಳಿಸಿದ್ದಾರೆ. ಕಳೆದ 27 ವರ್ಷಗಳಿಂದ ಪಾಲನಹಳ್ಳಿ ಮಠದ ಜೊತೆ ನನಗೆ ಒಡನಾಟವಿದೆ. ಓಸ್ವಾಲ್ ಕಂಪನಿ ಆರಂಭವಾದಾಗಿನಿಂದ ಸತತ 27 ವರ್ಷ ಪಾಲನಹಳ್ಳಿ ಮಠದ ಶ್ರೀಗಳ ಮಾರ್ಗದರ್ಶನ ಮತ್ತು ಅವರ ಒಡನಾಟವಿದ್ದ ಕಾರಣ ಮಠಕ್ಕೆ ಆಸ್ತಿ ಬರೆದುಕೊಟ್ಟಿದ್ದೇನೆ ಎಂದು ಹೇಳಿದ್ದಾರೆ. ನನಗೆ ಈಗಾಗಲೇ ವರ್ಷವಾಗಿದೆ. ಜೈನ ವ್ರತಾಚರಣೆ ಮಾಡಿ ಅಹಿಂಸಾ ಪರಮೋಧರ್ಮ ಮತ್ತು ಮೋಕ್ಷ ಸಾಧನೆಗಾಗಿ ಮಠಕ್ಕೆ ಆಸ್ತಿಯನ್ನು ದಾನ ಮಾಡಿದ್ದೇನೆ ಎಂದು ಪಿಬಿ ಓಸ್ವಾಲ್ ಜೈನ್ ಹೇಳಿದ್ದಾರೆ.

ಯಾವತ್ತಿದ್ದರೂ ಸಿದ್ದರಾಮಯ್ಯ ರಾಜೀನಾಮೆ ನೀಡ್ತಾರೆ

ಗದಗ, ಅ.8– ಯಾವತ್ತಿದ್ದರೂ ಸಿದ್ದರಾಮಯ್ಯ ರಾಜೀನಾಮೆ ನೀಡೇ ನೀಡುತ್ತಾರೆ ಎಂದು ಮಾಜಿ ಡಿಸಿಎಂ ಕೆ.ಎಸ್. ಈಶ್ವರಪ್ಪ ಹೇಳಿದರು.

ನಗರದ ಪ್ರವಾಸಿ ಮಂದಿರದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮೊದಲು ಕಾಂಗ್ರೆಸ್ ಪರಿಸ್ಥಿತಿ ನೋಡಿ ಸಿದ್ದರಾಮಯ್ಯ ರಾಜೀನಾಮೆ ಕೊಡುವುದು ನಂತರ ಎಂದು ಡಿಕೆ ಶಿವಕುಮಾರ್, ಸತೀಶ್ ಜಾರಕಿಹೊಳಿ, ಎಂಬಿ ಪಾಟೀಲ್, ದೇಶಪಾಂಡೆ ರಾಯರೆಡ್ಡಿ, ಎಲ್ಲರೂ ಹೇಳಿದ್ದರು. ನಾವೆಲ್ಲರೂ ಬಂಡೆಯ ಹಾಗೇ ಸಿಎಂ ಜೊತೆಗೆ ಇರುತ್ತೇವೆ ಎಂದಿದ್ದರು. 5 ವರ್ಷ ಅವರೇ ಮುಖ್ಯಮಂತ್ರಿ ಅಂದರೂ ಅದು ಕೃತಕತೆ, ನಾಟಕೀಯ ಹೇಳಿಕೆಯಾಗುತ್ತದೆ. ಯಾವತ್ತಿದ್ದರೂ ಸಿದ್ದರಾಮಯ್ಯ ರಾಜೀನಾಮೆ ನೀಡೇ ನೀಡುತ್ತಾರೆ. ಹೀಗಾಗಿ ಬೇರೆ ಬೇರೆ ಸಭೆಗಳನ್ನು ನಡೆಸುತ್ತಿದ್ದಾರೆ ಎಂದರು.

ಒಂದು ಕಡೆ ದಲಿತ ಮುಖ್ಯಮಂತ್ರಿ ಎಂದು ಚರ್ಚೆ ನಡೆಯುತ್ತಿದೆ. ಮುಂಚೆ ಯಾಕೆ ದಲಿತ ಮುಖ್ಯಮಂತ್ರಿಯನ್ನು ಮಾಡಲಿಲ್ಲ. ಕಾಂಗ್ರೆಸ್‌ಗೆ ಬಹುಮತ ಹೊಸದಾಗಿ ಬಂದಿದೀಯಾ. ಆವಾಗ ಯಾಕೆ ದಲಿತರು ನೆನಪಾಗಲಿಲ್ಲ.



ಕಾಂಗ್ರೆಸ್‌ನ ಭ್ರಷ್ಟಾಚಾರಗಳ ಬಗ್ಗೆ ತುಂಬಾ ಸ್ಪಷ್ಟವಾಗಿ ಕೋರ್ಟ್‌ನಲ್ಲಿ ಆದೇಶವಾಗಿದೆ. ನಾನು ಸಿಎಂ ಅವರಿಗೆ ಪ್ರಾರ್ಥನೆ ಮಾಡುತ್ತೇನೆ. ನೀವು ರಾಜೀನಾಮೆ ಕೊಟ್ಟು ತನಿಖೆಯಲ್ಲಿ ಕ್ಲೀನ್ ಚೀಟ್ ತೆಗೆದುಕೊಂಡು ಬನ್ನಿ. ಬಂದು ಮತ್ತೆ ಸಿಎಂ ಆಗಿ ಏನೂ ಅಭ್ಯಂತರವಿಲ್ಲ. ಸಿಎಂ ರಾಜೀನಾಮೆ ಕೊಡದೇ ಕೋರ್ಟಿಗೆ ಅಪಮಾನವಾಗಿದೆ. ಕೇವಲ ಕೋರ್ಟಿಗೆ ಅಲ್ಲ. ಇದು ಸಂವಿಧಾನಕ್ಕೆ ಮಾಡಿರುವ ಅಪಮಾನವಾಗಿದೆ ಎಂದರು.

ಇದೇ ವೇಳೆ ಬಿಜೆಪಿ ವಿಚಾರವಾಗಿ ಮಾತನಾಡಿ, ಈಗ ಹಿಂದುತ್ವ ಬಿಟ್ಟು, ಬಿಜೆಪಿಯಲ್ಲಿ ಸ್ವಜನ ಪಕ್ಷಪಾತ ನಡೆಯುತ್ತಿದೆ. ಇದಕ್ಕೆ ಸರಿಯಾಗಿ ಬ್ರೇಕ್ ಹಾಕಬೇಕು. ಬಿಜೆಪಿ ಕುಟುಂಬ ರಾಜಕಾರಣದಿಂದ ಮುಕ್ತವಾಗಬೇಕು. ವಿಜಯೇಂದ್ರ, ಕಾಂಗ್ರೆಸ್ ಪಕ್ಷದ ಭಿಕ್ಷೆಯಿಂದ ಶಾಸಕರಾಗಿದ್ದೀರಿ ಎಂದು ಡಿ.ಕೆ ಶಿವಕುಮಾರ್ ಹೇಳಿದ್ದಾರೆ. ಅದಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ಈವರೆಗೂ ಉತ್ತರ ನೀಡಿಲ್ಲ. ಏನು ಹೊಂದಾಣಿಕೆಯಾಗಿತ್ತು ಎನ್ನುವುದನ್ನು ಡಿಕೆಶಿ ಬಹಿರಂಗ ಮಾಡಲಿ. ಈ ಹೊಂದಾಣಿಕೆ ರಾಜಕಾರಣ ಮುಕ್ತಾಯವಾಗಬೇಕು. ಒಂದು ಕುಟುಂಬದ ಕೈಗೆ ಬಿಜೆಪಿ ಸಿಕ್ಕಿಬಿದ್ದಿರುವುದರಿಂದ ಪಕ್ಷದಲ್ಲಿ ಶಾಸಕರ ಸಂಖ್ಯೆ ಕಡಿಮೆಯಾಗುತ್ತಿವೆ. ಈ ಕುರಿತು ಬಿಜೆಪಿ ಪಕ್ಷದಲ್ಲಿ ಚರ್ಚೆಯಾಗಬೇಕು ಎಂದು ಬಿಎಸ್‌ವೈ ಕುಟುಂಬದ ವಿರುದ್ಧ ಹರಿಹಾಯ್ದರು.

ಇದೇ ತಿಂಗಳು 20ರಂದು ಬೃಹತ್ ಸಮಾವೇಶ ಪ್ಲ್ಯಾನ್ ಮಾಡಲಾಗಿದೆ ಎಂದರು. ಸಂಘಟನೆ ಮಾಡಲು ಸಾಕಷ್ಟು ಫೋನ್ ಕಾಲ್ ಬರುತ್ತಿವೆ. ಸಾಧು, ಸಂತರ ಮಾರ್ಗದರ್ಶನದಲ್ಲಿ ಯಾವ ಹೆಸರು ಇಡಬೇಕು. ಯಾವ ರೂಪದಲ್ಲಿ ಸಂಘಟನೆ ತೆಗೆದುಕೊಂಡು ಹೋಗಬೇಕು ಎನ್ನುವುದು ಗೊತ್ತಾಗುತ್ತದೆ. ಬಸವನಗೌಡ ಪಾಟೀಲ್ ಯತ್ನಾಳ್ ಕೂಡಾ ಬರುತ್ತಾರೆ. ಬಸವಜಯ ಮೃತ್ಯುಂಜಯ ಸ್ವಾಮೀಜಿ ಕೂಡಾ ಸಾಥ್ ನೀಡುತ್ತಾರೆ. ಇದು ಈಶ್ವರಪ್ಪ ಹಾಗೂ ಯತ್ನಾಳ್ ನೇತೃತ್ವ ಅಲ್ಲ. ಇದು ಸಾಧು, ಸಂತರ ನೇತೃತ್ವದಲ್ಲಿ ನಡೆಯುತ್ತದೆ ಎಂದರು.

ಸಿಎಂ ಭದ್ರತಾ ನಿಯಮ ಉಲ್ಲಂಘನೆ
ಶಾಸಕ ಜನಾರ್ದನ ರೆಡ್ಡಿಗೆ ನೋಟಿಸ್ ಜಾರಿ

ಹುಬ್ಬಳ್ಳಿ, ಅ.8– ಮುಖ್ಯಮಂತ್ರಿ ಸಿದ್ದರಾಮಯ್ಯ ಕೊಪ್ಪಳಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಭದ್ರತಾ ನಿಯಮ ಉಲ್ಲಂಘಿಸಿದ ಆರೋಪದ ಮೇಲೆ ಬಿಜೆಪಿ ಮುಖಂಡ ಹಾಗೂ ಗಂಗಾವತಿ ಶಾಸಕ ಗಾಲಿ ಜನಾರ್ದನ ರೆಡ್ಡಿ ಅವರಿಗೆ ಕೊಪ್ಪಳ ಪೊಲೀಸರು ನೋಟಿಸ್ ಜಾರಿ ಮಾಡಿದ್ದಾರೆ.




ವಿವಿಧ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದ ಸಿಎಂ ಸಿದ್ದರಾಮಯ್ಯ ಅವರು, ಬೆಂಗಳೂರಿಗೆ ಕೊಪ್ಪಳ ಜಿಲ್ಲೆಯ ಗಂಗಾವತಿ ನಗರದ ಮಾರ್ಗವಾಗಿ ಬೆಂಗಳೂರಿಗೆ ವಾಪಸ್ ಆಗುತ್ತಿದ್ದರು. ಸಿಎಂ ಆಗಮನ ಹಿನ್ನೆಲೆಯಲ್ಲಿ ಪೊಲೀಸರು ಝೀರೋ ಟ್ರಾಫಿಕ್ ವ್ಯವಸ್ಥೆ ಮಾಡಿಸಿ ತೆರಳಲು ಅವಕಾಶ ಮಾಡಿಕೊಟ್ಟಿದ್ದರು. ಇದರಿಂದ ಸ್ಥಳದಲ್ಲಿದ್ದ ವಾಹನ ಸವಾರರು ಟ್ರಾಫಿಕ್ ಜಾಮ್‌ನಿಂದ ಸಮಸ್ಯೆ ಎದುರಿಸಿದ್ದರು. ಇದೇ ವೇಳೆ ಸಿಎಂ ಎದುರಿಗೆ ಬರುತ್ತಿದ್ದ ಶಾಸಕ ಜನಾರ್ದನರೆಡ್ಡಿ ಕಾರನ್ನು ಕೂಡ ಪೊಲೀಸರು ತಡೆದಿದ್ದರು ಎನ್ನಲಾಗಿದೆ. 20 ನಿಮಿಷಗಳ ಕಾಲ ಶಾಸಕ ಜನಾರ್ದನ ರೆಡ್ಡಿ ಇದ್ದ ಕಾರು ರಸ್ತೆಯಲ್ಲೇ ಕಾದು ನಿಂತಿತ್ತು. ಇದರಿಂದ ಅಸಮಾಧಾನಗೊಂಡ ಶಾಸಕರು, ಕೊನೆಗೆ ಡಿವೈಡರ್ ಮೇಲೆಯೇ ಕಾರು ಹತ್ತಿಸಿ ಸಿಎಂ ಬರ್ತಿದ್ದ ಮಾರ್ಗದಲ್ಲೇ ಸ್ವತಃ ಕಾರು ಚಲಾಯಿಸಿಕೊಂಡು ತೆರಳಿದ್ದಾರೆಂದು ಹೇಳಲಾಗುತ್ತಿದೆ.

ಸಿಎಂ ಕಾರು ಆಗಮಿಸುತ್ತಿದ್ದ ವೇಳೆ ರಾಂಗ್ ರೂಟ್‌ನಲ್ಲಿ ಮತ್ತೊಂದು ಕಾರು ಬರೋದನ್ನು ಕಂಡ ಸಿಎಂ ಸಿದ್ದರಾಮಯ್ಯ ಅವರ ಬೆಂಗಾವಲು ಪಡೆ ಕೊನೆಗೆ ತಮ್ಮ ಕಾರನ್ನೇ ನಿಲ್ಲಿಸಿ ಜನಾರ್ದನ ರೆಡ್ಡಿ ಕಾರು ಪಾಸ್ ಆದ ಬಳಿಕ ಸಿಎಂ ಅವರನ್ನು ಕರೆದುಕೊಂಡು ಹೋಗಿದ್ದಾರೆಂದು ಹೇಳಲಾಗುತ್ತಿದೆ. ಸಿಎಂ ಹಾದು ಹೋಗುತ್ತಿದ್ದ ವೇಳೆ ಶಾಸಕರು ಸೇರಿದಂತೆ ಮೂರು ಕಾರುಗಳು ಭದ್ರತಾ ಶಿಷ್ಟಾಚಾರವನ್ನು ಸ್ಪಷ್ಟವಾಗಿ ಉಲ್ಲಂಘಿಸಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ರೆಡ್ಡಿ ಅವರು ಮುಂದಿನ ಸೀಟಿನಲ್ಲಿ ಕುಳಿತಿದ್ದರು ಮತ್ತು ಅವರ ಕಾರು ರಾಂಗ್ ಸೈಡ್‌ನಲ್ಲಿ ಬಂದ ನಂತರ ಅವರ ಬೆಂಬಲಿಗರ ಎರಡು ಕಾರುಗಳು ರೆಡ್ಡಿ ಅವರನ್ನು ಹಿಂಬಾಲಿಸಿದವು. ಇದೀಗ ಎಲ್ಲಾ ಮೂರು ಕಾರು ಮಾಲೀಕರಿಗೆ ನೋಟಿಸ್ ಜಾರಿ ಮಾಡಲಾಗಿದ್ದು, ಐಪಿಸಿ ಸೆಕ್ಷನ್ 281 ಮತ್ತು 279ರ ಅಡಿಯಲ್ಲಿ ರ‍್ಯಾಶ್ ಡ್ರೈವಿಂಗ್ ಮತ್ತು ರಾಂಗ್ ಸೈಡ್ ಚಾಲನೆಗಾಗಿ ಪ್ರಕರಣಗಳನ್ನು ದಾಖಲಿಸಿದ್ದಾರೆ. ಇದೇ ವೇಳೆ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ್ ಎಸ್ ತಂಗಡಗಿ ಘಟನೆಯನ್ನು ಖಂಡಿಸಿದ್ದು, ಮಾಜಿ ಸಚಿವರಾಗಿದ್ದ ರೆಡ್ಡಿ ಅವರು ನಿಯಮ ಪಾಲಿಸಬೇಕಿತ್ತು ಎಂದು ಹೇಳಿದ್ದಾರೆ. ಸಚಿವ ಬಿಝಡ್ ಜಮೀರ್ ಅಹಮದ್ ಖಾನ್ ಕೂಡ ರೆಡ್ಡಿ ಅವರ ವರ್ತನೆಗೆ ಖಂಡನೆ ವ್ಯಕ್ತಪಡಿಸಿದ್ದಾರೆ. ಅಧಿಕಾರದಲ್ಲಿದ್ದಾಗ ಹೇಗೆ ನಡೆದುಕೊಂಡರು ಎಂಬುದನ್ನು ಜನ ನೋಡಿದ್ದಾರೆ. ಮನುಷ್ಯ ಎಷ್ಟೇ ದೊಡ್ಡವನಾದರೂ, ತಗ್ಗಿಬಗ್ಗಿ ನಡೆಯಬೇಕು, ಇದು ಜನಾರ್ದನ ರೆಡ್ಡಿಗೆ ಗೊತ್ತಿಲ್ಲ. ಈಗ ದೇವರ ದಯೆಯಿಂದ ಬಳ್ಳಾರಿ ಪ್ರವೇಶಿಸಲು ಅನುಮತಿ ಸಿಕ್ಕಿದೆ. ಇನ್ನಾದರೂ ಅಹಂಕಾರ ಬಿಟ್ಟು ಬದುಕಲಿ ಎಂದು ಹೇಳಿದರು. ಇನ್ನು ರೆಡ್ಡಿ ವರ್ತನೆಯನ್ನು ಅವರ ಬೆಂಬಲಿಗರು ಸಮರ್ಥಿಸಿಕೊಂಡಿದ್ದಾರೆ. ಶಾಸಕರು 20 ನಿಮಿಷಗಳ ಕಾಲ ಕಾಯುತ್ತಿದ್ದರು. ಭದ್ರತೆ ಮತ್ತು ಝೀರೋ ಟ್ರಾಫಿಕ್ ಹೆಸರಿನಲ್ಲಿ ಪೊಲೀಸರು ಟ್ರಾಫಿಕ್ ಅನ್ನು ದೀರ್ಘಕಾಲದವರೆಗೆ ತಡೆಹಿಡಿಯುತ್ತಾರೆ, ಈ ಸಮಸ್ಯೆಯನ್ನು ಪರಿಹರಿಸಬೇಕಾಗಿದೆ ಎಂದು ಕೊಪ್ಪಳ ನಿವಾಸಿಯೊಬ್ಬರು ಹೇಳಿದ್ದಾರೆ.

ದರ್ಶನ್–ಪವಿತ್ರಾ ಜಾಮೀನು ಅರ್ಜಿ ವಿಚಾರಣೆ ಮುಂದೂಡಿಕೆ



ಬೆಂಗಳೂರು, ಅ.8– ರೇಣುಕಾಸ್ವಾಮಿ ಕೊಲೆ ಆರೋಪಿ ನಟ ದರ್ಶನ್, ಪವಿತ್ರಾ ಹಾಗೂ ಇತರೆ ಕೆಲವರ ಜಾಮೀನು ಅರ್ಜಿ ವಿಚಾರಣೆಯನ್ನು ನ್ಯಾಯಾಲಯ ಮತ್ತೊಮ್ಮೆ ಮುಂದೂಡಿದೆ.

ಇಂದು (ಅ. 8) ಪ್ರಕರಣದ ಕೆಲ ಆರೋಪಿಗಳ ಜಾಮೀನು ಅರ್ಜಿ ವಿಚಾರಣೆ ನಡೆಯಿತು. ಬಳಿಕ ಪ್ರಕರಣದ ಎಸ್‌ಪಿಪಿ ಪ್ರಸನ್ನಕುಮಾರ್ ಅವರು ವಾದ ಸರಣಿ ಆರಂಭಿಸಿ, ದರ್ಶನ್ ಹಾಗೂ ಪವಿತ್ರಾ ಪರ ವಕೀಲರು ಪ್ರಕರಣದ ತನಿಖೆ ಬಗ್ಗೆ ಎತ್ತಿದ್ದ ಪ್ರಶ್ನೆಗಳಿಗೆ ಉತ್ತರಗಳನ್ನು ನೀಡಲು ಪ್ರಾರಂಭಿಸಿದರು.

ಎಸ್‌ಪಿಪಿ ಅವರ ವಾದ ಸರಣಿ ಸುದೀರ್ಘವಾಗಿ ನಡೆದಿದ್ದು, ಅಂತಿಮವಾಗಿ ನ್ಯಾಯಾಲಯದ ಸಮಯ ಮೀರಿದ ಕಾರಣ ಪ್ರಕರಣದ ವಿಚಾರಣೆಯನ್ನು ನಾಳೆ ಅಂದರೆ ಅ. 9ರ ಮಧ್ಯಾಹ್ನ 12:30ಕ್ಕೆ ಮುಂದೂಡಲಾಯ್ತು.

ಅಕ್ಟೋಬರ್ ಮೂರು, ನಾಲ್ಕು, ಐದರಂದು ನಡೆದ ವಿಚಾರಣೆಯಲ್ಲಿ ದರ್ಶನ್ ಪರ ಹಿರಿಯ ವಕೀಲರಾದ ಸಿವಿ ನಾಗೇಶ್, ಪವಿತ್ರಾ ಪರ ವಕೀಲರು ತನಿಖೆಯಲ್ಲಿ ಹಲವು ಲೋಪದೋಷಗಳಿವೆ ಎಂದಿದ್ದರು. ದರ್ಶನ್ ಪರ ವಕೀಲರಾದ ಸಿವಿ ನಾಗೇಶ್ ಅವರು, ಪೊಲೀಸರೇ ಸಾಕ್ಷ್ಯಗಳನ್ನು ಸೃಷ್ಟಿಮಾಡಿದ್ದಾರೆ, ಕತೆ ಹೆಣೆದಿದ್ದಾರೆ ಎಂದು ಟೀಕೆ ಮಾಡಿದ್ದರು. ಪೊಲೀಸರು ಸಲ್ಲಿಸಿದ್ದ ಆರೋಪ ಪಟ್ಟಿಯನ್ನು ಅರೇಬಿಯನ್ ನೈಟ್ಸ್ ಕತೆಗೆ ಹೋಲಿಕೆ ಮಾಡಿದ್ದರು. ಇಂದು ವಾದ ಮಂಡಿಸಿದ ಎಸ್‌ಪಿಪಿ ಪ್ರಸನ್ನ ಕುಮಾರ್, ಆರೋಪಿಗಳ ಪರ ವಕೀಲರು ಎತ್ತಿರುವ ಪ್ರತಿ ಪ್ರಶ್ನೆಗೂ ಸಹ ಉತ್ತರ ಇದೆ ಎಂದು ಹೇಳಿಯೇ ವಾದ ಆರಂಭಿಸಿದರು. ಸಿವಿ ನಾಗೇಶ್ ಅವರು ಪ್ರಶ್ನೆ ಮಾಡಿದ್ದ, ಎತ್ತಿತೋರಿಸಿದ್ದ ಲೋಪದೋಷಗಳಿಗೆ ಬಹುತೇಕ ಉತ್ತರಗಳನ್ನು ಸ್ಪಷ್ಟತೆಯನ್ನು ಎಸ್‌ಪಿಪಿ ನೀಡಿದರು.